ಸಂಪುಟ: 04 ಸಂಚಿಕೆ: 288 ಪುಟಗಳು: 08 ಮಂಗಳವಾರ 31 ಡಿಸೆಂಬರ್ 2024

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

**ಮುಂಜಾನೆ ಮಾತು**

ವೈಯಕ್ತಿಕವಾಗಿ ಯಾರೊಬ್ಬರನ್ನು ಪ್ರೀತಿಸುವುದು ಬಂಧನ. ಎಲ್ಲಾರನ್ನೂ ಸಮಾನವಾಗಿ ಪ್ರೀತಿಸಿ. ಆಗ ಎಲ್ಲಾ ಆಸೆಗಳು ಬಿದ್ದು ಹೋಗುತ್ತವೆ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಗುತ್ತಿಗೆದಾರನ ಸಾವಿಗೂ ಪ್ರಿಯಾಂಕ್ ಖರ್ಗೆಗೂ ಸಂಬಂಧವಿಲ್ಲ ಎಂದ ಡಿಸಿಎಂ

• ಉದಯವಾಹಿನಿ, ಬೆಂಗಳೂರು

ನಮ್ಮದು ಸ್ವಚ್ಛ ಆಡಳಿತದ ಸರ್ಕಾರ ಗುತ್ತಿಗೆದಾರನ ಸಾವಿಗೂ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್,. ಈ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಅವರ ಪಾತ್ರವಿಲ್ಲ. ಆತ್ಮಹತ್ಯೆ ಪತ್ರದಲ್ಲಿ ಅವರ ವಿರುದ್ಧ ನೇರ ಆರೋಪವಿಲ್ಲ. ಬೇರೆಯವರ ಮೇಲೆ ಆರೋಪ ಮಾಡಿದಾಕ್ಷಣ ಇವರು ರಾಜೀನಾಮೆ ನೀಡಲು ಸಾಧ್ಯವಿಲ್ಲ. ಪ್ರಿಯಾಂಕ್ ಖರ್ಗೆ ಅವರ ಪ್ರಾಮಾಣಿಕತೆ ಬಗ್ಗೆ ನಮಗೆ ಗೊತ್ತಿದೆ. ಗುತ್ತಿಗೆದಾರನ ಸಾವಿನ ಬಗ್ಗೆ, ಕಾನೂನು ಪ್ರಕಾರ ತನಿಖೆ ನಡೆಯುತ್ತದೆ ಎಂದರು. ಸಾವಿಗೆ ಕಾರಣವಾಗಿರುವ ಆರೋಪ ಹೊತ್ತಿರುವ ರಾಜು ಕಪನೂರ್ ಸಿಎಂ ಹಾಗೂ ಪ್ರಿಯಾಂಕ ಖರ್ಗೆ ಜತೆ ಇರುವ ಫೋಟೋಗಳನ್ನು ಬಿ.ವೈ.ವಿಜಯೇಂದ್ರ ಬಿಡುಗಡೆ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಡಿಸಿಎಂ, ನನ್ನ ಜೊತೆ ವಿಜಯೇಂದ್ರ, ಯಡಿಯೂರಪ್ಪ ಅವರು ಇರುವ ಫೋಟೋಗಳಿವೆ. ನಮ್ಮ ಮನೆಗೆ ಬಂದವರು, ಮದುವೆ ಕಾರ್ಯಕ್ರಮಕ್ಕೆ ಹೋದಾಗ ಅನೇಕರು ನಮ್ಮ ಜೊತೆ ಫೋಟೋ ತೆಗೆಸಿಕೊಳ್ಳುತ್ತಾರೆ. ವಿಜಯೇಂದ್ರ, ಯಡಿಯೂರಪ್ಪ ಅವರು ಕ್ರಿಮಿನಲ್, ರೌಡಿಗಳು ಸೇರಿದಂತೆ ಯಾರೆಲ್ಲರ ಜತೆ ಫೋಟೋ ತೆಗೆಸಿಕೊಂಡಿದ್ದಾರೆ ಎಂದು ನಾನು ಬಿಡುಗಡೆ ಮಾಡಲೇ? ಅವರಿಗೆ ಬೇಕು ಎಂದರೆ ಬಿಡುಗಡೆ ಮಾಡುತ್ತೇನೆ.

## ಐಶ್ವರ್ಯಾ ಗೌಡ ವಿರುದ್ಧ ಮಾಜಿ ಸಂಸದ ಡಿ.ಕೆ. ಸುರೇಶ್ ದೂರು

• ಉದಯವಾಹಿನಿ, ಬೆಂಗಳೂರು


ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಹೆಸರು ಹೇಳಿ ಚಿನ್ನದಂಗಡಿ ಮಾಲಕಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಶ್ವರ್ಯಾ ಗೌಡ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮಾಜಿ ಸಂಸದ ಡಿ.ಕೆ. ಸುರೇಶ್ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ. ಮಾಜಿ ಸಂಸದ ಡಿ.ಕೆ. ಸುರೇಶ್ ಪೊಲೀಸ್ ಆಯುಕ್ತರಾಗಿರುವ ಬಿ.ದಯಾನಂದ ಅವರಿಗೆ ಪತ್ರದ ಮೂಲಕ ದೂರು ನೀಡಿದ್ದಾರೆ. ಐಶ್ವರ್ಯಾ ಗೌಡ ಉರುಫ್ ನವ್ಯ ಶ್ರೀ ಎಂಬುವವರು ನನ್ನ ಹೆಸರನ್ನು ದುರುಪಯೋಗ ಮಾಡಿಕೊಂಡು ಹಲವಾರು ಜನರಿಗೆ ಚಿನ್ನಾಭರಣ ಹಾಗೂ ಹಣ ವಂಚನೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗುತ್ತಿವೆ. ಹೀಗಾಗಿ, ನನ್ನ ಹೆಸರು ಬಳಸಿಕೊಂಡು ವಂಚನೆ ನಡೆಸಿರುವವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಜನರಿಗೆ ಇಂತಹ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ದೂರು ಪತ್ರದಲ್ಲಿ ಡಿ.ಕೆ.ಸುರೇಶ್ ಮನವಿ ಮಾಡಿದ್ದಾರೆ.

## ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಪ್ರಕರಣ

• ಉದಯವಾಹಿನಿ, ಬೆಂಗಳೂರು

ಸಚಿವ ಲಕ್ಷ್ಮೀ ಹೆಬ್ಬಾಳಕರ್ ಬಗ್ಗೆ ಅಶ್ಲೀಲ ಪದ ಬಳಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಎಂಎಲ್ ಸಿ ಸಿ.ಟಿ.ರವಿ ರಾಜ್ಯಪಾಲರನ್ನು ಭೇಟಿಯಾಗಿದ್ದಾರೆ. ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ವೇಳೆ ಡಿ.19ರಂದು ವಿಧಾನಪರಿಷತ್ ಕಲಾಪದ ಸಂದರ್ಭದಲ್ಲಿ ಎಂಎಲ್ ಸಿ ಸಿ.ಟಿ.ರವಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿದ್ದರು.

ಪ್ರಕರಣ ಸಂಬಂಧ ಸಿ.ಟಿ.ರವಿ ಬಂಧನವಾಗಿತ್ತು. ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಈ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿದೆ. ಈ ನಡುವೆ ರಾಜ್ಯ ಬಿಜೆಪಿ ನಾಯಕರು ರಾಜ್ಯಪಾಲರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದರು. ಈ ಎಲ್ಲಾ ಬೆಳವಣಿಗೆ ಬಳಿಕ ಇದೀಗ ಎಂಎಲ್ ಸಿ ಸಿ.ಟಿ.ರವಿ ರಾಜ್ಯಪಾಲ ಥಾವರ್ ಚಂದ್ ಗೆಹೋಟ್ ಅವರನ್ನು ಭೇಟಿಯಾಗಿದ್ದಾರೆ. ರಾಜಭವನಕ್ಕೆ ಆಗಮಿಸಿದ ಸಿ.ಟಿ.ರವಿ ರಾಜ್ಯಪಾಲರನ್ನು ಭೇಟಿಯಾಗಿ ಅಂದು ನಡೆದ ಘಟನೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ.







# ಕೈ ಕಮಲ ಜಟಾಪಟಿ

## ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆದು ಸಿಬಿಐ ತನಿಖೆಗೆವಹಿಸುವಂತೆ ಬಿಜೆಪಿ ಆಗ್ರಹ



• ಉದಯವಾಹಿನಿ, ಬೆಂಗಳೂರು

ಗುತ್ತಿಗೆದಾರ ಸಚಿನ್ ಸಾವಿನ ಪ್ರಕರಣದ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆಯವರ ರಾಜೀನಾಮೆ ಪಡೆದು, ದುರ್ಘಟನೆಯ ಸಿಬಿಐ ತನಿಖೆಗೆ ವಹಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಕ್ಕಾಗಿ ಸಿಬಿಐ ತನಿಖೆಗೆ ಸಚಿನ್ ಕುಟುಂಬವೂ ಒತ್ತಾಯಿಸಿದೆ. ಹಿಂದೆ, ಸರ್ಕಾರದ ಸಚಿವ ನಾಗೇಂದ್ರ ಅವರೂ ವಾಲ್ಮೀಕಿ ನಿಗಮದ ಹಗರಣದಲ್ಲಿ ಸಿಲುಕಿ ರಾಜೀನಾಮೆ ಕೊಟ್ಟಿದ್ದಾರೆ. ಒಂದು ಕ್ಷಣವೂ ತಡ ಮಾಡದೇ, ಪ್ರಿಯಾಂಕ್ ಖರ್ಗೆಯವರ ರಾಜೀನಾಮೆ ಪಡೆದುಕೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು. ಯಾರನ್ನೋ ಉಳಿಸುವ, ರಕ್ಷಿಸುವ ದುಸ್ಸಾಹಸ ಬೇಡ ಎಂದು ಎಚ್ಚರಿಸಿದರು.

**ಮೇಧಾವಿ ಪ್ರಿಯಾಂಕ್ ಖರ್ಗೆಯವರಿಗೆ ಮರೆವು ಜಾಸ್ತಿ :** ಮೇಧಾವಿ ಪ್ರಿಯಾಂಕ್ ಖರ್ಗೆಯವರಿಗೆ ಮರೆವು ಜಾಸ್ತಿ. ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಈಶ್ವರಪ್ಪ ಅವರ ಮೇಲೆ ಆರೋಪ ಬಂದಾಗ, ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟದ್ದನ್ನು ಪ್ರಿಯಾಂಕ್ ಮರೆಯಬಾರದು. ಮಡಿಕೇರಿಯಲ್ಲಿ ಪೊಲೀಸ್ ಅಧಿಕಾರಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಿದ್ದು, ಇದೇ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಆ ಪ್ರಕರಣದಲ್ಲಿ ಅಂದಿನ ಗೃಹ ಸಚಿವ ಜಾರ್ಜ್ ಅವರು ಕೂಡ ರಾಜೀನಾಮೆ ಕೊಟ್ಟು, ಸಿಬಿಐ ತನಿಖೆ ಆಗಿ ಕ್ಲೀನ್ ಚಿಟ್ ಬಂದಿತ್ತು ಎಂದು ಹೇಳಿದರು.

**ಸಚಿನ್ ಕುಟುಂಬಕ್ಕೆ ಭದ್ರತೆ :** ಸಚಿನ್ ಅವರ ಕುಟುಂಬಕ್ಕೆ ತಕ್ಷಣದಿಂದ ಭದ್ರತೆ ಕೊಡಬೇಕು. ಕುಟುಂಬಕ್ಕೆ 1 ಕೋಟಿ ರೂ.ಗಳ ಪರಿಹಾರ ನೀಡಬೇಕು. ಹಲವರು ವಿದ್ಯಾವಂತರಿದ್ದು, ಕುಟುಂಬದ ಒಬ್ಬರು ಸದಸ್ಯರಿಗೆ ಸರಕಾರಿ ನೌಕರಿ ಕೊಡಬೇಕು ಎಂದು ಒತ್ತಾಯಿಸಿದರು. ಹಿಂದೂ ಸಮಾಜದ ಸಿದ್ಧಲಿಂಗ ಸ್ವಾಮೀಜಿ, ಶಾಸಕ ಬಸವರಾಜ ಮತ್ತಿಮೂಡ, ಕಲಬುರ್ಗಿಯ ಬಿಜೆಪಿ ನಾಯಕರಾದ ಚಂದುಪಾಟೀಲ, ಮಣಿಕಂಠ ರಾಠೋಡ್ ಅವರ ಕೊಲೆಗೆ ಸಂಚು ರೂಪಿಸಿದ್ದಾಗಿ ಡೆತ್ ನೋಟ್ ತಿಳಿಸಿದೆ. ಸಿದ್ಧಲಿಂಗ ಸ್ವಾಮೀಜಿ ಅವರ ಧ್ವನಿ ಅಡಗಿಸಲು ಮಹಾರಾಷ್ಟ್ರದ ಸುಪಾರಿ ಕಿಲ್ಲರ್‌ಗಳನ್ನು ಬಳಸುವ ವಿಚಾರವೂ ಡೆತ್ ನೋಟಿನಲ್ಲಿದೆ. ಹಾಗಾಗಿ ಇದೊಂದು ಗಂಭೀರ ವಿಚಾರ. ಆದ್ದರಿಂದ ಇದರ ಸಿಬಿಐ ತನಿಖೆ ಅತ್ಯಗತ್ಯ ಎಂದರು. ರಾಜ್ಯದ ಪೊಲೀಸ್ ಇಲಾಖೆಯಿಂದ ಅಂಥ ಶಕ್ತಿಶಾಲಿ ಖರ್ಗೆ ಕುಟುಂಬದ ವಿರುದ್ಧ ತನಿಖೆ ಮಾಡಲು ಸಾಧ್ಯವಿಲ್ಲ ಎಂದು ಕೋರ್ಟ್, ಹೈಕೋರ್ಟ್ ಎಂದು ಪ್ರಶ್ನಿಸಿದರು. ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಗುತ್ತಿಗೆದಾರ ಸಚಿನ್ ಪಾಂಚಾಳ ಅವರು ಆತ್ಮಹತ್ಯೆ ಪ್ರಕರಣ ದೇಶಾದ್ಯಂತ ಸುದ್ದಿಯಾಗಿದೆ. ಅವರು ಬರೆದಿಟ್ಟ 7 ಪುಟಗಳ ಡೆತ್ ನೋಟಿನಲ್ಲಿ ಕಿರುಕುಳದ ಉಲ್ಲೇಖವಿದೆ. ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿ ಬರೆದಿಟ್ಟ ಡೆತ್ ನೋಟಿನ ಮಾಹಿತಿ ಸತ್ಯಕ್ಕೆ ದೂರವಾಗುವ ಸಾಧ್ಯತೆ ಇಲ್ಲ ಎಂದು ತಿಳಿಸಿದರು.

ನಾನು, ವಿಪಕ್ಷ ನಾಯಕರು, ವಿಧಾನಪರಿಷತ್ ಸದಸ್ಯ ರವಿಕುಮಾರ್, ಸ್ಥಳೀಯ ಶಾಸಕರು, ಪಕ್ಷದ ಅಧ್ಯಕ್ಷರು, ಭಾಲ್ಕಿ ತಾಲ್ಲೂಕಿನ ಮೃತರ ಗ್ರಾಮಕ್ಕೆ ಭೇಟಿ ಕೊಟ್ಟಿದ್ದೇವೆ. ಸಚಿನ್ ಅವರ ಕುಟುಂಬವನ್ನು ಭೇಟಿ ಮಾಡಿದ್ದೇವೆ. ಆ ಹಿಂದುಳಿದ ವರ್ಗದ ಬಡ ಕುಟುಂಬದಲ್ಲಿ ಸಚಿನ್‌ಗೆ 5 ಜನರು ಸಹೋದರಿಯರಿದ್ದಾರೆ ಎಂದು ವಿವರಿಸಿದರು. ಬಿಜೆಪಿಯವರಿಗೆ ರಾಜಕೀಯ ತೆವಲು, ಚಟ, ಹಿಟ್ ಅಂಡ್ ರನ್ ಎಂದು ಕಾಂಗ್ರೆಸ್ಸಿನವರು ಮಾತನಾಡುತ್ತಾರೆ ಎಂದರು.

ಸಚಿನ್ ಜಾಲತಾಣದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಪೋಸ್ಟ್ ಹಾಕಿಕೊಂಡಿದ್ದಾಗ ಅವರ ಇಬ್ಬರು ಸಹೋದರಿಯರು ಮಧ್ಯಾಹ್ನವೇ 2.15ಕ್ಕೆ ಪೊಲೀಸ್ ಠಾಣೆಗೆ ಧಾವಿಸಿದ್ದರು. ಗೋಗರೆದು ಕೇಳಿದರೂ ಅವರ ಮನವಿಯನ್ನು ಕಿಂಚಿತ್ತೂ ಲೆಕ್ಕಿಸದೇ, ಅಮಾನವೀಯವಾಗಿ ಪಿಎಸ್ಐ ನಡೆದುಕೊಂಡಿದ್ದಾರೆ ಎಂದು ಆರೋಪಿಸಿದರು. ಅವರನ್ನು ಪೊಲೀಸ್ ಸ್ಟೇಷನ್‌ಗಳಿಗೆ ತಿರುಗಾಡಿಸಿದ್ದರು ಎಂದು ಟೀಕಿಸಿದರು.

**ಪ್ರಿಯಾಂಕ್ ಖರ್ಗೆ ಸರ್ವ ಇಲಾಖೆಯ ಸಚಿವರು :** ಪ್ರಿಯಾಂಕ್ ಖರ್ಗೆಯವರ ಇಲಾಖೆ ಗ್ರಾಮೀಣಾಭಿವೃದ್ಧಿ ಮತ್ತು ಐಟಿ, ಬಿಟಿ ಮಾತ್ರವಲ್ಲ; ಅವರು ಸರ್ವ ಇಲಾಖೆಯ ಸಚಿವರು. ಸದನದಲ್ಲಿ ಗೃಹ ಸಚಿವರಿದ್ದರೂ, ಸಿಎಂ ಕುರಿತು ಪ್ರಶ್ನೆ ಇದ್ದರೂ ಅವರ ಪರವಾಗಿ ಇವರು ಎದ್ದೇಳುತ್ತಾರೆ; ಗಲಾಟೆ ಮಾಡುತ್ತಾರೆ ಎಂದು ವಿಜಯೇಂದ್ರ ಟೀಕಿಸಿದರು.

ಪ್ರಿಯಾಂಕ್ ಖರ್ಗೆ ಅವರು ಬಹಳ ಜ್ಞಾನಿ, ಮೇಧಾವಿ, ಬುದ್ಧಿವಂತರು, ಅಷ್ಟೇ ಪ್ರಭಾವಿ, ಶಕ್ತಿಶಾಲಿ ಮುಖಂಡ ಎಂದು ತಿಳಿಸಿದರು. ಯಡಿಯೂರಪ್ಪ ಅವರ ಪೋಸ್ಕೊ ಕೇಸ್ ಮುಚ್ಚಿಹಾಕಲು ಎಂಬ ಮಾತನ್ನು ಪ್ರಿಯಾಂಕ್ ಖರ್ಗೆಯವರು ಹೇಳಿದ್ದು, ಅವರು ಸುಪ್ರೀಂ

**ಸಂಪುಟದಿಂದ ಪ್ರಿಯಾಂಕ್ ಕೈಬಿಡಿ ಬಿವೈವಿ ಕಿಡಿ**

1 ಸ್ವಂತ ಸಹೋದರರ ವಂಚನೆ ಪ್ರಕರಣ ಹೊರಗೆ ಬಂದಾಗ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ರಾಜೀನಾಮೆ ನೀಡಿದ್ದಾರೆ.

2 ತಂದೆಯ ವಿರುದ್ಧ ಪೋಕ್ಸೋ ಪ್ರಕರಣ ನ್ಯಾಯಾಲಯದಲ್ಲಿದೆ, ಮಗ ವಿಜಯೇಂದ್ರ, ರಾಜೀನಾಮೆ ನೀಡಿದ್ದರೇ

3 ಮುನಿರತ್ನ ಮತ್ತು ಅವರಿಂದ ಸಂಕಷ್ಟಕ್ಕೆ ಒಳಗಾಗಿರುವ ಕುಟುಂಬದ ಮನೆಗೆ ಹೋಗಿ ಸತ್ಯ ಶೋಧನೆ ನಡೆಸಲಿ

### ದೂರು ಸ್ವೀಕರಿಸಿಲ್ಲ

ಸಚಿನ್ ಹುಡುಕುವ ಕೆಲಸವನ್ನೂ ಮಾಡಿಲ್ಲ. ಪೊಲೀಸ್ ಅಧಿಕಾರಿಗಳ ವರ್ತನೆ ಖಂಡನೀಯ. ಕಾಂಗ್ರೆಸ್ ಹಿರಿಯ ಮುಖಂಡ, ಖರ್ಗೆ ಕುಟುಂಬಕ್ಕೆ ಹತ್ತಿರ ಇರುವ ರಾಜು ಕಪನೂರ್ ಈ ಪ್ರಕರಣದ ಹಿಂದಿನ ಪ್ರಮುಖ ಆರೋಪಿ ಎಂಬುದು ಡೆತ್ ನೋಟಿನಲ್ಲಿದೆ ಎಂದು ತಿಳಿಸಿದರು. ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿದ ಬಡ ಕುಟುಂಬಕ್ಕೆ ಅನ್ಯಾಯವಾಗಿದೆ. ಕುಟುಂಬದ ಆಧಾರಸ್ತಂಭ ಕುಸಿದಿದೆ. ಹಾಗಾಗಿ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಲು ನಾವು ಒತ್ತಾಯಿಸುತ್ತಿದ್ದೇವೆ. ದೆಹಲಿಯಲ್ಲಿ ಪ್ರಮುಖ ಸಭೆ ಇದ್ದರೂ ಇಲ್ಲಿ ಬಂದಿದ್ದೇನೆ. ಭಾಲ್ಕಿಗೆ ಹೋಗಿ ಬಂದಿದ್ದೇವೆ ಎಂದ ಅವರು, ರಾಜು ಕಪನೂರ್, ಖರ್ಗೆ ಕುಟುಂಬಕ್ಕೆ ಪರಮಾಪ್ತ. ಬಡ ಸಚಿನ್ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವ ಪ್ರಾಮಾಣಿಕ ಇಚ್ಛೆ ನಮ್ಮದು ಎಂದರು.



### ಆತ್ಮಹತ್ಯೆ ಭಾಗ್ಯ ನೀಡಿದ ಕಾಂಗ್ರೆಸ್ ಸರ್ಕಾರ

ರಾಜ್ಯದ ಕಾಂಗ್ರೆಸ್ ಸರ್ಕಾರ ಆಡಳಿತಾವಧಿಯಲ್ಲಿ ಸರ್ಕಾರಿ ಪ್ರಾಯೋಜಿತ ಆತ್ಮಹತ್ಯೆಗಳು ಅಥವಾ ರಾಜ್ಯ ಸರ್ಕಾರದ ಕುಮ್ಮಕ್ಕಿನ ಆತ್ಮಹತ್ಯೆ ಪ್ರಕರಣಗಳು ದಿನೇ ದಿನೆ ಹೆಚ್ಚಾಗುತ್ತಿದೆ. ಸರ್ಕಾರ, ಸಚಿವರು, ಆಡಳಿತ ಪಕ್ಷದ ಶಾಸಕರ ಕುಮ್ಮಕ್ಕಿನಿಂದ ಹಿಂದೆಂದೂ ಇಂಥ ಸರಣಿ ಆತ್ಮಹತ್ಯೆ ಪ್ರಕರಣಗಳನ್ನು ಕೇಳಿರಲಿಲ್ಲ, ನೋಡಿರಲಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಬಳಿಕ ರಾಜ್ಯ ಸರ್ಕಾರವು ಆತ್ಮಹತ್ಯೆ ಭಾಗ್ಯವನ್ನು ಕರ್ನಾಟಕ ರಾಜ್ಯಕ್ಕೆ ದಯಪಾಲಿಸಿದೆ ಎಂದು ಅವರು ವಾಗ್ದಾಳಿ ನಡೆಸಿದರು. ಭ್ರಷ್ಟಾಚಾರ ಬಯಲಾದುದರಿಂದ ವಾಲ್ಮೀಕಿ ನಿಗಮದ ಅಕೌಂಟೆಂಟ್ ಚಂದ್ರಶೇಖರ್ ಮೊದಲ ಆತ್ಮಹತ್ಯೆ ಮಾಡಿಕೊಂಡಿದ್ದು, ಬಿಜೆಪಿ ಹೋರಾಟದಿಂದ ಸಚಿವ ನಾಗೇಂದ್ರ ರಾಜೀನಾಮೆ ಕೊಟ್ಟಿದ್ದರು. ಬಳಿಕ ಲಕ್ಷ್ಮಿ ಹೆಬ್ಬಾಳ್ಕರ್ ಪಿ.ಎ. ಹೆಸರು ಬರೆದಿಟ್ಟು ರುದ್ರಣ್ಣ ಯಡವಣ್ಣವರ್ ಆತ್ಮಹತ್ಯೆ ಮಾಡಿಕೊಂಡಿದ್ದರು.

### ಸಚಿವರ ನಿವಾಸಕ್ಕೆ ಮುತ್ತಿಗೆ

ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣದ ತನಿಖೆ ಸಿಬಿಐಗೆ ನೀಡದೇ ಇದ್ದರೆ ಜ.4 ರಂದು ಕಲಬುರಗಿಯಲ್ಲಿ ಬೃಹತ್ ಪ್ರತಿಭಟನೆ ನಡೆಸುತ್ತೇವೆ. ಸಿಎಂ ಸಿದ್ದರಾಮಯ್ಯನವರು ಸಿಬಿಐ ತನಿಖೆಗೆ ಆದೇಶಿಸಿದರೆ ಒಳ್ಳೆಯದು. ಜನವರಿ 3ರವರೆಗೂ ಕಾಯುತ್ತೇವೆ. ಸಿಬಿಐಗೆ ನೀಡದೇ ಇದ್ದರೆ ಜ.4 ರಂದು ಸಚಿವ ಪ್ರಿಯಾಂಕ್ ಖರ್ಗೆ ನಿವಾಸಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

## ಇಯರ್ ಎಂಡ್ ಅಂತ ಕುಡಿದು ವಾಹನ ಚಲಾಯಿಸಿದ್ರೆ, ಬೀಳುತ್ತೆ ಕೇಸ್!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಹೊಸ ವರ್ಷಾಚರಣೆಗೆ ಈಗಾಗಲೇ ಸಕಲ ಸಿದ್ಧತೆ ಆರಂಭವಾಗಿದೆ ನೀವು ಪಾರ್ಟಿ ಮಾಡಲು ಸೆಲೆಬ್ರೇಷನ್ ಮಾಡಲು ರೆಡಿ ಆಗ್ತಿದ್ದಂತೆ ಸಂಚಾರಿ ಪೊಲೀಸರು ಕೂಡ ಅಲರ್ಟ್ ಆಗಿದ್ದಾರೆ. ಒಂದು ವೇಳೆ ನೀವು ಕುಡಿದು ಗಾಡಿ ಚಲಾಯಿಸಿದ್ರೆ ಅಷ್ಟೇ ಕತೆ. ಪೊಲೀಸರು ನಿಮ್ಮ ಗಾಡಿಯನ್ನು ಸೀಜ್ ಮಾಡಿ ಕೇಸ್ ಹಾಕಲಿದ್ದಾರೆ. ಈ ನಿಟ್ಟಿನಲ್ಲಿ ಪೊಲೀಸರು ಫುಲ್ ಅಲರ್ಟ್ ಆಗಿದ್ದಾರೆ. ಡಿ.31ರ ರಾತ್ರಿ ಡ್ರಿಂಕ್ ಅಂಡ್ ಡ್ರೈವ್ ಪ್ರಕರಣಗಳನ್ನು ಪರಿಶೀಲಿಸಲು ಪೊಲೀಸರು



ಬೆಂಗಳೂರಿನಲ್ಲಿ ಚೆಕ್ ಪೋಸ್ಟ್‌ಗಳನ್ನು ಗುರುತಿಸಿದ್ದಾರೆ. ಬೆಂಗಳೂರು ನಗರದಾದ್ಯಂತ ಪೊಲೀಸರು ವಾಹನಗಳನ್ನು ತಪಾಸಣೆ ಮಾಡುತ್ತಿದ್ದು ಕುಡಿದು ವಾಹನ ಚಲಾಯಿಸಿ ಪೊಲೀಸರಿಗೆ ಸಿಕ್ಕಿಬಿದ್ದರೆ ದಂಡ ವಿಧಿಸಿ ಗಾಡಿಯನ್ನು ಸೀಜ್ ಮಾಡಲಾಗುತ್ತದೆ, ನಂತರ ನೀವು ಕೋರ್ಟ್ ನಲ್ಲಿ ದಂಡ ಪಾವತಿ ಮಾಡಿ ವಾಹನ ಬಿಡಿಸಿಕೊಳ್ಳಬೇಕಾಗುತ್ತದೆ. ನಗರದಾದ್ಯಂತ ಟ್ರಾಫಿಕ್ ಪೊಲೀಸರು ಡ್ರಂಕ್ ಅಂಡ್ ಡ್ರೈವ್ ಟೆಸ್ಟ್ ಆರಂಭಿಸಿದ್ದಾರೆ. ದಿ: 29-12-2024 ರಂದು ಉತ್ತರ ವಿಭಾಗದ ಟ್ರಾಫಿಕ್‌ನಲ್ಲಿ ಮಧ್ಯಪಾನ ಮಾಡಿ ವಾಹನ ಚಲಾಯಿಸುತ್ತಿದ್ದ ಚಾಲಕರು ಪ್ರಯಾಣಿಕರ ವಿರುದ್ಧ ವಿಶೇಷ ಕಾರ್ಯಾಚರಣೆಯನ್ನು ನಡೆಸಲಾಯಿತು ಮತ್ತು 2745 ವಾಹನಗಳನ್ನು ಪರಿಶೀಲಿಸಿ, 46 ಜನರನ್ನು ಪತ್ತೆ ಹಚ್ಚಲಾಯಿತು. ಮದ್ಯದ ಅಮಲಿನಲ್ಲಿದ್ದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಬೆಂಗಳೂರು ನಗರ ಪೊಲೀಸರು ಟ್ವೀಟ್ ಮಾಡಿದ್ದಾರೆ.

## ಕೆಪಿಎಸ್‌ಸಿಯಲ್ಲಿ ಆಮೂಲಾಗ್ರ ಬದಲಾವಣೆಗೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಕೆಪಿಎಸ್ ಸಿ ಮರು ಪರೀಕ್ಷೆಯಲ್ಲಿ ನೋಂದಣಿ ಸಂಖ್ಯೆ. ಒಎಂಆರ್ ಶೀಟ್ ಅದಲು ಬದಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಪಕ್ಷ ನಾಯಕ ಆರ್.ಅಶೋಕ್ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ. ಮರುಪರೀಕ್ಷೆಯಲ್ಲೂ ಮುಗ್ಗರಿಸಿದ ಎಡವಟ್ಟು ಕಾಂಗ್ರೆಸ್ ಸರ್ಕಾರ ಎಂದು ಕಿಡಿಕಾರಿದ್ದಾರೆ. ಆಗಸ್ಟ್‌ನಲ್ಲಿ ನಡೆದ 2023-24ನೇ ಸಾಲಿನ ಕೆಪಿಎಸ್ ಸಿ ಗೆಜೆಟೆಡ್ ಪ್ರೊಬೇಷನರ್ಸ್ ಪೂರ್ವಭಾವಿ ಪರೀಕ್ಷೆಯಲ್ಲಿ ಭಾರಿ ಎಡವಟ್ಟುಗಳು ಕಂಡು ಬಂದ ನಂತರ ಅಭ್ಯರ್ಥಿಗಳ ಆಕ್ರೋಶಕ್ಕೆ ಮಣಿದು ನಿನ್ನೆ ನಡೆಸಲಾದ ಮರುಪರೀಕ್ಷೆಯಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೊಮ್ಮೆ ಎಡವಟ್ಟುಗಳ ಮೇಲೆ ಎಡವಟ್ಟುಗಳು ಮಾಡಿದ್ದು, ಲಕ್ಷಾಂತರ



ಉದ್ಯೋಗಾಕಾಂಕ್ಷಿಗಳ ಭವಿಷ್ಯ ಡೋಲಾಯಮಾನವಾಗಿದೆ. ಭಾಷಾಂತರದಲ್ಲಿ ಲೋಪ ದೋಷ, ಎಂಬ ಶೀಟ್ ಮತ್ತು ನೋಂದಣಿ ಸಂಖ್ಯೆ ಅದಲು ಬದಲು, ಕೆಲವೆಡೆಗಳಲ್ಲಿ 45 ನಿಮಿಷ ತಡವಾಗಿ ಪರೀಕ್ಷೆ ಆರಂಭ ಹೀಗೆ ಸಾಲು ಸಾಲು ಎಡವಟ್ಟುಗಳಿಂದ ಕೂಡಿದ್ದ ಭಾನುವಾರದ ಮರುಪರೀಕ್ಷೆ ಮತ್ತೊಮ್ಮೆ ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿದೆ ಎಂದಿದ್ದಾರೆ. ಮರುಪರೀಕ್ಷೆಗೆ ನೋಂದಣಿ ಮಾಡಿಕೊಂಡ 2.109 ಲಕ್ಷ ಅಭ್ಯರ್ಥಿಗಳ ಪೈಕಿ ಕೇವಲ 1.005 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದು ಆಗಸ್ಟ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಶೇ.62.52% ರಷ್ಟಿದ್ದ ಹಾಜರಾತಿ, ಮರುಪರೀಕ್ಷೆಯಲ್ಲಿ ಶೇ.47.7%ಕ್ಕೆ ಕುಸಿದಿರುವುದು ಅಭ್ಯರ್ಥಿಗಳು ಕಾಂಗ್ರೆಸ್ ಸರ್ಕಾರದ ಮೇಲೆ, ಕೆಪಿಎಸ್ ಸಿ ಮೇಲೆ ನಂಬಿಕೆ ಕಳೆದುಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

## ಬಿಡದಿ ಬಳಿಯ ಸ್ಕೈವಾಕ್ ನಿರ್ಮಾಣಕ್ಕೆ ಆರಂಭಿಕ ವಿಘ್ನ: ಪರಿಹಾರವೇನು?

### ● ಅನಮಗೆ ಮೇಲ್ಸೇತುವೆ ನಿರ್ಮಿಸಿಕೊಡಿ ಇನ್ನೆಷ್ಟು ಜೀವಗಳು ಬಲಿಯಾಗಬೇಕು ಎಂದು ಸ್ಥಳೀಯರು ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಬಿಡದಿ ಸಮೀಪದ ಕೋತಿ ಆಂಜನೇಯಸ್ವಾಮಿ ದೇವಾಲಯದ ಬಳಿ ಸ್ಕೈವಾಕ್ ನಿರ್ಮಾಣ ಕಾರ್ಯ ಈಗ ವಿವಾದದ ಸುಳಿಗೆ ಸಿಲುಕಿದೆ. ಸಮಸ್ಯೆಗೆ ಪರಿಹಾರ ಸಿಗುವ ಲಕ್ಷಣಗಳು ಕಾಣುತ್ತಿಲ್ಲ. ಇದರಿಂದ ದೇವಾಲಯದ ಬಳಿ ರಸ್ತೆ ದಾಟುವ ಅಮಾಯಕರು ಪ್ರತಿದಿನ ಸಂಭವಿಸುವ ಅಪಘಾತಗಳಿಗೆ ತುತ್ತಾಗುತ್ತಿದ್ದಾರೆ. ಸಂಬಂಧಪಟ್ಟವರು ಸಮಸ್ಯೆಗೆ ಶೀಘ್ರ ಪರಿಹಾರವನ್ನು ಹುಡುಕಿ, ನಮಗೆಮೇಲ್ಸೇತುವೆ ನಿರ್ಮಿಸಿಕೊಡಿ ಇನ್ನೆಷ್ಟು ಜೀವಗಳು ಬಲಿಯಾಗಬೇಕು ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿಗೆ ಬಿಡದಿಯ ಕೋತಿ ಆಂಜನೇಯಸ್ವಾಮಿ ದೇವಾಲಯದ ಬಳಿ ಉದ್ದೇಶಿತ ಸ್ಕೈವಾಕ್ ನಿರ್ಮಾಣಕ್ಕೆ ಸ್ಥಳಾವಕಾಶದ ವಿಚಾರದಲ್ಲಿ ವಿವಾದ ಉಂಟಾಗಿದೆ. ದೇಗುಲದ ಟ್ರಸ್ಟ್ ಹಾಗೂ ಸ್ಥಳೀಯ ಗ್ರಾಪಂ ನಡುವಿನ ಸಾಮರಸ್ಯದ ಕೊರತೆಯಿಂದ ಇದೀಗ ಯೋಜನೆಗೆ ಆರಂಭಿಕ ವಿಘ್ನ ಎದುರಾಗಿದೆ. ಬೆಂಗಳೂರು-ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಥಳೀಯರು ರಸ್ತೆ ದಾಟುವಾಗ ಅಪಘಾತಗಳು ಸಂಭವಿಸುತ್ತಿರುವ ಕಾರಣ ಹೆಜ್ಜಾಲದ ಬಳಿಯಿಂದ ಮೈಸೂರುವರೆಗೆ ಎಕ್ಸ್‌ಪ್ರೆಸ್ ಹೈವೇ ಉದ್ದಕ್ಕೂ ಒಟ್ಟು 39 ಕಡೆ ಮೇಲ್ಸೇತುವೆ(ಸ್ಕೈವಾಕ್) ನಿರ್ಮಿಸಲು ನ್ಯಾಷನಲ್ ಹೈವೇ ಅಭಿವೃದ್ಧಿ ಪ್ರಾಧಿಕಾರ ಉದ್ದೇಶಿಸಿದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ಮುಗಿದು





ಕೆಲವೆಡೆ ಸ್ಕೈವಾಕ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಈ ಪೈಕಿ ಬಿಡದಿಯ ಪ್ರಸಿದ್ಧ ಕೋತಿ ಆಂಜನೇಯಸ್ವಾಮಿ ದೇವಾಲಯದ ಬಳಿ ಸ್ಕೈವಾಕ್ ನಿರ್ಮಾಣಕ್ಕೆ ಪಾಯಿಂಟ್ ಗುರುತಿಸಿದ್ದು, ಸ್ಥಳಾವಕಾಶದ ಬಗ್ಗೆ ಉಂಟಾಗಿರುವ ಗೊಂದಲದಿಂದ ಇದೀಗ ಕಾಮಗಾರಿಗೆ ಗ್ರಹಣ ಹಿಡಿದಿದೆ.

ಕೋತಿ ಆಂಜನೇಯಸ್ವಾಮಿ ದೇವಾಲಯದ ಬಳಿ ಮೇಲ್ಸೇತುವೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದು ವರ್ಷ ಕಳೆದರೂ ಸಹ ಜಾಗದ ಸಮಸ್ಯೆಯಿಂದ ಸ್ಕೈವಾಕ್ ನಿರ್ಮಾಣ ಕಾಮಗಾರಿಗೆ ಚಾಲನೆ ಸಿಕ್ಕಿರಲಿಲ್ಲ. ಹೀಗಾಗಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಗೊಂದಲ ನಿವಾರಣೆಗೆ ಮಧ್ಯೆ ಪ್ರವೇಶಿಸಿ ಉದ್ದೇಶಿತ ಯೋಜನೆಗೆ ಸೂಕ್ತ ಜಾಗ ಹುಡುಕುವ ಸಂಬಂಧ ಎರಡು ಬಾರಿ ಸರ್ವೆ ಮಾಡಿ ಅಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರ ಸಭೆ ನಡೆಸಿದ್ದರು. ಅಂತಿಮವಾಗಿ ದೇವಾಲಯದ ಪಕ್ಕದಲ್ಲಿಯೇ ಸ್ಕೈವಾಕ್ ನಿರ್ಮಿಸುವಂತೆ ಗುತ್ತಿಗೆದಾರನಿಗೆ ಸೂಚನೆ ನೀಡಿದ್ದರು. ಶಾಸಕರ ಮೌಖಿಕ ಸೂಚನೆ ಮೇರೆಗೆ ಟೆಂಡರ್‌ದಾರ ಕೋತಿ ಆಂಜನೇಯಸ್ವಾಮಿ ದೇಗುಲದ ಮಗ್ಗುಲಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಆರಂಭಿಸಿದ್ದರು. ಆದರೆ ಜಾಗದ ವಿಚಾರದಲ್ಲಿ ಯಾರೂ ಯಾವುದೇ ಪತ್ರ ವ್ಯವಹಾರ ನಡೆಸಿಲ್ಲ. ದೇವಾಲಯಕ್ಕೆ ಸೇರಿದ ಜಾಗವನ್ನು ಏಕಾಏಕಿ ಅತಿಕ್ರಮಣ ಮಾಡಲಾಗುತ್ತಿದೆ ಎಂದು ಆರೋಪಿಸಿ ದೇವಾಲಯ ಟ್ರಸ್ಟ್‌ನ ಪದಾಧಿಕಾರಿಗಳು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ದೂರು ನೀಡಿ ಕಾಮಗಾರಿ ಮಾಡದಂತೆ ತಡೆಹಿಡಿದಿದ್ದಾರೆ. ಹೀಗಾಗಿ ಜಾಗದ ಸಮಸ್ಯೆಯಿಂದ ಸ್ಕೈವಾಕ್ ನಿರ್ಮಾಣ ಯೋಜನೆ ಇದೀಗ ನನೆಗುದಿಗೆ ಬಿದ್ದಿದೆ. ಕೋತಿ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಲ್ಲಿನ ಜಾಗ ಈಗಾಗಲೇ ಬೆಂಗಳೂರು ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗೆ ಭೂಸ್ವಾಧೀನವಾಗಿರುವ ಕಾರಣ ಗರ್ಭಗುಡಿಯನ್ನು ಹಿಂಭಾಗದಲ್ಲಿ ನಿರ್ಮಿಸುತ್ತಿದ್ದು ಇಡೀ ದೇವಾಲಯದ ಜೀರ್ಣೋದ್ಧಾರ ಕಾಮಗಾರಿ ಪ್ರಗತಿಯಲ್ಲಿದೆ.

ಹೀಗಾಗಿ ದೇವಾಲಯದ ಪಕ್ಕದಲ್ಲಿ ಸ್ಕೈವಾಕ್ ನಿರ್ಮಿಸುವುದರಿಂದ ಮುಂದಿನ ದಿನಗಳಲ್ಲಿ ಜಾತ್ರೆ, ರಥೋತ್ಸವದ ಸಂದರ್ಭದಲ್ಲಿ ತೊಂದರೆಯಾಗಲಿದೆ. ದೇವಾಲಯದ ಬಲಭಾಗದಲ್ಲಿರುವ ಅರಣ್ಯ ಇಲಾಖೆಗೆ ಸೇರಿದ ಸರಕಾರಿ ಜಾಗದಲ್ಲಿ ಮೇಲ್ಸೇತುವೆ ನಿರ್ಮಿಸಲಿ ನಮ್ಮದೇನು ಅಭ್ಯಂತರವಿಲ್ಲ ಎನ್ನುವುದು ದೇವಾಲಯದ ಟ್ರಸ್ಟಿಗಳ ವಾದ.

ಪಕ್ಕದಲ್ಲಿ ಸರಕಾರಿ ಜಾಗವಿದ್ದರೂ ಸಹ ಶಾಸಕರು ಕೆಲವು ಸ್ಥಳೀಯ ಮುಖಂಡರ ಮಾತುಕೇಳಿ ದೇವಾಲಯದ ಪಕ್ಕದಲ್ಲಿಕಿಷ್ಕಿಂದೆ ಸ್ಥಳದಲ್ಲಿಸ್ಕೈವಾಕ್ ನಿರ್ಮಾಣಕ್ಕೆ ಜಾಗ ಗುರುತಿಸಿದ್ದಾರೆ. ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ಹೈವೇ ಎರಡೂ ಬದಿಯಲ್ಲಿದೇವಾಲಯದ ಜಾಗವನ್ನು ಏಕಾಏಕಿ ಆಕ್ರಮಿಸಿಕೊಳ್ಳುವುದು ಸರಿಯೇ ಒಂದಿಂಚೂ ಜಾಗವನ್ನು ಬಿಡುವುದಿಲ್ಲ, ಇದರ ಬಗ್ಗೆ ಕಾನೂನು ಹೋರಾಟ ಮಾಡಲಾಗುವುದು -ಡಾ.ಎಂ.ತಿಮ್ಮೇಗೌಡ ದೇವಾಲಯ ಟ್ರಸ್ಟ್‌ನ ಅಧ್ಯಕ್ಷ

### ಏಕಾಏಕಿ ಅತಿಕ್ರಮಣ ಮಾಡುತ್ತಿರುವುದು ನ್ಯಾಯವೇ?

ದೇವಾಲಯದ ಪಕ್ಕದಲ್ಲಿರುವ ಸರಕಾರಿ ಜಾಗವನ್ನು ಬಿಟ್ಟು ದೇವಾಲಯದ ಪಕ್ಕದಲ್ಲಿಹೆದ್ದಾರಿಗೆ ಸ್ಕೈವಾಕ್ ನಿರ್ಮಿಸುತ್ತಿರುವ ಹಿಂದಿನ ಉದ್ದೇಶವೇನು ಹೈವೆ ಅಗಲೀಕರಣಕ್ಕಾಗಿ ದೇವಾಲಯದ ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ಪ್ರಾಧಿಕಾರ ಪರಿಹಾರ ಕೊಟ್ಟಿದೆ. ಹಾಗಾಗಿ ದೇವಾಲಯದ ಜೀರ್ಣೋದ್ಧಾರ ಕಾರ್ಯವೂ ನಡೆಯುತ್ತಿದೆ. ಆದರೆ ಈಗ ಎರಡೂ ಕಡೆ ದೇವಾಲಯದ ಆಸ್ತಿಯನ್ನು ಏಕಾಏಕಿ ಅತಿಕ್ರಮಣ ಮಾಡುತ್ತಿರುವುದು ನ್ಯಾಯವೇ ಯಾರೋ ಒಂದಿಬ್ಬರು ಮುಖಂಡರ ಓಲೈಕೆಗಾಗಿ ಭವಿಷ್ಯದಲ್ಲಿಧಾರ್ಮಿಕ ಕಾರ್ಯಗಳಿಗೆ ಉಂಟಾಗಬಹುದಾದ ಸಮಸ್ಯೆಗಳ ಬಗ್ಗೆ ಶಾಸಕರು ಚಿಂತನೆ ನಡೆಸಲಿ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹7,800/Gram24ct ₹7,150/Gram22ct | ಬೆಳ್ಳಿ: ₹92.40/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಸಜ್ಜನರ ನೆನಪು

1982 ರಿಂದ 1985 ರವರೆಗೆ ನಾನು ಹುಬ್ಬಳ್ಳಿಯ ಶ್ರೀ ಸಿದ್ಧಾರೂಢಮಠದಲ್ಲಿದ್ದು ಸಂಸ್ಕೃತದ ಪ್ರಾರಂಭಿಕ ಹಾಗೂ ಪ್ರೌಢ ಶಿಕ್ಷಣದ ಅಧ್ಯಯನಗೈದೆ. ಈ ಸಂದರ್ಭದಲ್ಲಿ ಕಲಘಟಗಿ ತಾಲ್ಲೂಕಿನ ಕಾಮಧೇನು ಗ್ರಾಮದ ಶ್ರೀ ಶಂಕರಗೌಡ ಪಾಟೀಲ್‌ರ ಕಂಡೆ. ಆಗ ಅವರಿಗೆ ಅಂದಾಜು 53. ತೆಳುವಾದ ಕಾಯ, ಬಿಳಿಯ ಧೋತಿ ಜುಬ್ಬಾ ಟೋಪಿ. ಪಕ್ಕಾ ಗಾಂಧೀವಾದಿ. ಹಿತ ಮಿತ ಮೃದು ಮಾತು ನೇರ ಸರಳ. ಸಿದ್ಧಾರೂಢರ ಪರಮ ಭಕ್ತರು. ಅಧ್ಯಾತ್ಮ ಪ್ರಿಯರು. ಓದು ಬರಹ ಉಪನ್ಯಾಸ ಶ್ರವಣ ಹಾಗೂ ಉಪನ್ಯಾಸ ನೀಡುವುದು ಅವರ ನಿತ್ಯ ಕಾಯಕ. ಸಂಗೀತಪ್ರಿಯರು ಹಾಡಬಲ್ಲವರು. ಬಹುಪಾಲು ಸಿದ್ಧಾರೂಢ ಮಠದಲ್ಲಿಯೇ ವಾಸ. ಸಿದ್ಧಾರೂಢ ತತ್ತ್ವಾಮೃತ ಮಾಸಪತ್ರಿಕೆಗೆ ಲೇಖನ ಬರೆಯುತ್ತಿದ್ದರು. ಈ ಮನುಷ್ಯ ಇಷ್ಟೊಂದು ತಿಳಿದಿದ್ದಾರಾ? ಎಂದು ಆಶ್ಚರ್ಯ ಪಡುತ್ತಿದ್ದೆ. ಈ ನಡುವೆಯೂ ಅವರು ತಮ್ಮ ಕುಟುಂಬದ ಜವಾಬ್ದಾರಿ ಮರೆತಿರಲಿಲ್ಲ. ಮಕ್ಕಳಾದಿಯಾಗಿ ಎಲ್ಲರಿಗೂ ಉತ್ತಮ ಶಿಕ್ಷಣ ಸಂಸ್ಕಾರ ನೀಡಿದರು. ಮಕ್ಕಳೊಂದಿಗೆ ಸೇರಿ ಜನರ ಸಹಕಾರದೊಂದಿಗೆ ಊರಿನಲ್ಲಿ ಸಿದ್ಧಾರೂಢ ಮಠ ಕಟ್ಟಿದರು. 1998 ರಲ್ಲಿ ಹುಬ್ಬಳ್ಳಿಯಲ್ಲಿ ಸಿದ್ಧಾರೂಢ ಮಿಷನ್ ಸ್ಥಾಪಿಸಿದಾಗ ಮೊದಲ ಸಭೆಯಲ್ಲಿ ಉಪಸ್ಥಿತರಿದ್ದರು. ಸಿದ್ಧಾರೂಢ ಮಿಷನ್ ಮೂಲಕ ಸಿದ್ಧಾರೂಢರ ಜ್ಞಾನದ ಜ್ಯೋತಿ ಸೂರ್ಯನಂತೆ ಪಸರಿಸಲಿ ಎಂದು ನುಡಿದು ಸಂತಸಪಟ್ಟಿದ್ದರು. 19.11.2012 ರಂದು ಬ್ರಹ್ಮಲೀನರಾದರೆಂಬ ಸುದ್ದಿ ಇದೀಗ ನನಗೆ ತಿಳಿದು ಬಂತು. ಇಂಥ ಸಜ್ಜನ ವ್ಯಕ್ತಿಗಳು ಮತ್ತೆ ಮತ್ತೆ ಮೈದಾಳಲಿ.

# ಭೂ ಸ್ವಾಧೀನವಾದ್ರೆ ಎಷ್ಟು ಕಟ್ಟಡಗಳು ನೆಲಸಮ?

## ಮೆಟ್ರೋ ದಲ್ಲಿ ಪ್ರತಿನಿತ್ಯವೂ ಏನಿಲ್ಲ ಅಂದರೂ ಲಕ್ಷಾಂತರ ಮಂದಿ ಪ್ರಯಾಣ ಮಾಡುತ್ತಾರೆ

• **ಉದಯವಾಹಿನಿ , ಬೆಂಗಳೂರು**

ಬೆಂಗಳೂರಿಗರ ಜೀವನಾಡಿ ಸಾರಿಗೆಗಳಲ್ಲಿ ನಮ್ಮ ಮೆಟ್ರೋ ಕೂಡ ಒಂದಾಗಿದೆ. ಟ್ರಾಫಿಕ್ ಜಂಜಾಟದಿಂದ ತಪ್ಪಿಸಿಕೊಳ್ಳಲು ನಗರದ ಬಹುತೇಕ ಮಂದಿ ಈ ಸಾರಿಗೆಯನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಅಲ್ಲದೆ, ಪ್ರಯಾಣಿಕರ ಬೇಡಿಕೆ ಮೇರೆಗೆ ಮೆಟ್ರೋ ಜಾಲ ವಿಸ್ತರಣೆಯಾಗುತ್ತಲೇ ಇದೆ.
ಇನ್ನೂ ಹೆಬ್ಬಾಳ-ಸರ್ಜಾಪುರ ಮಾರ್ಗದಲ್ಲಿ ಮೆಟ್ರೋ ಆದರೆ ಎಷ್ಟು ಕಟ್ಟಡಗಳು ನೆಲಸಮವಾಗಲಿವೆ ಎನ್ನುವ ಮಾಹಿತಿಯನ್ನು ಇಲ್ಲಿ ತಿಳಿಯಿರಿ.

ಬೆಂಗಳೂರಿನ ಜೀವನಾಡಿ ಸಾರಿಗೆಯಾಗಿರುವ ಮೆಟ್ರೋ ದಲ್ಲಿ ಪ್ರತಿನಿತ್ಯವೂ ಏನಿಲ್ಲ ಅಂದರೂ ಲಕ್ಷಾಂತರ ಮಂದಿ ಪ್ರಯಾಣ ಮಾಡುತ್ತಾರೆ. ಪ್ರಯಾಣಿಕರ ಬೇಡಿಕೆ ಮೇರೆಗೆ ಮೆಟ್ರೋ ಜಾಲ ಕೂಡ ವಿಸ್ತರಣೆ ಆಗುತ್ತಲೇ ಇದೆ. ಈಗಾಗಲೇ ಹಲವೆಡೆ ಮೆಟ್ರೋ ವಿಸ್ತರಣೆಯಿಂದ ಬೃಹತ್ ಮರಗಳು ಧರೆಗುರುಳಿದ ಘಟನೆಗಳು ಕೂಡ ನಗರದ ಹಲವೆಡೆ ನಡೆದಿವೆ. ಅಷ್ಟೇ ಪ್ರಮಾಣದಲ್ಲಿ ಗಿಡ ನೆಡುವುದಾಗಿಯೂ ಬಿಎಂಆರ್‌ಸಿಎಲ್ ಹೇಳುತ್ತಾ ಬಂದಿದೆ.

ಆದರೆ 2024ರಲ್ಲಿ ಮೆಟ್ರೋ ಕಾಮಗಾರಿ ನೋಡುವುದಾದರೆ, ಹೇಳಿಕೊಳ್ಳುವಷ್ಟು ಏನು ಅಭಿವೃದ್ಧಿಯಾಗಿಲ್ಲ ಎನ್ನುವ ಮಾಹಿತಿ ಇತ್ತೀಚೆಗಷ್ಟೇ ಬಹಿರಂಗಗೊಂಡಿದೆ. ಇದೇ ಡಿಸೆಂಬರ್‌ನಲ್ಲಿ


ಉದಯವಾಹಿನಿ ಚಿತ್ರ

**ಕಾಮಗಾರಿ ಇನ್ನೆರಡು ವರ್ಷದೊಳಗೆ ಆರಂಭ**

ಉದ್ಘಾಟನೆಯಾಗಬೇಕಿದ್ದ ಬಹುನಿರೀಕ್ಷಿತ ಹಳದಿ ಮಾರ್ಗದ ದಿನಾಂಕ ಮತ್ತೆ ಮುಂದೂಡಿಕೆಯಾಗಿದೆ. 2024ರ ಡಿಸೆಂಬರ್ ಮುಗಿಯಲು ಇನ್ನೂ ಕೆಲವ ಎರಡು ದಿನಗಳಷ್ಟೇ ಬಾಕಿಯಿದೆ. 2025ರ ಜನವರಿಯಲ್ಲಿ ಈ ಮಾರ್ಗದಲ್ಲಿ ಮೆಟ್ರೋ ಸಂಚಾರ ಮಾಡಲಿವೆ ಎನ್ನುವ ಮಾಹಿತಿ ಲಭ್ಯವಾಗಿದೆ. ಇದೀಗ ಮತ್ತೊಂದೆಡೆ ನಮ್ಮ ಮೆಟ್ರೋ ಹೆಬ್ಬಾಳ-ಸರ್ಜಾಪುರ ಕೆಂಪು ಮಾರ್ಗದ ಆರಂಭಿಕ ಸಮೀಕ್ಷೆ ನಡೆಸಲಾಗಿದೆ. ಈ ಮಾರ್ಗದಲ್ಲಿ ಭೂಸ್ವಾಧೀನಕ್ಕೆ ಆರಂಭವಾದರೆ, 400ಕ್ಕೂ ಹೆಚ್ಚು ಕಟ್ಟಡಗಳು ನೆಲಸಮವಾಗುವ ಸಾಧ್ಯತೆಯಿದೆ. ಈನ ಹಿನ್ನೆಲೆ ಈ ಭಾಗಗಳ ಜನರು ಆತಂಕಕ್ಕೆ ಒಳಗಾಗಿದ್ದಾರೆ ಎನ್ನುವ ಮಾಹಿತಿಯೊಂದು ಲಭ್ಯವಾಗಿದೆ.

ಹೆಬ್ಬಾಳ-ಸರ್ಜಾಪುರ ನಡುವಿನ 36 ಕಿಲೋ ಮೀಟರ್ ಉದ್ದದ ಮೆಟ್ರೋ ಮಾರ್ಗ ನಿರ್ಮಾಣ ಆಗುತ್ತಿದೆ. ಒಟ್ಟು 836 ಆಸ್ತಿಗಳ ಮೂಲಕ ಮಾರ್ಗ ಹಾದು ಹೋಗಲಿದೆ. ಭೂ ಸ್ವಾಧೀನ ಮಾಡಿಕೊಳ್ಳಬೇಕಾದ ಆಸ್ತಿಗಳ ಪೈಕಿ ಹೆಚ್ಚಿನ ಜಮೀನು, ಕಟ್ಟಡಗಳು ಖಾಸಗಿ ವ್ಯಕ್ತಿಗಳಿಗೆ ಸೇರಿದವವಾಗಿವೆ. ಮತ್ತಷ್ಟು ಹೆಬ್ಬಾಳ ಕೆರೆಯ ಪಕ್ಕದಲ್ಲಿರುವ 45 ಹೆಕ್ಟೇರ್ ಜಮೀನು ಆಗಿದೆ ಎಂದು ತಿಳಿದುಬಂದಿದೆ. ಮಾರ್ಗ ಮಧ್ಯೆ ಗುರುತಿಸಿರುವ ಕಟ್ಟಡಗಳ ಪೈಕಿ 314 ವಸತಿ ಕಟ್ಟಡಗಳು, 37 ವಾಣಿಜ್ಯ ಕಟ್ಟಡಗಳು, 63 ಕೈಗಾರಿಕಾ ಕಟ್ಟಡಗಳಿವೆ. ಬಿಎಂಆರ್‌ಸಿಎಲ್ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದ ನಂತರ ಯೋಜನೆಗೆ ಅಗತ್ಯವಿರುವ ಭೂಮಿಯ ವಿಸ್ತೀರ್ಣ ಎಷ್ಟು ಹಾಗೂ ಯಾವೆಲ್ಲಾ ಕಟ್ಟಡಗಳನ್ನು ಭೂಸ್ವಾಧೀನ ಮಾಡಿಕೊಳ್ಳಲಾಗುತ್ತದೆ ಎನ್ನುವ ಮಾಹಿತಿ ಸ್ಪಷ್ಟವಾಗಿ ತಿಳಿದುಬರಲಿದೆ.

17 ಎಲಿವೇಟೆಡ್ ಮತ್ತು 11 ಅಂಡರ್‌ಪಾಸ್ ನಿಲ್ದಾಣಗಳನ್ನು ಒಳಗೊಂಡಿರುವ ಹೆಬ್ಬಾಳ-ಸರ್ಜಾಪುರ ಮೆಟ್ರೋ ಮಾರ್ಗದಲ್ಲಿ 26 ನಿಲ್ದಾಣಗಳು ತಲೆ ಎತ್ತಲಿವೆ. ಇನ್ನು ಈ ಮೆಟ್ರೋ ಮಾರ್ಗದ ನಿರ್ಮಾಣಕ್ಕೆ ಅಂದಾಜು ಏನಲ್ಲ ಅಂದರೂ 16,500 ಕೋಟಿ ರೂಪಾಯಿ ವೆಚ್ಚ ತಗುಲಲಿದೆ ಎಂದು ಅಂದಾಜಿಸಲಾಗಿದೆ.

ಇನ್ನು ಈ ಯೋಜನೆಗೆ ಇತ್ತೀಚೆಗೆ ರಾಜ್ಯ ಸರ್ಕಾರವು ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿವೆ. ಸಮೀಕ್ಷೆ ಪೂರ್ಣವಾಗಿ ಕಾಮಗಾರಿ ಇನ್ನೆರಡು ವರ್ಷದೊಳಗೆ ಆರಂಭ ಆಗಲಿದ್ದು, 2030ಕ್ಕೆ ಈ ಮಾರ್ಗದಲ್ಲಿ ಮೆಟ್ರೋ ರೈಲುಗಳು ಓಡುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

**ಮೆಟ್ರೋ ನಿಲ್ದಾಣಗಳ ವಿವರ**

**ಸರ್ಜಾಪುರ, ಕಾಡ ಅಗ್ರಹಾರ ರಸ್ತೆ, ಸೋಮಾಪುರ, ದೊಮ್ಮಸಂದ್ರ, ಮುತ್ತನಲ್ಲೂರು ಕ್ರಾಸ್, ಕೊಡತಿ ಗೇಟ್, ಅಂಬೇಡ್ಕರ್ ನಗರ, ದೊಡ್ಡಕನ್ನಳ್ಳಿ, ಕೈಕೊಂಡನಹಳ್ಳಿ, ಬೆಳ್ಳಂದೂರು ಗೇಟ್, ಅಗರ, ಜಕ್ಕಸಂದ್ರ, ಕೋರಮಂಗಲ 3ನೇ ಬ್ಲಾಕ್, ಕೋರಮಂಗಲ 2ನೇ ಬ್ಲಾಕ್, ಡೈರಿ ಸರ್ಕಲ್, ನಿಮ್ಹಾನ್ಸ್, ಶಾಂತಿ ನಗರ, ಟೌನ್ ಹಾಲ್, ಕೆಆರ್ ಸರ್ಕಲ್. ಬಸವೇಶ್ವರ ಸರ್ಕಲ್, ಬೆಂಗಳೂರು ಗಾಲ್ಫ್ ಕೋರ್ಸ್, ಪ್ಯಾಲೇಸ್ ಗುಟ್ಟಹಳ್ಳಿ, ಮೇಖ್ರಿ ಸರ್ಕಲ್, ವೆಟರ್ನರಿ ಕಾಲೇಜ್, ಗಂಗಾ ನಗರ ಹೆಬ್ಬಾಳದಲ್ಲಿ ಒಟ್ಟು 26 ನಿಲ್ದಾಣಗಳನ್ನು ಈ ಮಾರ್ಗದಲ್ಲಿ ನಿರ್ಮಾಣ ಮಾಡಲಾಗುತ್ತದೆ ಎಂದು ತಿಳಿದುಬಂದಿದೆ.**

## ಸಿಟಿ ರವಿ- ಹೆಬ್ಬಾಳ್ಕರ್ ಪ್ರಕರಣ ರಾಜ್ಯಪಾಲರ ಅಂಗಳಕ್ಕೆ

• **ಉದಯವಾಹಿನಿ , ಬೆಂಗಳೂರು**

ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ವಿವಾದಕ್ಕೆ ಕಾರಣವಾಗಿರುವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಪ್ರಕರಣದ ಚೆಂಡು. ರಾಜ್ಯಪಾಲರ ಅಂಗಳ ತಲುಪಿದೆ. ಬೆಳಗಾವಿ ಸುವರ್ಣ ಸೌಧದಲ್ಲಿ ನಡೆದ ಕಲಾಪದ ವೇಳೆ ವಿಧಾನ ಪರಿಷತ್‌ನಲ್ಲಿ ಹೆಬ್ಬಾಳ್ಕರ್ ವಿರುದ್ಧ ಸಿ.ಟಿ. ರವಿ ಅಶ್ಲೀಲ ಪದ ಬಳಸಿ ಟೀಕೆ ಮಾಡಿದ್ದಾರೆಂಬ ಆರೋಪ ಕೇಳಿ ಬಂದಿತು. ಈ ವಿಚಾರವಾಗಿ ಹೆಬ್ಬಾಳ್ಕರ್ ಮತ್ತು ಸಿ.ಟಿ. ರವಿ ಪರಸ್ಪರ ಬೈದಾಡಿಕೊಂಡಿದ್ದರು. ಈಗ ಈ ಪ್ರಕರಣ ರಾಜಭವನಕ್ಕೆ ತಲುಪಿದೆ. ಪ್ರಕರಣ ಕುರಿತಂತೆ ಬಿಜೆಪಿ ನಿಯೋಗ ರಾಜ್ಯಪಾಲ ಗೆಹ್ಲೋಟ್ ದೂರು ನೀಡಿತ್ತು. ಇದರ ಬೆನ್ನಲ್ಲೇ ರಾಜ್ಯಪಾಲರು ಸಿ.ಟಿ. ರವಿಯವರಿಗೆ ಬುಲಾವ್ ನೀಡಿದ್ದರು. ಸಿ.ಟಿ. ರವಿಯವರು ರಾಜ್ಯಪಾಲರನ್ನು ಭೇಟಿಯಾಗಿದ್ದು ಸದನದಲ್ಲಿ ನಡೆದ ಜಟಾಪಟಿ ಕುರಿತು ಮಾಹಿತಿ ನೀಡಿ ಪ್ರಕರಣದ ದಿಕ್ಕು ತಪ್ಪಿಸುವ ಬಗ್ಗೆ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಡಿ. 25 ರಂದೇ ಎರಡು ಪ್ರಕರಣಗಳು ಸಿಐಡಿ ವರ್ಗಾವಣೆಯಾಗಿದ್ದರೂ ಇದುವರೆಗೂ ಸಿಐಡಿ ತಂಡ ಬೆಳಗಾವಿ ಭೇಟಿ ನೀಡಿಲ್ಲ.

## ನಟ ದರ್ಶನ್‌ಗೆ ಜಾಮೀನು ರದ್ದು ಮೇಲ್ಮನವಿಗೆ ಅನುಮತಿ

• **ಉದಯವಾಹಿನಿ , ಬೆಂಗಳೂರು**

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಸೇರಿ ಇತರರಿಗೆ ನೀಡಿರುವ ಜಾಮೀನು ರದ್ದು ಕೋರಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಈಗಾಗಲೇ ಗೃಹ ಇಲಾಖೆಯಿಂದ ಅನುಮತಿ ನೀಡಿ ಕಡತ ರವಾನಿಸಲಾಗಿದೆ. ಶೀಘ್ರ ದಲ್ಲೇ ಸುಪ್ರೀಂಕೋರ್ಟ್‌ಗೆ ಪೊಲೀಸರು ಮೇಲ್ಮನವಿ ಸಲ್ಲಿಸಲಿದ್ದು, ಮೆರಿಟ್ಸ್ ಆಫ್ ದಿ ಕೇಸ್ ಮೇಲೆ ಮನವಿ ಮಾಡಲು ಪೊಲೀಸರು ರೆಡಿ ಆಗಿದ್ದಾರೆ. ಕೇವಲ ದರ್ಶನ್ ಮಾತ್ರವಲ್ಲದೆ ಎಲ್ಲರ ಜಾಮೀನು ರದ್ದು ಮಾಡಲು ಮನವಿ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಈಗಾಗಲೇ ಕೇಸ್ ಫೈಲ್, ಚಾರ್ಜ್‌ಶೀಟ್‌ನ ಇಂಗ್ಲಿಷ್‌ಗೆ ತರ್ಜುಮೆ ಮಾಡಲಾಗಿದೆ. ಮೊದಲು ಹೈಕೋರ್ಟ್‌ನಲ್ಲಿ ಸರ್ಕಾರಿ ಪರ ವಕೀಲರಾಗಿ ಪ್ರಸನ್ನ ಕುಮಾರ್ ಅವರು ವಾದ ಮಂಡಿಸಿದ್ದರು. ಅದೇ ರೀತಿ ಸುಪ್ರೀಂ ಕೋರ್ಟ್‌ಗೆ ವಕೀಲರಾಗಿ ಅನಿಲ್ ಸಿ. ನಿಶಾನಿ ನೇಮಕ ಮಾಡಿ, ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ದರ್ಶನ್, ಪವಿತ್ರಾ ಗೌಡ, ಲಕ್ಷ್ಮಣ, ಪ್ರದೋಶ್, ನಾಗರಾಜು, ಅನುಕುಮಾರ್, ಜಗದೀಶ್‌ಗೆ ಹೈಕೋರ್ಟ್ ಜಾಮೀನು ನೀಡಿತ್ತು. ಇದನ್ನು ನಗರ ಪೊಲೀಸರು ಪ್ರಶ್ನೆ ಮಾಡಲಿದ್ದಾರೆ. ಮುಂದಿನ ದಿನಗಳಲ್ಲಿ ದರ್ಶನ್ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಒಳಪಡಲಿದೆ.

## ಬಸ್ ಪ್ರಯಾಣ ದರ ಹೆಚ್ಚಳವಿಲ್ಲ

• **ಉದಯವಾಹಿನಿ , ಬೆಂಗಳೂರು**

ರಾಜ್ಯ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರವನ್ನು ತಕ್ಷಣ ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಇಲ್ಲ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ ಬಸ್ ಪ್ರಯಾಣ ದರ ಹೆಚ್ಚಳವಾಗಲಿದೆ ಎನ್ನುವ ಆತಂಕಕ್ಕೆ ಒಳಗಾಗಿದ್ದ ಪ್ರಯಾಣಿಕರು ನೆಮ್ಮದಿಯ ನಿಟ್ಟಿಸಿರು ಬಿಡುವಂತಾಗಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕೆಎಸ್‌ಆರ್‌ಟಿಸಿ ಮತ್ತು ಇತರ ಸಾರಿಗೆ ನಿಗಮಗಳ ಪ್ರಯಾಣ ದರ ಸದ್ಯಕ್ಕೆ ಹೆಚ್ಚಳ ಮಾಡುವುದಿಲ್ಲ ಈ ಬಗ್ಗೆ ಆತಂಕ ಬೇಡ ಎಂದಿದ್ದಾರೆ. ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಳ ಮಾಡುವ ಯಾವುದೇ ಯೋಜನೆಗಳು ಸದ್ಯಕ್ಕೆ ಪರಿಗಣನೆಯಲ್ಲಿಲ್ಲ. ಈ ಹಿಂದೆ ಸಾರಿಗೆ ನಿಗಮಗಳು ಪ್ರಯಾಣ ದರ ಪರಿಷ್ಕರಣೆಗೆ ಪ್ರಸ್ತಾವನೆ ಸಲ್ಲಿಸಿದ್ದವು. ಆದರೆ, ಇತ್ತೀಚೆಗೆ ಪ್ರಯಾಣ ದರ ಹೆಚ್ಚಳಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ ಎಂದು ಸಚಿವರು ಖಚಿತಪಡಿಸಿದ್ದಾರೆ. ಪ್ರಯಾಣ ದರ ಏರಿಕೆ ಕುರಿತು ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ, ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಯಾಣ ದರ ಏರಿಕೆಗೆ ಶಿಫಾರಸು ಮಾಡಿದ್ದರೂ ಅಂತಿಮ ನಿರ್ಧಾರ ಸರ್ಕಾರದ್ದು. ಸಾರಿಗೆ ನಿಗಮ ಮಂಡಳಿ ಸಭೆಯಲ್ಲಿ ಈ ವಿಷಯಹೇಳಿದರು ಚರ್ಚೆಗಳು ನಡೆಯಲಿದ್ದು, ಯಾವುದೇ ಬದಲಾವಣೆಗಳಿಗೆ ಸರ್ಕಾರದ ಅನುಮೋದನೆ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ

## ಸರಣಿ ರಸ್ತೆ ಅಪಘಾತ ಓರ್ವ ಸ್ಥಳದಲ್ಲೇ ಸಾವು

• **ಉದಯವಾಹಿನಿ , ಬೆಂಗಳೂರು**

ದಾಬಸ್ ಪೇಟೆಯ ಕೈಗಾರಿಕಾ ಪ್ರದೇಶದಲ್ಲಿ ಬೆಳಗ್ಗೆ ಸರಣಿ ರಸ್ತೆ ಅಪಘಾತ ಸಂಭವಿಸಿ ಓರ್ವ ಸ್ಥಳದಲ್ಲೇ ಮೃತಪಟ್ಟರೆ, ಹಲವರು ಗಾಯಗೊಂಡಿರುವ ದುರ್ಘಟನೆ ನಡೆದಿದೆ. ವೀರಣ್ಣ(55) ಮೃತ ದುರ್ದೈವಿ.ದಾಬಸ್ ಪೇಟೆಯ ರಾಷ್ಟ್ರೀಯ ಹೆದ್ದಾರಿ 48ರ ಎಡೇಹಳ್ಳಿ ಬಳಿ ಬೆಳಗ್ಗೆ ಈ ಸರಣಿ ಅಪಘಾತ ಸಂಭವಿಸಿದೆ. ಕೈಗಾರಿಕಾ ಪ್ರದೇಶ ದ ಹೆಬ್ಬಾಗಿಲು ಮುಂಭಾಗದಲ್ಲಿ ಪ್ಯಾಸೆಂಜರ್ ಆಟೋ, ಕಾರು, ಲಾರಿ ನಡುವೆ ಸರಣಿ ಅಪಘಾತವಾಗಿದ್ದು, ಘಟನೆಯಲ್ಲಿ ವೀರಣ್ಣ ಸ್ಥಳದಲ್ಲೇ ಮೃತಪಟ್ಟರೆ, ಎಂಬಿಬಿಎಸ್ ಓದುತ್ತಿದ್ದ ವಿದ್ಯಾರ್ಥಿ ಸೇರಿದಂತೆ ಹಲವರು ಗಾಯಗೊಂಡಿದ್ದು, ಅವರಲ್ಲಿ ಓರ್ವನ ಸ್ಥಿತಿ ಗಂಭೀರವಾಗಿದೆ. ರಸ್ತೆ ಪಕ್ಕ ನರಳಾಡುತ್ತಿದ್ದ ಪ್ರಯಾಣಿಕರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಘಾತದಿಂದ ಕಾರು,ಲಾರಿ, ಪ್ಯಾಸೆಂಜರ್ ಆಟೋ ಸಂಪೂರ್ಣ ಜಖಂಗೊಂಡಿವೆ. ಸುದ್ದಿ ತಿಳಿದ ತಕ್ಷಣವೇ ಸ್ಥಳಕ್ಕೆ ನೆಲಮಂಗಲ ಸಂಚಾರ ಪೊಲೀಸರು ಧಾವಿಸಿ ಪ್ರಕರಣ ದಾಖಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

## ದಾಸರ ಪದಗಳ ಗಾಯನ

• **ಉದಯವಾಹಿನಿ , ಬೆಂಗಳೂರು**



ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ಯರ ನೇತೃತ್ವದಲ್ಲಿ ಜನವರಿ 2, ಗುರುವಾರ ಸಂಜೆ 7-00ಕ್ಕೆ ಕು|| ಮನುಶ್ರೀ, ಕು|| ತನುಶ್ರೀ ಇವರಿಂದ ದಾಸರ ಪದಗಳ ಗಾಯನ ಕಾರ್ಯಕ್ರಮ ಏರ್ಪಡಿಸಿದ್ದು, ಪಿಟೀಲು ವಾದನದಲ್ಲಿ ಶ್ರೀ ಎಂ.ಎನ್. ಸತ್ಯನಾರಾಯಣ ಹಾಗೂ ಮೃದಂಗ ವಾದನದಲ್ಲಿ ಶ್ರೀ ವರದರಾಜನ್ ಸಾಥ್ ನೀಡಲಿದ್ದಾರೆ ಎಂದು ಶ್ರೀ ಗೊಗ್ಗಿ ಕೃಷ್ಣಾಚಾರ್ ತಿಳಿಸಿದ್ದಾರೆ.

## ವರ್ಷಾಚರಣೆ ವೇಳೆ ಸ್ವಯಂ ನಿಯಂತ್ರಣವಿರಲಿ

• **ಉದಯವಾಹಿನಿ , ಬೆಂಗಳೂರು**

ಹೊಸ ವರ್ಷದ ಸಂದರ್ಭದಲ್ಲಿ ಸುರಕ್ಷತಾ ಕ್ರಮಗಳು ಹಾಗೂ ಸ್ವಯಂ ನಿಯಂತ್ರಣದ ಮೂಲಕ ಸಂಭ್ರಮಾಚರಣೆ ಮಾಡುವಂತೆ ಗೃಹಸಚಿವ ಡಾ.ಜಿ.ಪರಮೇಶ್ವರ್‌ವರು ಸಾರ್ವಜನಿಕರಿಗೆ ಸೂಚನೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸ ವರ್ಷದ ಆಚರಣೆ ಯಲ್ಲಿ ಎಚ್ಚರಿಕೆಯಿಂದ ನಿಮ ಸಂತೋಷವನ್ನು ಹಂಚಿಕೊಳ್ಳಿ. ಹಿಂದೆಲ್ಲಾ ಆಚರಣೆಯ ವೇಳೆ ಬಹಳಷ್ಟು ಮಂದಿ ಪ್ರಾಣ ಕಳೆದುಕೊಂಡಿರುವುದನ್ನು ಬೆಂಗಳೂರು ಹಾಗೂ ಹೊರಭಾಗದ ಅನೇಕ ಜಿಲ್ಲೆಗಳಲ್ಲಿ ನೋಡಿದ್ದೇವೆ ಎಂದು ಹೇಳಿದರು. ಈಗಾಗಲೇ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ ಅಗತ್ಯ ಸೂಚನೆಗಳನ್ನು ನೀಡಿದ್ದೇನೆ. ಪ್ರತಿವರ್ಷವೂ 7 ರಿಂದ 8 ಲಕ್ಷ ಮಂದಿ ಬೆಂಗಳೂರಿನಲ್ಲಿ ಸೇರುವುದನ್ನು ನೋಡುತ್ತಿದ್ದೇವೆ. ಈ ವರ್ಷ ಇನ್ನೂ ಸ್ವಲ್ಪ ಹೆಚ್ಚು ಜನ ಸೇರುವ ಸಾಧ್ಯತೆಯಿದೆ. ಅದಕ್ಕಾಗಿ ಅಗತ್ಯ ತಯಾರಿಗಳನ್ನು ಮಾಡಿಕೊಂಡಿದ್ದೇವೆ ಎಂದರು.

ಹೋಟೆಲ್ ಹಾಗೂ ರೆಸ್ಟೋರೆಂಟ್ ವ್ಯಾಪಾರ ವಹಿವಾಟುಗಳಿಗೂ ರಾತ್ರಿ 1 ಗಂಟೆಯವರೆಗೂ ನಿಯಮಾನುಸಾರ ಕಾಲಾವಕಾಶವಿದೆ. ಅದರ ನಂತರ ವ್ಯಾಪಾರಕ್ಕೆ ಅವಕಾಶ ನೀಡುವುದು ಕಷ್ಟವಾಗಿದೆ ಎಂದು ಹೇಳಿದರು.



**ಹೆಚ್ಚಿನ ಪೊಲೀಸರನ್ನು ಭದ್ರತಾ ಕಾರ್ಯಗಳಿಗೆ ನಿಯೋಜಿಸಲಾಗಿದೆ. ಹಿರಿಯ ಅಧಿಕಾರಿಗಳಿಗೂ ಜವಾಬ್ದಾರಿ ವಹಿಸಲಾಗಿದೆ. ಹೊಸ ವರ್ಷದ ಆಚರಣೆ ಸಂದರ್ಭದಲ್ಲಿ ಪ್ರತಿಯೊಬ್ಬರೂ ಎಚ್ಚರಿಕೆಯಿಂದಿರಬೇಕು. ಯಾರಿಗೂ ತೊಂದರೆಯಾಗದಂತೆ ನಡೆದುಕೊಳ್ಳಬೇಕು ಹಾಗೂ ಸ್ವಯಂ ರಕ್ಷಣೆ ಕೂಡ ಮಾಡಿಕೊಳ್ಳಬೇಕು ಎಂದು ತಿಳಿಸಿದರು.**

## ಸಿದ್ಧಾರೂಢರ ಜನ್ಮಸ್ಥಳ ಬೀದರ್ ಜಿಲ್ಲೆಯ ಚಳಕಾಪುರದಿಂದ ಪ್ರಾರಂಭ

• **ಉದಯವಾಹಿನಿ , ಬೆಂಗಳೂರು**

ಶ್ರೀ ಸಿದ್ಧಾರೂಢ ಸ್ವಾಮಿಗಳ 190 ನೇ ಜಯಂತಿ, ಶ್ರೀ ಗುರುನಾಥಾರೂಢ ಸ್ವಾಮಿಗಳ 115 ನೇ ಜಯಂತಿಯ ಪ್ರಯುಕ್ತ, ಅರಿವು ಏಕತೆ ಹಾಗೂ ಶಾಂತಿ ಸಹಬಾಳ್ವೆಯ ಸಂದೇಶ ಸಾರಲು, ಹುಬ್ಬಳ್ಳಿಯ ಸಿದ್ಧಾರೂಢ ಮಠ ಹಮ್ಮಿಕೊಂಡ ಜ್ಯೋತಿರಥಯಾತ್ರೆಯು ಡಿಸೆಂಬರ್ 23 ರಿಂದ ಸಿದ್ಧಾರೂಢರ ಜನ್ಮಸ್ಥಳ ಬೀದರ್ ಜಿಲ್ಲೆಯ ಚಳಕಾಪುರದಿಂದ ಪ್ರಾರಂಭವಾಗಿದ್ದು ಜನವರಿ 6 ರಂದು ಬೆಂಗಳೂರಿಗೆ ಬರಲಿದೆ.

ಅಂದು ಬೆಳಿಗ್ಗೆ 11 ಘಂಟೆಗೆ ಕೆಂಗೇರಿ ಹೋಬಳಿಯ ರಾಮೋಹಳ್ಳಿಯಲ್ಲಿ ಭವ್ಯ ಸ್ವಾಗತ ನೀಡಲಾಗುವುದು.

ಬಳಿಕ ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ಸಮಾರಂಭ ನಡೆಯಲಿದೆ. 7 ರಂದು ಜ್ಯೋತಿ ಕೆಂಗೇರಿಯಿಂದ ಉಲ್ಲಾಳ ಜಂಕ್ಷನ್ ವರೆಗಿನ ಭಗವಾನ್ ಶ್ರೀ ಸಿದ್ಧಾರೂಢ ಸ್ವಾಮಿ ರಸ್ತೆಯಲ್ಲಿ ಸಂಚರಿಸಿ ಹೌಸಿಂಗ್ ಬೋರ್ಡ್‌ನ ಸಿದ್ಧಾರೂಢ ಉದ್ಯಾನ, ಗೋವಿಂದರಾಜ ನಗರದ ಪರಮಹಂಸ ಸಂನ್ಯಾಸಾಶ್ರಮ, ವಿಜಯನಗರದ ಆದಿಚುಂಚನಗಿರಿ ಮಠ, ಮಹಾಲಕ್ಷ್ಮಿಪುರಂ, ಕುರುಬರಹಳ್ಳಿ ಹಾಗೂ ಗಾಯತ್ರಿನಗರಗಳ ಸಿದ್ಧಾರೂಢ ಉದ್ಯಾನಗಳನ್ನು ಸಂಪರ್ಕಿಸಿ ಗಾಯತ್ರಿನಗರ ಹಾಗೂ ಮಲ್ಲೇಶ್ವರಂನ ಸಿದ್ಧಾಶ್ರಮಗಳನ್ನು ಸಂದರ್ಶಿಸಿ ಅಲ್ಲಾಳಸಂದ್ರದ ಯೋಗಿ ದೇವರಾಜರವರ ನಿವಾಸಕ್ಕೆ ತೆರಳಲಿದೆ.

8 ರಂದು ವಿಧಾನ ಸೌಧ, ಟೌನ್ ಹಾಲ್, ಮಕ್ಕಳ ಕೂಟ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆಯ ಕರ್ನಾಟಕ ಮಹಿಳಾ ಸೇವಾ ಸಮಿತಿ, ಸಿದ್ಧಾಶ್ರಮ, ಬಸವನಗುಡಿಯ ರಾಮಕೃಷ್ಣಾಶ್ರಮ, ಗವಿಪುರಂನ ಗೋಸಾಯಿಮಠಗಳ ಮಾರ್ಗವಾಗಿ ಜಯನಗರದ ಸಿದ್ಧಾರೂಢಾಶ್ರಮ ತಲುಪುವುದು.

9 ರಂದು ಬನಶಂಕರಿ, ಉತ್ತರಹಳ್ಳಿ, ರಾಜರಾಜೇಶ್ವರಿ ನಗರದ ಕೈಲಾಸಾಶ್ರಮದ ಮಾರ್ಗವಾಗಿ ಮೈಸೂರು ರಸ್ತೆಯ ಸಿದ್ಧಾರೂಢಾಶ್ರಮ ತಲುಪುವುದು.

10 ರಂದು ಡಾ. ರಾಜ್‌ಕುಮಾರ್ ಸಮಾಧಿ ತುಮಕೂರು ರಸ್ತೆಯ ಮಾರ್ಗವಾಗಿ ನೆಲಮಂಗಲ ಬಳಿಯ ಹಂಚಿಪುರದ ಸಿದ್ಧಾರೂಢ ಮಠಕ್ಕೆ ಸಾಗುವುದು. ಸಂತರು ಮಂತ್ರಿ ಶಾಸಕ ಜನಪ್ರತಿನಿಧಿ ಭಕ್ತಾದಿಗಳು ಅಲ್ಲಲ್ಲಿ ಸ್ವಾಗತಿಸುವರು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಿದೆ. ವಿವರಗಳಿಗೆ ಸಂಪರ್ಕಿಸಿ :93430 88778.








**ಕಾಮಗಾರಿ ಇನ್ನೆರಡು ವರ್ಷದೊಳಗೆ ಆರಂಭ**

## ಸಮಾಧಿ ದರ್ಶನಕ್ಕೆ ಅವಕಾಶ ಸಿಗದೆ ಫ್ಯಾನ್ಸ್ ಕಣ್ಣೀರು

• **ಉದಯವಾಹಿನಿ , ಬೆಂಗಳೂರು**

ಕನ್ನಡ ಚಿತ್ರರಂಗದ ಖ್ಯಾತ ನಟ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಪುಣ್ಯಸ್ಮರಣೆ. ಈ ಹಿನ್ನೆಲೆ ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿರುವ ವಿಷ್ಣುದಾದಾ ಅವರ ಸಮಾಧಿ ದರ್ಶನಕ್ಕೆ ರಾಜ್ಯದ ಮೂಲೆಮೂಲೆಯಿಂದ ಅಭಿಮಾನಿಗಳು ಬಂದಿದ್ದಾರೆ. ಆದರೆ, ಸಮಾಧಿ ದರ್ಶನಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಅಭಿಮಾನಿಗಳು ಬೇಸರ ವ್ಯಕ್ತಪಡಿಸಿದ್ದಾರೆ.
ಅಭಿಮಾನ್ ಸ್ಟುಡಿಯೋದಲ್ಲಿರುವ ವಿಷ್ಣುದಾದಾ ಅವರ ಸಮಾಧಿ ಬಳಿ ಯಾರನ್ನೂ ಬಿಡುತ್ತಿಲ್ಲ. ಕನಿಷ್ಠ ಪಕ್ಷ ಅವರ ಸಮಾಧಿ ಕಣ್ತುಂಬಿಕೊಳ್ಳುವ ಭಾಗ್ಯವೂ ನಮಗಿಲ್ಲದಂತೆ ಮಾಡಿದ್ದಾರೆ. ಅವರ ಸಮಾಧಿಗೆ ಪೂಜೆ ಮಾಡಲು, ಒಂದು ಪುಷ್ಪನಮನವಾದರೂ ಮಾಡಬೇಕು ಎಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ಇಲ್ಲಿಗೆ ಬಂದಿದ್ದೇವೆ. ನೋಡಿದರೆ ಸಮಾಧಿ ಸ್ಥಳಕ್ಕೆ ಯಾರೂ ಹೋಗದಂತೆ ಬೀಗ ಹಾಕಿದ್ದಾರೆ ಎಂದು ಅಭಿಮಾನಿಗಳು ಅಳಲು ತೋಡಿಕೊಂಡಿದ್ದಾರೆ. ಕಳೆದ ಹದಿನೈದು ವರ್ಷಗಳಿಂದಲೂ ವಿಷ್ಣುದಾದನ ಅಭಿಮಾನಿಗಳಿಗೆ ಇದೇ ಪಾಡು. ನೆಮ್ಮದಿಯಾಗಿ ಅವರ ಸಮಾಧಿಗೆ ಪೂಜೆ ಮಾಡಲು ಅವಕಾಶವೂ ಸಿಗುತ್ತಿಲ್ಲ. ಅವರ ಸ್ಮಾರಕವೇನೋ ಮೈಸೂರಿನಲ್ಲಿದೆ. ಆದರೆ ಅವರನ್ನು ಕೊನೆಯದಾಗಿ ಬೀಳ್ಕೊಟ್ಟಿದ್ದು ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿ. ಹಾಗಾಗಿ ನಮಗೆ ವರ್ಷಕ್ಕೆ ಒಮ್ಮೆಯಾದರೂ ಇಲ್ಲಿಗೆ ಬಂದು ಅವರ ಸಮಾಧಿ ದರ್ಶನ ಪಡೆದರೆ ಮನಸ್ಸಿಗೆ ನೆಮ್ಮದಿ ಎಂದು ಹೇಳಿದ್ದಾರೆ.




## ಹೊಸ ವರ್ಷಾಚರಣೆ: ನಿಯಮ ಪಾಲಿಸಲು ಡಿಕೆಶಿ ಖಡಕ್ ವಾರ್ನಿಂಗ್

• **ಉದಯವಾಹಿನಿ , ಬೆಂಗಳೂರು**

ಬೆಂಗಳೂರಿನಲ್ಲಿ ಹೊಸ ವರ್ಷಾಚರಣೆಗೆ ಕ್ಷಣಗಣನೆ ಶುರುವಾಗಿದೆ. ಈ ರೀತಿ ಇರುವಾಗಲೇ ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ ಶಿವಕುಮಾರ್ ಅವರು ಬೆಂಗಳೂರಿನ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ಖಡಕ್ ವಾರ್ನಿಂಗ್ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಹೊಸ ವರ್ಷ ಆಚರಣೆಗೆ ಈಗಾಗಲೇ ಪೊಲೀಸರು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯ ಬಾರದು ಎನ್ನುವ ನಿಟ್ಟಿನಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ತೆಗೆದುಕೊಳ್ಳಲಾಗಿದೆ. ಇದೀಗ ಈ ಸಂಬಂಧ ಮಾತನಾಡಿರುವ ಡಿ.ಕೆ ಶಿವಕುಮಾರ್ ಅವರು ನಿಯಮಗಳಿಗೆ ಅನುಸಾರವಾಗಿ ಬೆಂಗಳೂರಿನಲ್ಲಿ ಹೊಸ ವರ್ಷಾಚರಣೆ ಮಾಡಬೇಕು. ನಿಯಮ ಉಲ್ಲಂಘನೆ ಮಾಡಿದರೆ ಹುಷಾರ್ ಎಂದು ಎಚ್ಚರಿಕೆ ಕೊಟ್ಟಿದ್ದಾರೆ.



ಅದರಲ್ಲೂ ಮುಖ್ಯವಾಗಿ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇನ್ನು ಹೋಟೆಲ್ ಮತ್ತು ರೆಸ್ಟೋರೆಂಟ್ ಹಾಗೂ ರೆಸಾರ್ಟ್, ಪಬ್‌ಗಳು ಸೇರಿದಂತೆ ಎಲ್ಲರೂ ಸರ್ಕಾರದ ನಿಯಮಕ್ಕೆ ಅನುಸಾರವಾಗಿ ಹೊಸ ವರ್ಷದ ಸಂಭ್ರಮಾಚರಣೆ ನಡೆಸಬೇಕು. ಸರ್ಕಾರವು ಬ್ಯುಸಿನೆಸ್ ಮಾಡುವವರಿಗೂ ಯಾವುದೇ ಕಾರಣಕ್ಕೂ ಅಡ್ಡಿಪಡಿಸುವುದಿಲ್ಲ. ಆಗಂತ ನಿಯಮಗಳನ್ನು ಗಾಳಿಗೆ ತೂರಿ ಮಾಡುವಂತಿಲ್ಲ. ಇನ್ನು ನಗರದಲ್ಲಿ ಭದ್ರತೆಯ ದೃಷ್ಟಿಯಿಂದ 10,000 ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ನಾನು ಹೇಳುವುದನ್ನು ಎಚ್ಚರಿಕೆ ಎಂದಾದರೂ ಅಂದುಕೊಳ್ಳಲಿ. ಇಲ್ಲ ಮನವಿ ಅಂತನಾದರೂ ತಿಳಿದುಕೊಳ್ಳಿ. ಆದರೆ, ನಿಮಯಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಎಂದು ಹೊಸ ವರ್ಷ ಆಚರಿಸುವವರಿಗೆ ಡಿ.ಕೆ ಶಿವಕುಮಾರ್ ಖಡಕ್ ಎಚ್ಚರಿಕೆ ಕೊಟ್ಟಿದ್ದಾರೆ.

## ಪರೀಕ್ಷೆ ಪಾಸ್ ಆಮಿಷ ವಂಚನೆ, ರೈಲ್ವೆ ಅಧಿಕಾರಿ ಸೆರೆ

• **ಉದಯವಾಹಿನಿ , ಬೆಂಗಳೂರು**

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗಾಗಿ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳನ್ನು ಪಾಸ್ ಮಾಡಿಸುವುದಾಗಿ ನಂಬಿಸಿ ಲಕ್ಷಾಂತರ ರೂಗಳ ವಂಚನೆ ನಡೆಸುತ್ತಿದ್ದ ರೈಲ್ವೆ ಚೀಫ್ ಟಿಕೆಟ್ ಇನ್ಸ್‌ಪೆಕ್ಟರ್ ನನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

ಮೆಜೆಸ್ಟಿಕ್‌ನಲ್ಲಿರುವ ಸೌತ್ ವೆಸ್ಟರ್ನ್ ರೈಲ್ವೆಯಲ್ಲಿ ಚೀಫ್ ಟಿಕೆಟ್ ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಗೋವಿಂದರಾಜು (49) ಬಂಧಿತ ಆರೋಪಿಯಾಗಿದ್ದಾನೆ.

ಮಧ್ಯವರ್ತಿಗಳ ಸಹಾಯದಿಂದ ಇತ್ತೀಚೆಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆ ಬರೆದ ಕೆಲ ಅಭ್ಯರ್ಥಿಗಳನ್ನು ಸಂಪರ್ಕಿಸಿದ್ದ ಆರೋಪಿ, 'ತನಗೆ ಪರೀಕ್ಷೆಗೆ ಸಂಬಂಧಿಸಿದಂತಹ ಕೆಲ ಅಧಿಕಾರಿಗಳ ಪರಿಚಯವಿದ್ದು, ಪರೀಕ್ಷೆಯಲ್ಲಿ ಪಾಸ್ ಮಾಡಿಸಿ ಹುದ್ದೆ ಕೊಡಿಸುವುದಾಗಿ' ನಂಬಿಸಿದ್ದ.

ಅಭ್ಯರ್ಥಿಗಳಿಂದ ಪಿಡಿಒ ಹುದ್ದೆಗೆ 25 ಲಕ್ಷ ಹಾಗೂ ಕೆಎಎಸ್ ಪ್ರಿಲಿಮ್ಸ್ ಪರೀಕ್ಷೆ ಪಾಸ್ ಮಾಡಿಸಲು 50 ಲಕ್ಷ ರೂಗೆ ಮಾತನಾಡಿಕೊಂಡಿದ್ದ ಎಂದು ಆರೋಪಿಸಲಾಗಿದೆ.

ಪರೀಕ್ಷೆಯಲ್ಲಿ ಉತ್ತರ ಗೊತ್ತಿಲ್ಲದ ಪ್ರಶ್ನೆಗಳನ್ನು ಖಾಲಿ ಬಿಟ್ಟು ಬರುವಂತೆ ತಿಳಿಸಿ, ನಂತರ ತಾನು ಸರಿಯಾದ ಉತ್ತರಗಳನ್ನು ತುಂಬಿಸಿ ಪಾಸ್ ಮಾಡಿಸುವುದಕ್ಕೆ ಗ್ಯಾರಂಟಿಯಾಗಿ ಅಭ್ಯರ್ಥಿಗಳ ಎಸ್‌ಎಸ್‌ಎಲ್‌ಸಿ ಮತ್ತು ಪದವಿ ಸರ್ಟಿಫಿಕೇಟ್, ಪರೀಕ್ಷಾ ಪ್ರವೇಶ ಪತ್ರಗಳು, ಚೆಕ್‌ಗಳನ್ನ ಪಡೆದುಕೊಂಡಿದ್ದ ಎಂದು ಹೇಳಲಾಗುತ್ತಿದೆ.

ನಿನ್ನೆ ನಡೆದ ಕೆಎಎಸ್ ಪರೀಕ್ಷೆಯಲ್ಲಿ ಪಾಸ್ ಮಾಡಿಸುವುದಾಗಿ ಅಭ್ಯರ್ಥಿಯೊಬ್ಬರ ಕಡೆಯವರನ್ನು ಭೇಟಿಯಾಗಲು ವಿಜಯನಗರಕ್ಕೆ ಬಂದಿದ್ದಾಗ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ವಿಜಯನಗರದ ರಮೇಶ್ ಎನ್ನುವರ ಮಗಳು ನಿನ್ನೆ ಕೆಎಎಸ್ ಪರೀಕ್ಷೆ ಬರೆಯುತ್ತಿದ್ದು ಆಕೆಯನ್ನು ಪರೀಕ್ಷೆಯಲ್ಲಿ ಪಾಸ್ ಮಾಡಿಸುವುದಾಗಿ ಮಾತನಾಡಲು ಡಿ.28 ರಂದು ರಾತ್ರಿ 9 ಗಂಟೆಯ ವೇಳೆ ರಮೇಶ್ ರವರ ಮನೆಗೆ ಬಂದು ಅವರೊಂದಿಗೆ ಮಾತನಾಡಿಕೊಂಡು ಹೋಗಲು ಬಂದಿದ್ದಾಗಿ ತಿಳಿಸಿರುತ್ತಾನೆ.

ಸರ್ಕಾರಿ ಉದ್ಯೋಗಿಯಾಗಿದ್ದುಕೊಂಡು ವಿವಿಧ ಸರ್ಕಾರಿ ಉದ್ಯೋಗಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಸ್ ಮಾಡಿಸಿ ಹುದ್ದೆ ಕೊಡಿಸುವುದಾಗಿ ಮಧ್ಯವರ್ತಿಗಳ ಮುಖಾಂತರ ಪರೀಕ್ಷಾರ್ಥಿಗಳನ್ನು ಸಂಪರ್ಕಿಸಿ ಅವರುಗಳನ್ನು ನಂಬಿಸಿ ಅವರಿಂದ ದಾಖಲಾತಿ ಮತ್ತು ಲಕ್ಷಾಂತರ ಹಣವನ್ನು ಪಡೆದುಕೊಂಡು ಮೋಸ ಮಾಡುತ್ತಿರುವ ಗೋವಿಂದರಾಜು ಹಾಗೂ ಆತನ ಜೊತೆ ಅಕ್ರಮದಲ್ಲಿ ಭಾಗಿಯಾಗಿರುವ ಮಧ್ಯವರ್ತಿಗಳು ಮತ್ತು ಇತರರ ವಿರುದ್ಧ ಕ್ರಮ ಕೈಗೊಳ್ಳಲು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ.



**ಆರೋಪಿಯ ಬಳಿ ನಾಲ್ಕು ಮೊಬೈಲ್‌ಗಳು ಪತ್ತೆಯಾಗಿದ್ದು,ಅವುಗಳಲ್ಲಿನ ಒಂದು ಮೊಬೈಲ್ ನಲ್ಲಿ 46 ಜನ ಅಭ್ಯರ್ಥಿಗಳ ಹೆಸರು ಮತ್ತು ಅದರ ಮುಂದೆ ಚೆಕ್ ಮತ್ತು ಡಾಕ್ಯುಮೆಂಟ್ ಎಂದು ನಮೂದಿಸಿರುವ ಫೋಟೋಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದು, ಆ ಅಭ್ಯರ್ಥಿಗಳು ಯಾರು ಎಂಬುದರ ಕುರಿತು ಕೂಲಂಕಷವಾದ ತನಿಖೆ ನಡೆಸಲಾಗುತ್ತಿದೆ. ಆರೋಪಿಯು ಅಭ್ಯರ್ಥಿಗಳಿಂದ ಪಡೆದ ಕೆಲವು ದಾಖಲಾತಿ ಮತ್ತು ಚೆಕ್‌ಗಳನ್ನು ಮಧ್ಯವರ್ತಿಗಳಿಗೆ ನೀಡಿರುವುದಾಗಿ ಹೇಳಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.**

# ಬಫರ್ ವಲಯದಲ್ಲಿ ಮನೆ ನಿರ್ಮಿಸಿದವರಿಗೆ ಬಿಬಿಎಂಪಿ ಶಾಕ್

## ಬಫರ್ ಜೋನ್‌ನಲ್ಲಿರುವ ಕಟ್ಟಡಗಳಿಗೆ ಬಿಸಿಮುಟ್ಟಿಸಲು ಮುಂದಾದ ಬಿಬಿಎಂಪಿ

• **ಉದಯವಾಹಿನಿ , ಬೆಂಗಳೂರು**

ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿರುವ ನಗರ. ಈಗ ಬೆಂಗಳೂರಲ್ಲಿ ಖಾಲಿ ಜಾಗ ಅನ್ನೋದೇ ಅಪರೂಪ. ಅಷ್ಟರಮಟ್ಟಿಗೆ ಮನೆಗಳು ನಿರ್ಮಾಣವಾಗಿವೆ. ಇನ್ನು ಬೆಂಗಳೂರಿನಲ್ಲಿ ಗುರುತಿಸಲಾದ ಬಫರ್ ವಲಯದಲ್ಲೂ ಹಲವರು ಮನೆಗಳನ್ನು ನಿರ್ಮಾಣ ಮಾಡಿದ್ದು, ಇವರಿಗೆ ಬಿಬಿಎಂಪಿ ಶಾಕ್ ಕೊಡಲು ಮುಂದಾಗಿದೆ.

ಬಫರ್ ವಲಯದಲ್ಲಿ ಮನೆ ನಿರ್ಮಿಸಿದವರಿಗೆ ಮೊದಲು ವಿದ್ಯುತ್ ಕಡಿತ ಮಾಡಲು ನಿರ್ಧರಿಸಿದ್ದು, ಬಳಿಕ ಈ ಬಫರ್ ವಲಯದಲ್ಲಿ ನಿರ್ಮಾಣವಾಗಿರುವ ಕಟ್ಟಡಗಳನ್ನು ತೆರವು ಮಾಡಲು ಮುಂದಾಗಿದೆ. ಅಲ್ಲದೆ ಈಗಾಗಲೇ ಈ ವಲಯದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿಗೂ ಬಿಬಿಎಂಪಿ ಶಾಕ್ ನೀಡಲಿದೆ.

ನಗರದಲ್ಲಿ ಮೊದಲಿನಿಂದಲೂ ಸರ್ಕಾರಿ ಜಾಗ, ರಾಜಕಾಲುವೆ, ಕೆರೆ ಸೇರಿದಂತೆ ಹಲವು ಪ್ರದೇಶಗಳು ಒತ್ತುವರಿಯಾಗಿರುವ ಬಗ್ಗೆ ದೂರುಗಳು ಕೇಳಿಬರುತ್ತಲೇ ಇವೆ. ಒತ್ತುವರಿ ಮಾಡಿದ ಜಾಗಗಳಲ್ಲಿ ಮನೆ ನಿರ್ಮಿಸಿರುವ ಕೇಸ್‌ಗಳು ಕೂಡ ಬಿಬಿಎಂಪಿ ಮುಂದಿವೆ. ಆಗಾಗ ಕಾರ್ಯಾಚರಣೆ ನಡೆಸಿ, ಸುಮ್ಮನಾಗುವ ಬಿಬಿಎಂಪಿಗೆ ಇದು ದೊಡ್ಡತಲೆನೋವಾಗಿದೆ. ಒತ್ತುವರಿ ತೆರವು ಮಾಡಲು ಹರಸಾಹಸ ಪಟ್ಟರೂ ಅದು ಇನ್ನೂ ಯಶಸ್ವಿಯಾಗಿಲ್ಲ. ಈಗ ಬಫರ್ ವಲಯದ ಮೇಲೆ ಬಿಬಿಎಂಪಿ ಚಿತ್ತ ಹರಿಸಿದ್ದು, ಈ ಭಾಗಗಳಲ್ಲಿ ನಿರ್ಮಾಣವಾಗಿರುವ ಕಟ್ಟಡಗಳ ತೆರವು ಮಾಡಲು ದೊಡ್ಡ ಪ್ಲ್ಯಾನ್ ಮಾಡಿಕೊಂಡಿದೆ. ಸದ್ಯ ಬಫರ್ ವಲಯದಲ್ಲಿ ಕಾರ್ಯಾಚರಣೆ ನಡೆಸಲು ಬಿಬಿಎಂಪಿ ಮುಂದಾಗಿದ್ದು, ಈ ಭಾಗದಲ್ಲಿ ಮನೆ ಇದ್ದವರಿಗೆ ಶಾಕ್ ನೀಡಲು ಸಜ್ಜಾಗಿದೆ. ಈ ಬಫರ್ ಜೋನ್‌ನಲ್ಲಿ ರಾಜಕಾಲುವೆಗಳು ಹಾಗೂ ಚರಂಡಿ ಮೇಲೆ ಕಟ್ಟಡಗಳನ್ನು ನಿರ್ಮಿಸಿರುವುದು ಕಂಡುಬಂದಿದೆ.

ಹಾಗಾಗಿ ಇವುಗಳ ತೆರವು ಕಾರ್ಯಾಚರಣೆಗೆ ಹೊಸ ಪ್ಲ್ಯಾನ್ ಅನ್ನೂ ಮಾಡಿಕೊಂಡಿದೆ. ಬಫರ್ ವಲಯದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವವರಿಗೂ ಬಿಸಿಮುಟ್ಟಿಸಲು ಮುಂದಾಗಿದೆ. ಮೊದಲಿಗೆ ಈ ಒತ್ತುವರಿಯನ್ನು ಪತ್ತೆ ಹಚ್ಚಿ, ಬಳಿಕ ಬೆಸ್ಕಾಂ ಕಡೆಯಿಂದಲೇ ಅವರಿಗೆ ನೋಟಿಸ್ ಕೊಡಿಸಲು ನಿರ್ಧರಿಸಿದೆ. ಇತ್ತೀಚೆಗೆ ನಡೆದ ಬಿಬಿಎಂಪಿ ಸಭೆಯಲ್ಲಿ ಈ ಬಗ್ಗೆ ಒತ್ತುವರಿದಾರರಿಗೆ ನೋಟಿಸ್ ಕೊಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ.

ಈ ಹಿಂದೆಯೂ ಬಿಬಿಎಂಪಿ ರಾಜಕಾಲುವೆಗಳ ಬಫರ್ ವಲಯದಲ್ಲಿ ರಸ್ತೆ ನಿರ್ಮಾಣ, ಸೈಕಲ್ ಟ್ರ್ಯಾಕ್ ನಿರ್ಮಿಸಲು ಮುಂದಾಗಿತ್ತು. ಈ ಮೂಲಕ ಒತ್ತುವರಿ ತಡೆಯುವ ಪ್ಲ್ಯಾನ್ ಕೂಡ ಮಾಡಿತ್ತು. ಇದರಿಂದ ಜನರ ರಾಜಕಾಲುವೆಗೆ ಕಸ ಎಸೆಯುವುದನ್ನು ತಪ್ಪಿಸಬಹುದು, ಜೊತೆಗೆ ಪ್ರವಾಹ ತಡೆ, ಕಾಲುವೆಗಳಲ್ಲಿನ ಹೂಳು ತೆರವು ಕೆಲಸಕ್ಕೂ ಅನುಕೂಲವಾಗಲಿದೆ ಎಂದು ಉದ್ದೇಶಿಸಲಾಗಿತ್ತು.


ಉದಯವಾಹಿನಿ ಚಿತ್ರ

**ಅಧಿಕಾರಿಗಳಿಗೆ ಖಡಕ್ ಸೂಚನೆ**

**ಬೆಂಗಳೂರಿನ ಹಲವು ಭಾಗಗಳಲ್ಲಿ ಕೆರೆ ಜಾಗದ ಒತ್ತುವರಿ ಮಾಡಿರುವುದು ಬೆಳಕಿಗೆ ಬಂದಿದೆ. ಈ ಒತ್ತುವರಿ ಜಾಗಗಳಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಹಾಗಾಗಿ ನಿರ್ಮಾಣ ಹಂತದಲ್ಲೇ ಇವರಿಗೆ ಬಿಸಿಮುಟ್ಟಿಸಲು ಬಿಬಿಎಂಪಿ ಮುಂದಾಗಿದೆ. ಈ ವಲಯಗಳನ್ನು ಗುರುತಿಸಿ, ನಿರ್ಮಾಣ ಹಂತದಲ್ಲಿರುವಾಗಲೇ ಒತ್ತುವರಿದಾರರಿಗೆ ಬೆಸ್ಕಾಂ ವತಿಯಿಂದ ನೋಟಿಸ್ ಕೊಡಿಸಿ, ವಿದ್ಯುತ್ ಸಂಪರ್ಕ ಕಡಿತ ಮಾಡಲು ಸೂಚನೆ ನೀಡಲಾಗಿದೆ. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಕಮೀಷನರ್ ಎಲ್ಲಾ ವಲಯದ ಸಂಬಂಧಪಟ್ಟ ಅಧಿಕಾರಿಗಳಿಗೆ ಖಡಕ್ ಸೂಚನೆ ಕೊಟ್ಟಿದ್ದಾರೆ.**

# ಅಡ್ಡಾದಿಡ್ಡಿ ವಾಹನ ನಿಲುಗಡೆ: ಸವಾರರಿಗೆ ತೊಂದರೆ

## ವಾಹನಗಳ ಸಂಖ್ಯೆ ಹೆಚ್ಚಾದಂತೆಲ್ಲಾ ನಿಲುಗಡೆಯೂ ವ್ಯವಸ್ಥಿತವಾಗಿ ಇಲ್ಲದಿರುವ ಕಾರಣ ಕಿರಿದಾದ ರಸ್ತೆಗಳಲ್ಲಿ ಸಂಚರಿಸುವಂತಹ ಸ್ಥಿತಿ

• **ಉದಯವಾಹಿನಿ, ಗೌರಿಬಿದನೂರು**

ನಗರಗಳು ಬೆಳೆದಂತೆಲ್ಲಾ ಮೂಲಸೌಕರ್ಯಗಳನ್ನು ಒದಗಿಸುವುದು ಸ್ಥಳೀಯ ಆಡಳಿತದ ಕರ್ತವ್ಯ. ಆದರೆ ನಗರದಲ್ಲಿ ದ್ವಿಚಕ್ರ ವಾಹನ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಸಮಸ್ಯೆಯಾಗಿದೆ.

ಈ ಬಗ್ಗೆ ಸಂಬಂಧಪಟ್ಟವರು ಸಹ ನಿರ್ಲಕ್ಷ್ಯ ವಹಿಸಿದ್ದಾರೆ.

ನಗರದ ಮಧ್ಯಭಾಗದಲ್ಲಿಯೇ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳು ಹಾದು ಹೋಗಿವೆ.

ಇಂತಹ ಪ್ರಮುಖ ರಸ್ತೆಗಳಲ್ಲಿ ಪ್ರತಿದಿನವೂ ಸಾವಿರಾರು ವಾಹನಗಳು ಬೆಂಗಳೂರು, ಚಿಕ್ಕಬಳ್ಳಾಪುರ, ತುಮಕೂರು ಮತ್ತು ಹಿಂದೂಪುರ, ಸೇರಿದಂತೆ ಹಲವು ಕಡೆಗೆ ಸಾಗುತ್ತವೆ. ಆದರೆ ಅಡ್ಡಾದಿಡ್ಡಿಯಾಗಿ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಅರ್ಧ ಭಾಗಕ್ಕೂ ಹೆಚ್ಚು ರಸ್ತೆಯಲ್ಲಿ ವಾಹನಗಳೇ ತುಂಬಿರುತ್ತವೆ. ಸರಾಗವಾಗಿ ಸಾಗದೆ ವಾಹನ ಸವಾರರು ಪ್ರಯಾಸ ಪಡಬೇಕಾದ ಪರಿಸ್ಥಿತಿ ಇದೆ.

**ಸವಾರರಿಗೆ ಪಾರ್ಕಿಂಗ್ ವ್ಯವಸ್ಥೆ ಇಲ್ಲ**

ವಾಹನಗಳ ಸಂಖ್ಯೆ ಹೆಚ್ಚಾದಂತೆಲ್ಲಾ ನಿಲುಗಡೆಯೂ ವ್ಯವಸ್ಥಿತವಾಗಿ ಇಲ್ಲದಿರುವ ಕಾರಣ ಸವಾರರು ಕಿರಿದಾದ ರಸ್ತೆಗಳಲ್ಲಿ ಸಂಚರಿಸುವಂತಹ ಸ್ಥಿತಿ ಇದೆ. ಇದರಿಂದ ವೇಗವಾಗಿ ಬರುವ ವಾಹನ ಸವಾರರು ಇತರೆ ವಾಹನಗಳನ್ನು ಹಿಂದಿಕ್ಕುವ ಭರದಲ್ಲಿ ಅಪಘಾತವಾಗುತ್ತಿವೆ. ತಪ್ಪೇ ಮಾಡದ ಸವಾರರು ಸಹ ತೊಂದರೆ ಅನುಭವಿಸುವಂತಾಗಿದೆ.

ಅತಿಹೆಚ್ಚು ಜನದಟ್ಟಣೆ ಇರುವ ಪ್ರದೇಶಗಳಾದ ಬಜಾರ್ ರಸ್ತೆಯಲ್ಲಿ ಸರ್ಕಾರಿ ಕಾಲೇಜಿಗೆ ಸಾವಿರಾರು ವಿದ್ಯಾರ್ಥಿಗಳು ಪ್ರತಿದಿನ ಬರುತ್ತಾರೆ. ಆದರೆ, ವಾಹನ ದಟ್ಟಣೆ ಮಿತಿ ಮೀರಿರುತ್ತದೆ. ವಿದ್ಯಾರ್ಥಿಗಳು ಮುಂದೆ ಸಾಗಲು ಸಹ ಸಾಧ್ಯವಾಗದಂತಹ ಸ್ಥಿತಿ ಇರುತ್ತದೆ. ಗಾಂಧಿ ವೃತ್ತ, ವಾಲ್ಮೀಕಿ ವೃತ್ತ, ನಾಗಯ್ಯ ರೆಡ್ಡಿ ವೃತ್ತ, ಬಸ್ ನಿಲ್ದಾಣದಂತಹ ಜನನಿಬಿಡ ಪ್ರದೇಶಗಳಲ್ಲಿ ವ್ಯವಸ್ಥಿತವಾಗಿ ವಾಹನ ಸವಾರರಿಗೆ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಸಂಚಾರ ನಿಯಮಗಳ ನಾಮಫಲಕಗಳನ್ನು ಅಳವಡಿಸಿದ್ದರೂ ಸ್ವಲ್ಪ ಮಟ್ಟಿಗಾದರೂ ವಾಹನ ಸಂಚಾರ ಸರಾಗವಾಗಿ ಸಾಗುತ್ತಿತ್ತು.

ಇಂತಹ ಪ್ರಮುಖ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಸರಿಯಾದ ಸ್ಥಳವಿಲ್ಲ.

ನಗರದಲ್ಲಿ ಈ ಸಮಸ್ಯೆ ಹಲವು ವರ್ಷಗಳಿಂದ ಇದ್ದರೂ ಸಹ ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಆಗುತ್ತಿಲ್ಲ. ತಾತ್ಕಾಲಿಕವಾಗಿ ವಾಹನಗಳನ್ನು ವಾರದಲ್ಲಿ ಎಡಗಡೆ ಮೂರು ದಿನ ಬಲಗಡೆ ನಾಲ್ಕು ದಿನ ಪಾರ್ಕಿಂಗ್ ಮಾಡುವ ವ್ಯವಸ್ಥೆ ಮಾಡಲಾಗುತ್ತಿತ್ತು.

ಆದರೆ, ಕೆಲವೇ ದಿನಗಳಲ್ಲಿ ಯಥಾಪ್ರಕಾರ ಅಡ್ಡಾದಿಡ್ಡಿಯಾಗಿ ನಿಲ್ಲಿಸಲು ಪ್ರಾರಂಭವಾಗಿದೆ.

ತಾಲ್ಲೂಕಿನಲ್ಲಿ ವರ್ಷದಿಂದ ವರ್ಷಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿದೆ. ಅವುಗಳಿಗೆ ಅಗತ್ಯವಿರುವ ನಿಲುಗಡೆ ಪ್ರದೇಶ ಗುರುತಿಸುವಲ್ಲಿ ಸ್ಥಳೀಯ ಆಡಳಿತ ವಿಫಲವಾಗಿರುವುದು ಎದ್ದು ಕಾಣುತ್ತಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುವರು.



ಉದಯವಾಹಿನಿ ಚಿತ್ರ

> **ಪರಿಶೀಲಿಸಿ ಅನುಮತಿ ನೀಡಿ**
> **ವಾಣಿಜ್ಯ ಕಟ್ಟಡಗಳ ಮಾಲೀಕರು ವಾಹನ ನಿಲುಗಡೆಗೆ ಜಾಗ ಮೀಸಲಿಟ್ಟಿಲ್ಲ ನಗರಸಭೆ ಅಧಿಕಾರಿಗಳು ಪರವಾನಗಿ ನೀಡುವ ಸಂದರ್ಭದಲ್ಲಿಯೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿರುವುದನ್ನು ಕಡ್ಡಾಯವಾಗಿ ಪರಿಶೀಲಿಸಿ ಅನುಮತಿ ನೀಡಬೇಕು**
> -ಅಂಜಿನಪ್ಪ, ವಾಹನ ಸವಾರ

**ಕಠಿಣ ಕ್ರಮ**

**ಫುಟ್‌ಪಾತ್‌ನಲ್ಲಿ ಹಾಗೂ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುವ ಸವಾರರಿಗೆ ಪ್ರತಿ ಬಾರಿಯೂ ಎಚ್ಚರಿಕೆ ನೀಡಲಾಗಿದೆ. ಅರಿವು ಮೂಡಿಸಲಾಗುತ್ತಿದೆ. ಆದರೆ ಕೆಲವೇ ದಿನಗಳಲ್ಲಿ ಯಥಾ ಪ್ರಕಾರ ಮುಂದುವರೆಯುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಕಠಿಣ ಕ್ರಮ ಕೈ ಗೊಳ್ಳಲಾಗುವುದು. ಡಿ.ಎಂ.ಗೀತಾ, ನಗರಸಭೆ ಪೌರಾಯುಕ್ತರು, ಗೌರಿಬಿದನೂರು ಸಂಚಾರ ನಿಯಮ, ಸಹಕರಿಸಿ ವಾಹನ ನಿಲುಗಡೆ ಸಮಸ್ಯೆಯ ಬಗ್ಗೆ ಅರಿವಿದೆ. ವಾಹನ ನಿಲುಗಡೆಗೆ ಸದ್ಯದಲ್ಲಿಯೇ ಪ್ರತ್ಯೇಕ ವ್ಯವಸ್ಥೆ ರೂಪಿಸಲಾಗುವುದು. ಸಾರ್ವಜನಿಕರು ಸಂಚಾರ ನಿಯಮ ಪಾಲಿಸಲು ಸಹಕರಿಸಬೇಕು.**

---

# ಮಕ್ನಾ ಕಾಡಾನೆ ಸೆರೆ

• **ಉದಯವಾಹಿನಿ, ಚನ್ನಪಟ್ಟಣ**

ತಾಲ್ಲೂಕಿನ ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ತಂಡ ಮತ್ತೊಂದು ಮಕ್ನಾ ಕಾಡಾನೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಚಿಕ್ಕಮಣ್ಣುಗುಡ್ಡೆ ಕಾಡಿನಲ್ಲಿ ಬೀಡುಬಿಟ್ಟಿರುವ ನಲವತ್ತು ವರ್ಷ ವಯಸ್ಸಿನ ಮಕ್ನಾ ಆನೆಯನ್ನು ಬೆಳಗ್ಗೆ ಪತ್ತೆಹಚ್ಚಿದ ಕಾರ್ಯಾಚರಣೆ ತಂಡವು ಸಾಕಾನೆಗಳೊಂದಿಗೆ ಬಂದಿತು.

ತಂಡದ ಸದಸ್ಯರು ಅರವಳಿಕೆ ಚುಚ್ಚುಮದ್ದು ನೀಡಿ ಆನೆಯನ್ನು ಪ್ರಜ್ಞೆ ತಪ್ಪಿಸಿದ ನಂತರ ಕುತ್ತಿಗೆ, ಕಾಲಿಗೆ ದಪ್ಪ ಹಗ್ಗ ಬಿಗಿದರು. ಸ್ವಲ್ಪ ಸಮಯದ ನಂತರ ಎಚ್ಚರಗೊಂಡ ಆನೆಯನ್ನು ಸಾಕಾನೆಗಳ ಸಹಾಯದಿಂದ ಕರೆತಂದು ಕ್ರೇನ್ ಸಹಾಯದಿಂದ ಲಾರಿಗೆ ಸಾಗಿಸಲಾಯಿತು. ಇದೇ ಆನೆಯನ್ನು ಕಳೆದ ವರ್ಷ ಇದೇ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿಯಲಾಗಿತ್ತು. ಸೆರೆ ಹಿಡಿದ ನಂತರ ಅದನ್ನು ಮಲೆ ಮಹದೇಶ್ವರ ಬೆಟ್ಟಕ್ಕೆ ಬಿಡಲಾಗಿತ್ತು ಅದು ಕೆಲವು ದಿನಗಳ ಹಿಂದೆ ಮತ್ತೆ ವಾಪಸ್ ಬಂದಿದೆ.

ಆ ಆನೆಗೆ ಕಾಲರ್ ಐ.ಡಿ ಹಾಕಿದ್ದರಿಂದ ಸುಲಭವಾಗಿ ಸೆರೆ ಹಿಡಿಯಲು ಸಾಧ್ಯವಾಯಿತು. ಸೆರೆ ಹಿಡಿದಿರುವ ಈ ಕಾಡಾನೆಯನ್ನು ದುಬಾರೆ ಆನೆ ಶಿಬಿರಕ್ಕೆ ಕರೆದೊಯ್ದು ಪಳಗಿಸುವ ಕಾರ್ಯ ನಡೆಸಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳಾದ ರಾಮಕೃಷ್ಣಪ್ಪ ಮಲ್ಲೇಶ್ ತಿಳಿಸಿದರು. ತಾಲ್ಲೂಕಿನಲ್ಲಿ ಬೆಳೆಗಳ ಮೇಲೆ ನಿರಂತರ ದಾಳಿ ನಡೆಸುತ್ತಿರುವ ಕಾಡಾನೆಗಳಲ್ಲಿ ಎರಡು ಆನೆಗಳನ್ನು ಸೆರೆ ಹಿಡಿಯಲು ಮಹೇಂದ್ರ, ನೇತೃತ್ವದಲ್ಲಿ ಭೀಮ, ಪ್ರಶಾಂತ್, ಧನಂಜಯ, ಹರ್ಷ, ಸುಗ್ರೀವ ಹೆಸರಿನ ಆರು ಸಾಕಾನೆಗಳ ತಂಡದ ನೆರವಿನೊಂದಿಗೆ ಕಾರ್ಯಾಚರಣೆ ಆರಂಭಿಸಲಾಗಿತ್ತು.

ಶಾಸಕ ಸಿ.ಪಿ. ಯೋಗೇಶ್ವರ್ ಕಾರ್ಯಾಚರಣೆಗೆ ಚಾಲನೆ ನೀಡಿದ್ದರು. ಕಾರ್ಯಾಚರಣೆ ಪ್ರಾರಂಭಿಸಿದ ಕೆಲವೇ ಗಂಟೆಗಳಲ್ಲಿ ಒಂಟಿ ಸಲಗವೊಂದನ್ನು ಸೆರೆಹಿಡಿಯಲಾಗಿತ್ತು.



ಉದಯವಾಹಿನಿ ಚಿತ್ರ

---

# ಕಲ್ಪತರು ನಾಡಿನಲ್ಲಿ ಕೆಂಬಾವುಟ ಆರ್ಭಟ: ಸಿಪಿಎಂ ರಾಜ್ಯ ಸಮ್ಮೇಳನ ಆರಂಭ

• **ಉದಯವಾಹಿನಿ, ತುಮಕೂರು**

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಜೊತೆ ಸೇರಿ ರಾಷ್ಟ್ರವನ್ನು ಕೋಮುವಾದಿ ನೆಲೆಗಟ್ಟಿನಲ್ಲಿ ವಿಭಜಿಸಲು ಹೊರಟಿದೆ. ದೇಶದ ಏಕತೆ ಮುರಿದು ದ್ವೇಷ ಹರಡಲು ಮುಂದಾಗಿದೆ' ಎಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ(ಸಿಪಿಎಂ) ರಾಷ್ಟ್ರೀಯ ನಾಯಕರು ಕಿಡಿಕಾರಿದರು.

ನಗರದಲ್ಲಿ ಆರಂಭವಾದ ಮೂರು ದಿನಗಳ 'ಸಿಪಿಎಂ 24ನೇ ರಾಜ್ಯ ಸಮ್ಮೇಳನ'ದಲ್ಲಿ ಕೇಂದ್ರ ಸರ್ಕಾರದ ನೀತಿ ಮತ್ತು ಬಲಪಂಥೀಯ ಸಂಘಟನೆಗಳ ವಿರುದ್ಧ ಎಡ ಪಕ್ಷದ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

ನಾವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಕಾಲಘಟ್ಟದಲ್ಲಿದ್ದೇವೆ, ಭಾರತ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿದೆ ಎಂದು ಕೇಂದ್ರದ ನಾಯಕರು ಬಿಂಬಿಸುತ್ತಿದ್ದಾರೆ. ಆದರೆ ವಾಸ್ತವದ ಸ್ಥಿತಿ ಇದಕ್ಕಿಂತ ಭಿನ್ನವಾಗಿದೆ.

ಜಗತ್ತಿನಲ್ಲೇ ಅತಿ ಹೆಚ್ಚಿನ ಬಡವರು, ಕೂಲಿ ಕಾರ್ಮಿಕರು, ಭೂ.ವಂಚಿತರು ನಮ್ಮ ದೇಶದಲ್ಲಿದ್ದಾರೆ. ವಾಸ್ತವ ಮುಚ್ಚಿಟ್ಟು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ' ಎಂದರು.

ಬಹಿರಂಗ ಸಭೆ ಉದ್ಘಾಟಿಸಿ ಮಾತನಾಡಿದ ಕೇರಳ ಮಾಜಿ ಸಚಿವ ಹಾಗೂ ಪಾಲಿಟ್ ಬ್ಯುರೊ ಸದಸ್ಯ ಎಂ.ಎ.ಬೇಬಿ 'ಬಿಜೆಪಿ–ಆರ್‌ಎಸ್‌ಎಸ್ ಸಮಾಜವನ್ನು ಜಾತಿ, ಧರ್ಮದ ಆಧಾರದ ಮೇಲೆ ವಿಭಜಿಸುತ್ತಿದೆ. ಏಕತೆಯ ಪರ ಧ್ವನಿ ಎತ್ತಿದವರನ್ನು ಕೊಲ್ಲುತ್ತಿದೆ. ರಾಜ್ಯದಲ್ಲಿ ಏಕತೆಯ ಧ್ವನಿಯಾಗಿದ್ದ ಸಂಶೋಧಕ ಎಂ.ಎಂ.ಕಲಬುರ್ಗಿ ಅವರನ್ನು ಕೊಲ್ಲಲಾಯಿತು. ದೇಶದ ಜನ ಏಕತೆಯಿಂದ ಇರಬಾರದು ಎಂಬುವುದು ಅದರ ಉದ್ದೇಶ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

> **ಕೇಂದ್ರ ಸರ್ಕಾರ ರಾಷ್ಟ್ರದ 144 ಕೋಟಿ ಜನರಿಗಾಗಿ ಕೆಲಸ ಮಾಡುತ್ತಿಲ್ಲ. ಕೇವಲ ನಾಲ್ಕೈದು ಕುಟುಂಬಗಳ ಹಿತಾಸಕ್ತಿ ಕಾಯುತ್ತಿದೆ. ಅಂಬಾನಿ, ಅದಾನಿ, ಟಾಟಾ, ಬಿರ್ಲಾ ಅವರ ಕುಟುಂಬಕ್ಕೆ ರಾಷ್ಟ್ರದ ಸಂಪತ್ತು ಧಾರೆ ಎರೆಯುತ್ತಿದೆ. ಅವರು ಒಂದು ಲೋಟ ನೀರು ಕೇಳಿದರೆ, ಸರ್ಕಾರ ಒಂದು ಬಿಂದಿಗೆ ನೀರು ಕೊಡುತ್ತಿದೆ**
> -ಎ.ವಿಜಯ ರಾಘವನ್, ಮಾಜಿ ಸಂಸದ, ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯ

---

# ಒಕ್ಕಲಿಗರ ಸಂಘದ ಕಟ್ಟಡ ನಿರ್ಮಾಣಕ್ಕೆ 25 ಲಕ್ಷರೂ. ಅನುದಾನ

• **ಉದಯವಾಹಿನಿ, ಚಾಮರಾಜನಗರ**



ಉದಯವಾಹಿನಿ ಚಿತ್ರ

ನಗರದ ಹೊರವಲಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವೈಯುಕ್ತಿಕವಾಗಿ ಖರೀದಿಸಿ ತಾಲ್ಲೂಕು ಒಕ್ಕಲಿಗರ ಸಂಘಕ್ಕೆ ನೀಡಿರುವ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ತಮ್ಮ ವಿಧಾನ ಪರಿಷತ್ ಕ್ಷೇತ್ರದ ಅನುದಾನದಲ್ಲಿ 25 ಲಕ್ಷ ರೂ. ನೀಡುವುದಾಗಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಭರವಸೆ ನೀಡಿದರು.

ನಗರದ ಕೊಳದ ಬೀದಿಯಲ್ಲಿರುವ ಒಕ್ಕಲಿಗರ ಸಮುದಾಯ ಭವನದಲ್ಲಿ ತಾಲ್ಲೂಕು ಒಕ್ಕಲಿಗರ ಸಂಘದ ವತಿಯಿಂದ ರಾಷ್ಟ್ರಕವಿ ಕುವೆಂಪುರವರ ಜನ್ಮದಿನಾಚರಣೆ ಕಾರ್ಯಕ್ರಮ ಹಾಗೂ ತಾಲ್ಲೂಕು ಒಕ್ಕಲಿಗರ ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಕುವೆಂಪು ಅವರು ಕನ್ನಡದ ಅಗ್ರಮಾನ್ಯ ಕಾದಂಬರಿಕಾರ, ನಾಟಕಕಾರ, ವಿಮರ್ಶಕ, ಚಿಂತಕರಾಗಿ ಕನ್ನಡ ನಾಡಿಗೆ ನೀಡಿದ ಕೊಡುಗೆ ಅನನ್ಯವಾಗಿದೆ. ಅವರನ್ನು ಕವಿಯಾಗಿ, ಋಷಿಯಾಗಿ ನಾಟಕಗಳ ಮೂಲಕ ನೋಡುವಾಗ ಅವರ ಆಲೋಚನಾಕ್ರಮಕ್ಕೆ ಇರುವ ವೈಚಾರಿಕ ನಿಲುವು ತಿಳಿಯುತ್ತದೆ. ಇಂದಿನ ಯುವ ಜನಾಂಗಕ್ಕೆ ಇವರ ಕನ್ನಡದ ಅದ್ಭುತ ಕೊಡುಗೆಯು ಸ್ಫೂರ್ತಿದಾಯಕ. ಕುವೆಂಪುರವರ ಕನ್ನಡದ ಬಗ್ಗೆ ಚಿಂತನೆ, ಕಾಳಜಿ, ಮಾತಿನ ಪ್ರಜ್ಞೆ, ರೈತರ ಬಗ್ಗೆ ಇರುವ ಗೌರವ ಎಲ್ಲವೂ ಸ್ಫೂರ್ತಿದಾಯಕ. ಬಾರಿಸು ಕನ್ನಡ ಡಿಂಡಿಮವ ಎನ್ನುವ ಮೂಲಕ ಕನ್ನಡಕ್ಕೆ ಅದ್ಭುತವಾದ ಹಾಡನ್ನು ಕೊಟ್ಟು ಜೈ ಭಾರತ ಜನನಿಯ ಎಂಬ ಅರ್ಥಪೂರ್ಣವಾದ ನಾಡಗೀತೆಯಾಗಿ ನೀಡಿದ ನಮ್ಮ ವಿಶ್ವಮಾನವ ಕವಿಯಾಗಿದ್ದಾರೆ. ಇದು ನಮ್ಮ ಸಮುದಾಯಕ್ಕೆ ಹೆಮ್ಮೆತರುವಂತಹದ್ದು ಎಂದರು.

ತಾಲ್ಲೂಕು ಒಕ್ಕಲಿಗರ ಸಂಘದ ಗೌರವ ಅಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ ಮಾತನಾಡಿ, ಬೆಂಗಳೂರು ನಿರ್ಮಾತೃ ಕೆಂಪೇಗೌಡರು, ರಾಷ್ಟ್ರಕವಿ ಕುವೆಂಪು ಅವರು ದೊಡ್ಡ ವ್ಯಕ್ತಿಗಳಾಗಿ ಬೆಳೆದು ಈ ನಾಡಿಗೆ ತಮ್ಮಯಾದ ಕೊಡುಗೆ ನೀಡಿದ್ದಾರೆ.

ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

**ಕೊಡುಗೈ ಸಮಾಜ**

**ಒಕ್ಕಲಿಗ ಸಮುದಾಯ ಕೊಡುಗೈ ಸಮಾಜವಾಗಿದೆ. ಬೆಂಗಳೂರು ನಿರ್ಮಾತೃ ಕೆಂಪೇಗೌಡರು, ರಾಷ್ಟ್ರಕವಿ ಕುವೆಂಪು ಅವರು ನಮ್ಮ ಸಮುದಾಯದ ಮಹಾನ್ ಚೇತನರಾಗಿದ್ದು, ನಾಡಿಗೆ ಉತ್ತಮ ಸೇವೆ ನೀಡಿದ್ದಾರೆ. ಇಂದಿನ ಪೀಳಿಗೆಗಳಿಗೆ ಕುವೆಂಪು ಮಾತು, ಸಂದೇಶಗಳು ಭಾರಿ ಮಟ್ಟದಲ್ಲಿ ಪರಿಣಾಮ ಬೀರುತ್ತದೆ.**

---

# ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನಾಚರಣೆ

• **ಉದಯವಾಹಿನಿ, ಪಿರಿಯಾಪಟ್ಟಣ**

ಸರ್ಕಾರಗಳು ರೈತರ ಹಿತ ಕಾಯಲು ಕೃಷಿ ಅಭಿವೃದ್ಧಿಯ ಯೋಜನೆಗಳನ್ನು ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು. ತಾಲ್ಲೂಕಿನ ಆಲನಹಳ್ಳಿ ಗ್ರಾಮದಲ್ಲಿ ರಾಷ್ಟ್ರ ಕವಿ ಕುವೆಂಪುರವರ ಜನ್ಮ ದಿನಾಚರಣೆಯ ಆಚರಿಸಿದ ಕರ್ನಾಟಕ ರಾಜ್ಯ ರೈತ ಸಂಘವು ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ಸರಕಾರಗಳು ಕೃಷಿ ಅಭಿವೃದ್ಧಿಯ ರೈತರ ಹಿತ ಕಾಯುವ ಬದಲು ರೈತರಲ್ಲಿ ಜಾತಿ ರಾಜಕೀಯದ ವಿಷ ಬೀಜ ಬಿತ್ತುತ್ತಿದೆ. ರೈತರು ಬೆಳೆದ ಬೆಲೆಗಳಿಗೆ ವೈಜ್ಞಾನಿಕ ಬೆಲೆ ಇಲ್ಲದೆ ಕೃಷಿ ವಿರೋಧಿ ಕಾಯ್ದೆಗಳನ್ನು ಸರ್ಕಾರ ಜಾರಿಗೊಳಿಸುತ್ತಿದೆ. ಇಂದು ರೈತನು ಸಾಲಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದಿದ್ದು ವ್ಯವಸಾಯ ಮಾಡಲು ಕೂಡ ಮನಸ್ಸು ತೋರುತ್ತಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರವನ್ನು ಎಚ್ಚರಿಸಲು ಸಂಘಟನೆಗಳು ಅನಿವಾರ್ಯವಾಗಿದ್ದು ರಾಜ್ಯಾದ್ಯಂತ ಗ್ರಾಮ ಘಟಕಗಳನ್ನು ಸ್ಥಾಪಿಸಿ ಗ್ರಾಮೀಣ ಮಟ್ಟದಲ್ಲಿ ರೈತ ಸಂಘಟನೆಯನ್ನು ಉಲ್ಬಣಗೊಳಿಸಲಾಗಿಸುತ್ತಿದೆ. ನೂತನವಾಗಿ ಆಯ್ಕೆಯಾಗಿರುವ ಸಂಘದ ಪದಾಧಿಕಾರಿಗಳು ರೈತರ, ಶೋಷಿತರ ಮತ್ತು ಅನ್ಯಾಯಕ್ಕೆ ಒಳಗಾದವರ ಪರವಾಗಿ ಹೋರಾಟ ಮಾಡುವುದರ ಮೂಲಕ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಬೇಕು ಎಂದರು. ರಾಜ್ಯ ರೈತ ಸಂಘದ ವಿಭಾಗಿಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜ್ ಮಾತನಾಡಿ ಸಾಮಾಜಿಕ ಪರಿವರ್ತನೆಗಾಗಿ ರೈತ ಚಳುವಳಿ, ದಲಿತ ಚಳುವಳಿ ಮತ್ತು ಕನ್ನಡ ಪರ ಚಳುವಳಿಗಳು ಹುಟ್ಟಿಕೊಂಡವು. ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ ಕುವೆಂಪು ರವರಂತಹ ಅನೇಕ ಮಹನೀಯರ ಆದರ್ಶಗಳನ್ನು ಸಂಘಟನೆಯು ಮೈಗೂಡಿಸಿಕೊಂಡಿದೆ. ಇವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸುವುದರ ಮೂಲಕ ಮಹನೀಯರಿಗೆ ಗೌರವ ಸಲ್ಲಿಸಬೇಕು. ಸಂಘದ ಸದಸ್ಯರು ಒಗ್ಗಟ್ಟಿನಿಂದ ಸಂಘದ ಉಳಿವಿಗೆ ಶ್ರಮಿಸಿ ಸಂಘದ ಹೆಸರನ್ನು ಉಳಿಸಬೇಕು ಎಂದರು.



ಉದಯವಾಹಿನಿ ಚಿತ್ರ

**ರೈತರಲ್ಲಿ ಜಾತಿ ರಾಜಕೀಯದ ವಿಷ ಬೀಜ**

---

# ಹೆಣ್ಣು ಮಕ್ಕಳಿಗೆ ಆರೋಗ್ಯ ಅರಿವು ಅಗತ್ಯ: ಮಂಜುಳ

• **ಉದಯವಾಹಿನಿ, ತಿಪಟೂರು**

ಮುಟ್ಟಿನಿಂದಲೇ ನಮ್ಮೆಲ್ಲರ ಹುಟ್ಟು ಮುಟ್ಟೆ ಈ ಸೃಷ್ಟಿಯ ಗುಟ್ಟು, ಆದರೂ ಇಂದಿಗೂ ಮುಟ್ಟು ಮೈಲಿಗೆ ಅನ್ನೊ ನಂಬಿಕೆಯಿಂದ ನಮ್ಮ ಸಮಾಜ ಹೊರ ಬಂದಿಲ್ಲ' ಎಂದು ಮೀಟು ಸಂಸ್ಥೆ ನಿರ್ವಾಹಕಿ ಮಂಜುಳ ತಿಳಿಸಿದರು.

ತಾಲ್ಲೂಕಿನ ಚಿಕ್ಕಹೊನ್ನವಳ್ಳಿ ಗ್ರಾಮದಲ್ಲಿ ಮೀಟು ಸಂಸ್ಥೆಯಿಂದ ನಡೆದ ಹೆಣ್ಣು ಮಕ್ಕಳಿಗೆ ಆರೋಗ್ಯ ಹಾಗೂ ಸ್ವಚ್ಛತೆ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೀಟು ಸಂಸ್ಥೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಅರಿವು ಮೂಡಿಸುತ್ತಿದ್ದು ತಿಪಟೂರು ತಾಲ್ಲೂಕಿನ ಗುಡಿಗೊಂಡನಹಳ್ಳಿ ಗ್ಯಾರಘಟ್ಟ ಮತ್ತು ಹೊನ್ನವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹನ್ನೆರಡು ಗ್ರಾಮಗಳಲ್ಲಿ ಮೀಟು ಕೆಲಸ ಮಾಡಿದೆ.

ಗೋಕುಲ್ ದಾಸ್ ಸಂಸ್ಥೆ ಸಹಭಾಗಿತ್ವದಲ್ಲಿ ಮೀಟು ಸಂಸ್ಥೆ ಚಿಕ್ಕಹೊನ್ನವಳ್ಳಿ ಗ್ರಾಮದ ಹೆಣ್ಣುಮಕ್ಕಳಿಗೆ ಮುಟ್ಟಿನ ರಕ್ತ. ಬಿಳಿ ಮುಟ್ಟು, ಮುಟ್ಟಿನ ಸಮಯದಲ್ಲಿ ಬಳಸುವ ಉತ್ಪನ್ನಗಳು ಹಾಗೂ ಅವುಗಳಿಂದ ಪರಿಸರ ಮತ್ತು ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಬಗ್ಗೆ, ಅರಿವು ಮೂಡಿಸಲಾಯಿತು. ವೈಯುಕ್ತಿಕ ಸ್ವಚ್ಛತೆ, ಮುಟ್ಟಿನ ಸಮಯದಲ್ಲಿ ರೂಢಿಯಲ್ಲಿರುವ ಆಚರಣೆ– ಸಂಪ್ರದಾಯಗಳ ವೈಜ್ಞಾನಿಕ ವಿವರಣೆಯೊಂದಿಗೆ ಪೌಷ್ಟಿಕ ಆಹಾರದ ಪ್ರಾಮುಖ್ಯತೆ ಬಗ್ಗೆ ಅರಿವು ಮೂಡಿಸಲಾಯಿತು.

ಮೀಟು ಸಂಸ್ಥೆಯ ಗಾಯತ್ರಿ, ಬಾಯಿ, ಮಂಜುಳ ರವಿ, ಸರಸ್ವತಿ, ಗಾಯತ್ರಿ ಪವಿತ್ರ, ಗ್ರಾಮದ ಪ್ರತಿನಿಧಿಗಳಾದ ದಾಕ್ಷಾಯಿಣಿ, ರಾಧಾ ಪಾಲ್ಗೊಂಡಿದ್ದರು.



ಉದಯವಾಹಿನಿ ಚಿತ್ರ

---

# ಪ್ರತಿದಿನ ಸಂಧ್ಯಾವಂದನೆ ಮಾಡಿ ನಮ್ಮ ಸಂಸ್ಕಾರ ಉಳಿಸಿ

• **ಉದಯವಾಹಿನಿ, ನಂಜನಗೂಡು**

ಬ್ರಾಹ್ಮಣರು ಪ್ರತಿದಿನ ಮನೆಯಲ್ಲಿ ಗಾಯತ್ರಿ ಮಂತ್ರ ಪಠಣ ಮಾಡಿ ಎಂದು ವಿಪ್ರರಿಗೆ ಕಿವಿ ಮಾತು ಹೇಳಿದರು. ನಗರದ ಯಾತ್ರಿ ಭವನದಲ್ಲಿ ಸೃಜನ ಸೇವಾಭಿವೃದ್ಧಿ ನ್ಯಾಸ್ ಟ್ರಸ್ಟ್‌ನ 20ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಜ್ಯೋತಿ ಬೆಳಗಿಸಿ ಮಾತನಾಡಿದ ಶ್ರೀ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ರಾಮಚಂದ್ರ ಉದ್ಘಾಟನೆ ಮಾಡಿ ನಾವು ನಮ್ಮ ಮಕ್ಕಳಿಗೆ ಸಂಸ್ಕಾರ ಹಾಗೂ ಆಚಾರ ವಿಚಾರಗಳನ್ನು ಉಳಿಸಿ ಹಾಗೂ ಇಂತಹ ಕಾರ್ಯಕ್ರಮ ಗಳಿಗೆ ಯುವಕ ಹಾಗೂ ಯುವತಿಯರು ಭಾಗವಹಿಸಿ. ಶೃಂಗೇರಿಯಲ್ಲಿ ಈ ಬಾರಿ ಗಾಯತ್ರಿ ಪಠಣದ ಬರೆಯುವ ಸ್ಪರ್ಧೆ ನಡೆಯಲಿದೆ. ಹಾಗೂ ಸಮುದಾಯದ ಸಮ್ಮೇಳನಕ್ಕೆ ಭಾಗವಹಿಸಿ ಎಂದರು. ಮುಖ್ಯ ಭಾಷಣಕಾರಾದ ಸಂಸ್ಕೃತ ಪಾಠಶಾಲೆಯ ಪ್ರಾಧ್ಯಾಪಕ ಎಂ.ಎ. ಆಳ್ವಾಸ್ ಬ್ರಾಹ್ಮಣರ ದಿನ ಚರಿ ಬಗ್ಗೆ ಮಾತನಾಡುತ್ತಾ ಈಗ ಉಪನಯನವಾದ ಯುವಕರು ಪ್ರತಿದಿನ ಗಾಯತ್ರಿ ಜಪ ಮಾಡಿ ಇದರಿಂದ ನಿಮ್ಮ ದೇವರು ಶಕ್ತಿ ಹಾಗೂ ಜ್ಞಾನಾರ್ಜನೆ ಹೆಚ್ಚಾಗುವುದು.

ಹಾಗೂ ಸಮುದಾಯದವರು ಒಗ್ಗೂಡಿಸಿ ಎಂದರು. ಹಾಗೂ 2025 ನೇ ವರ್ಷದ ಕ್ಯಾಲೆಂಡರ್ ನನ್ನು ವಿಪ್ರಮುಖಂಡ ಯು. ಎನ್. ಪದ್ಮನಾಭರಾವ್ ಬಿಡುಗಡೆ ಮಾಡಿ ನಾವು ನಮ್ಮ ಸಮುದಾಯದ ಬಡವರ್ಗದವರಿಗೆ ಸಹಾಯ ಮಾಡಿ ಹಾಗೂ ಪ್ರತಿದಿನ ಕ್ಯಾಲೆಂಡರ್ ನಲ್ಲಿ ಕಾಲಗಳನ್ನು ತಿಳಿದು ಕೊಳ್ಳಿ ಎಂದರು.

ವಿದೂಷಿ. ರಮ್ಯ. ಸಮಾಜಸೇವಕಿ ಕುಮಾರಿ ಶಾಮೀಕಾ.ಹಾಗೂ ಸಾಹಿತ್ಯಕ್ಷೇತ್ರದಲ್ಲಿ ಗುರುನಾಥ ಮೂವರಿಗೆ ಸೃಜನ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಚಲನ ಚಿತ್ರ ಪೋಷಕ ನಟ ಅರವಿಂದರಾವ್ ಅವರನ್ನು ಗೌರವಿಸಲಾಯಿತು.

ಶೈಕ್ಷಣಿಕ ಸಹಾಯಧನ. ಎಸ್. ಎಲ್.ಎಲ್.ಸಿ ಹಾಗೂ ಪಿಯುಸಿ ಮೂವರು ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಪ್ರತಿಭಾ ಕಾರಂಜಿಯಲ್ಲಿ ವಿಜೇತರಾದ ಮಕ್ಕಳಿಗೆ ದಿವಂಗತ ಟಿ.ಡನ್. ಶ್ರೀನಿವಾಸಮೂರ್ತಿ ನೆನಪಿ ಗಾಗಿ ಬಹುಮಾನ ನೀಡಲಾಯಿತು.



ಉದಯವಾಹಿನಿ ಚಿತ್ರ

**ಟ್ರಸ್ಟ್‌ನ 20ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ**

---

# ಧ್ಯಾನದಿಂದ ಶಾಂತಿ, ಆರೋಗ್ಯ ಲಭಿಸುತ್ತದೆ: ಬಿ.ಕೆ.ಲಕ್ಷ್ಮೀಜಿ

## ಧ್ಯಾನ ಮಾಡುವುದರಿಂದ ಮನಸ್ಸು ಪರಿಶುದ್ಧವಾಗಿರುತ್ತದೆ, ಪ್ರಶಾಂತತೆ ಲಭಿಸುತ್ತದೆ, ಇದರಿಂದ ನೆಮ್ಮದಿಯೂ ಇರುತ್ತದೆ

• **ಉದಯವಾಹಿನಿ, ಮೈಸೂರು**

ಧ್ಯಾನದಿಂದ ಶಾಂತಿ ಮತ್ತು ಆರೋಗ್ಯ ಲಭಿಸುತ್ತದೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ ಬಿ.ಕೆ. ಲಕ್ಷ್ಮೀಜಿ ಹೇಳಿದರು.

ಹೂಟಗಳ್ಳಿಯ ಅನಂತೇಶ್ವರ ಭವನದಲ್ಲಿ ಭಾನುವಾರ ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ಸ್ ಇಂಟರ್ ನ್ಯಾಷನಲ್ ಪ್ರಾಂತೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಆದ್ದರಿಂದ ಪ್ರತಿಯೊಬ್ಬರೂ ಬೆಳಗ್ಗೆ ಹಾಗೂ ಸಂಜೆಯ ವೇಳೆ ಧ್ಯಾನಾಸಕ್ತರಾಗಬೇಕು ಎಂದು ಕರೆ ನೀಡಿದರು.

ಧ್ಯಾನ ಮಾಡುವುದರಿಂದ ಮನಸ್ಸು ಪರಿಶುದ್ಧವಾಗಿರುತ್ತದೆ. ಪ್ರಶಾಂತತೆ ಲಭಿಸುತ್ತದೆ. ಇದರಿಂದ ನೆಮ್ಮದಿಯೂ ಇರುತ್ತದೆ. ಕೋಪ ಮಾಡಿಕೊಳ್ಳದಿದ್ದಲ್ಲಿ ಆರೋಗ್ಯವೂ ಉತ್ತಮವಾಗಿರುತ್ತದೆ ಎಂದು ಹೇಳಿದರು.

ಯಾವುದೇ ರಕ್ತಪಾತವಿಲ್ಲದೆ ಅಹಿಂಸೆಯ ಮೂಲಕ ಸ್ವಾತಂತ್ರ್ಯ ಪಡೆದ ಹೆಗ್ಗಳಿಕೆ ನಮ್ಮ ದೇಶಕ್ಕಿದೆ. ನಮ್ಮ ಮಕ್ಕಳು ಹೇಳುವುದನ್ನು ಕೇಳುವುದಿಲ್ಲ.

ಆದರೆ, ಮಾಡುವುದನ್ನು ಅನುಕರಿಸುತ್ತಾರೆ. ಆದ್ದರಿಂದ ಪೋಷಕರು ಸರಿಯಾದ ರೀತಿಯಲ್ಲಿ ನಡೆದುಕೊಂಡರೆ ಮಕ್ಕಳು ಕೂಡ ಪಾಲಿಸುತ್ತಾರೆ ಎಂದರು.


ಆಹಾರ ಪದ್ಧತಿ ಮತ್ತು ಜೀವನಶೈಲಿ ಕೂಡ ಮುಖ್ಯ. ಆದ್ದರಿಂದ ಪ್ರತಿಯೊಬ್ಬರೂ ನೀರು, ನಿದ್ದೆ, ಪೌಷ್ಟಿಕ ಆಹಾರ ವ್ಯಾಯಾಮ, ಸಮಯ– ಈ ಪಂಚ ಸೂತ್ರಗಳನ್ನು ಅನುಸರಿಸಿದರೆ ಆರೋಗ್ಯದಿಂದ ಇರಬಹುದು. ಮನಸ್ಥಿತಿ ಸರಿ ಇದ್ದಲ್ಲಿ ಪರಿಸ್ಥಿತಿ, ಮನೆ ಸ್ಥಿತಿ, ಮನಿ ಸ್ಥಿತಿ–ಎಲ್ಲವೂ ಚೆನ್ನಾಗಿರುತ್ತದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಧ್ಯಾನ ಮುಖ್ಯ ಎಂದು ಹೇಳಿದರು.

ಪ್ರಾಂತೀಯ ಅಧ್ಯಕ್ಷೆ ಇಂದಿರಾ ವೆಂಕಟೇಶ್ ಮಾತನಾಡಿದರು.

ಅತಿಥೇಯ ಸಮಿತಿ ಅಧ್ಯಕ್ಷ ಒಂದನೇ ಉಪ ರಾಜ್ಯಪಾಲ ಎಸ್. ವೆಂಕಟೇಶ್ ಸ್ವಾಗತಿಸಿದರು. ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ.ಬೈರಿ ಪ್ರಾಸ್ತಾವಿಕ ಭಾಷಣ ಮಾಡಿದರು. ಜಿಲ್ಲಾ ಖಜಾಂಚಿ ಕೃಷ್ಣೋಜಿರಾವ್ ವಂದಿಸಿದರು. ಸಿರಿಮಾ ಮನೋಜ್ ರಾಷ್ಟ್ರಧ್ವಜ, ಶ್ರೀಕಾಂತ್ ಅಲೆಯನ್ಸ್ ಧ್ವಜವನ್ನು ವೇದಿಕೆಗೆ ತಂದರು.

ಕ್ಲಬ್ಬಿನ ಮಾಜಿ ರಾಜ್ಯಪಾಲ ಜಿ.ಎಸ್. ನಂಜುಂಡಸ್ವಾಮಿ, ಮೂರನೇ ಉಪ ರಾಜ್ಯಪಾಲ ಎಂ.ಎಸ್. ಸಂತೋಷ್ ಕುಮಾರ್, ಜಿಲ್ಲಾ ಸಂಪುಟ ಕಾರ್ಯದರ್ಶಿ ನ. ಗಂಗಾಧರಪ್ಪ, ಪಿಆರ್‌ಒ ಎನ್. ಬೆಟ್ಟೇಗೌಡ, ಅತಿಥೇಯ ಸಮಿತಿ ಕಾರ್ಯದರ್ಶಿ ಎಸನ್. ಸುನಿಲ್ ಕುಮಾರ್, ಖಜಾಂಚಿ ಶ್ರೀಕಾಂತ್ , ವಲಯ ಅಧ್ಯಕ್ಷೆ ಸಿರಿಮಾ ಬಿ. ರಾಜು ಇದ್ದರು.

> **ಆತ್ಮಹತ್ಯೆ ಹಾಗೂ ಅಪರಾಧ ಕೃತ್ಯ ಎಸಗುವವರು ಆ ಕ್ಷಣದಲ್ಲಿ ತಮ್ಮ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡಲ್ಲಿ ಅವಘಡಗಳಿಂದ ಪಾರಾಗಬಹುದು. ಒಂದು ಕ್ಷಣ ಆಲೋಚಿಸಿದಲ್ಲಿ ಮುಂದೆ ಪರಿತಪಿಸುವುದು ತಪ್ಪುತ್ತದೆ**
> -ಅಂಶಿ ಪ್ರಸನ್ನಕುಮಾರ್, ಹಿರಿಯ ಪತ್ರಕರ್ತ



ಉದಯವಾಹಿನಿ ಚಿತ್ರ

> **ತಮಗೆ ಒಂದು ವರ್ಷ ಅವಧಿಯಲ್ಲಿ ಮೂರು ತಿಂಗಳು ಮಾತ್ರ ಬಾಕಿ ಇದೆ. ಈ ಅವಧಿಯಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು, ಪ್ರತಿಯೊಬ್ಬರೂ ಸಹಕಾರ ನೀಡುವಂತೆ ಮನವಿ ಮಾಡಿದರು**
> -ಸಿರಿಬಾಲು, ಅಲೆಯನ್ಸ್ ರಾಜ್ಯಪಾಲ

> **ಮಕ್ಕಳ ಮನಸ್ಸು ಚಂಚಲವಾಗಿರುತ್ತದೆ. ಮಕ್ಕಳಲ್ಲಿ ಕಂಡು ಬರುವ ಖಿನ್ನತೆ ಹೋಗಲಾಡಿಸಲು ಕೌನ್ಸೆಲಿಂಗ್ ಮಾಡಲಾಗುತ್ತದೆ. ಆಗಲೂ ಕೂಡ ಧ್ಯಾನ ಮಾಡುವಂತೆ ಸೂಚಿಸಲಾಗುತ್ತದೆ. ಮನಸ್ಸಿಗೆ ಶಾಂತಿ, ನೆಮ್ಮದಿ ಇಲ್ಲದಿದ್ದಲ್ಲಿ ಆರೋಗ್ಯ ಹದಗೆಡುತ್ತದೆ. ಕೆಲವರು ಧ್ಯಾನ ಮಾಡಿ ಎಂದರೆ ಪೂಜೆ ಮಾಡುವುದು, ನಾವೇಕೆ ಮಾಡಬೇಕು ಎಂದುಕೊಳ್ಳುತ್ತಾರೆ. ಧ್ಯಾನ ಬೇರೆ, ಪೂಜೆ ಬೇರೆ. ಧ್ಯಾನ ಮನಸ್ಸನ್ನು ಧನಾತ್ಮಕವಾಗಿ ಪರಿವರ್ತಿಸುತ್ತದೆ ಎಂದು ಹೇಳಿದರು**
> -ವಿಜಯಕುಮಾರ್ ಬಲ್ಲೇನಹಳ್ಳಿ, ದಕ್ಷಿಣ ವಲಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿ

**ದೈಹಿಕ, ಮಾನಸಿಕ ಆರೋಗ್ಯಕ್ಕೆ ಧ್ಯಾನ**

---

## ಮಿನಿ ನ್ಯೂಸ್

### ಹೊಸ ವರ್ಷಾಚರಣೆಗೆ ನಿಷೇಧ

• **ಉದಯವಾಹಿನಿ ಹಲಗೂರು**

ಡಿ.31 ಮತ್ತು ಜ.1 ರ ಬುಧವಾರ ಸೇರಿದಂತೆ ಪ್ರವಾಸಿಗರಿಗೆ ಎರಡು ದಿನ ಮುತ್ತತ್ತಿಗೆ ಪ್ರವೇಶ ನಿಷೇಧಿಸಿ ಮಳವಳ್ಳಿ ತಹಶೀಲ್ದಾರ್ ಎಸ್.ವಿ.ಲೋಕೇಶ್ ನಿಷೇಧಾಜ್ಞೆ ಜಾರಿ ಮಾಡಿದ್ದಾರೆ. ಹಲಗೂರು ಸಮೀಪದ ಮುತ್ತತ್ತಿ ಗ್ರಾಮ ಪ್ರಸಿದ್ಧ ಯಾತ್ರಾ ಹಾಗೂ ಪ್ರೇಕ್ಷಣೀಯ ಸ್ಥಳವಾಗಿದೆ.

ಮುತ್ತತ್ತಿ ಕಾವೇರಿ ನದಿ ದಂಡೆಯಲ್ಲಿ ಹೊಸ ವರ್ಷ ಆಚರಿಸುವ ಸಲುವಾಗಿ ಬೆಂಗಳೂರು, ಮೈಸೂರು, ರಾಮನಗರ, ಕನಕಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಬರುವ ಪ್ರವಾಸಿಗರು ಮದ್ಯ ಸೇವನೆ ಮತ್ತು ಮೋಜು ಮಸ್ತಿ ಮಾಡುವ ಸಾಧ್ಯತೆ ಹೆಚ್ಚಿರುವುದರಿಂದ ಕ್ರಮ ಕೈಗೊಳ್ಳಲಾಗಿದೆ. ಸಂಭವಿಸಬಹುದಾದ ಅಹಿತಕರ ಘಟನೆಗಳನ್ನು ತಡೆಯಲು, ವನ್ಯಜೀವಿ ಸಂರಕ್ಷಣೆ ಹಿತದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ನಿಷೇಧಾಜ್ಞೆ ಜಾರಿ ಮಾಡುವಂತೆ ತಹಶೀಲ್ದಾರ್ ಅವರಿಗೆ ಹಲಗೂರು ಪಿಎಸ್ಐ ಬಿ.ಮಹೇಂದ್ರ, ಮತ್ತು ಕಾವೇರಿ ವನ್ಯಜೀವಿ ವಲಯ ಅರಣ್ಯ ಅಧಿಕಾರಿ ಸಿ.ಅನಿಲ್ ಕುಮಾರ್ ಅವರು ಮನವಿ ಮಾಡಿದ್ದರು.

ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಕೋರಿಕೆಯ ಮೇರೆಗೆ 00 1630 2.310 0 6 4. 2 ಗುರುವಾರ ಬೆ.6 ಗಂಟೆಯವರೆಗೆ ಮುತ್ತತ್ತಿ, ಭೀಮೇಶ್ವರಿ ಆರಣ್ಯ ಪ್ರದೇಶಕ್ಕೆ ನಿಷೇಧಾಜ್ಞೆ ಹೊರಡಿಸಲಾಗಿದೆ.

### ದುರ್ನಾತ ಕೇಂದ್ರವಾದ ನಗರ ಬಸ್ ನಿಲ್ದಾಣ

• **ಉದಯವಾಹಿನಿ ಕೆಜಿಎಫ್**

ಪ್ರತಿನಿತ್ಯ ನೂರಾರು ಪ್ರಯಾಣಿಕರು ಮತ್ತು ನೂರಾರು ಬಸ್‌ಗಳು ಓಡಾಡುವ ರಾಬರ್ಟ್ಸ್‌ಪೇಟೆಯ ನಗರಸಭೆ ಬಸ್ ನಿಲ್ದಾಣವು ಹಲವು ದಿನಗಳಿಂದ ದುರ್ನಾತ ಬೀರುವ ಕೇಂದ್ರವಾಗಿ ಪರಿವರ್ತನೆಯಾಗಿದೆ ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸಿದ್ದಾರೆ. ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ಹೋಟೆಲ್‌ನಿಂದ ಬರುವ ತ್ಯಾಜ್ಯದ ನೀರು ಬಸ್ ನಿಲ್ದಾಣದ ಆವರಣದಲ್ಲಿ ಆವರಿಸಿಕೊಂಡಿದೆ. ದುರ್ನಾತ ಬೀರುವ ತ್ಯಾಜ್ಯದ ನೀರಿನ ಹರಿಯುವಿಕೆಯಿಂದ ಬಸ್ ನಿಲ್ದಾಣದ ವರ್ತಕರು ಕಂಗಾಲಾಗಿದ್ದಾರೆ. ಇಡೀ ದಿನ ದುರ್ವಾಸನೆಯಲ್ಲೇ ವ್ಯಾಪಾರ ಮಾಡುವ ದುಸ್ಥಿತಿಗೆ ಸಿಲುಕಿದ್ದಾರೆ. ಹೋಟೆಲ್‌ನ ತ್ಯಾಜ್ಯ ಮತ್ತು ಶೌಚಾಲಯದ ನೀರು ಚರಂಡಿಯ ಸಣ್ಣ ಕಿಂಡಿಯಿಂದ ಹರಿದು ಬರುತ್ತಿದೆ. ಬಸ್ ನಿಲ್ದಾಣದ ಚರಂಡಿಯು ಕೆಲವು ಅಂಗಡಿ ಮಾಲೀಕರಿಂದ ಒತ್ತುವರಿಯಾಗಿದೆ. ಅಂಗಡಿಗಳನ್ನು ಚರಂಡಿಯ ಮೇಲೆಯೇ ಕಟ್ಟಲಾಗಿದೆ. ಒತ್ತುವರಿ ತೆರವು ಮಾಡಲು ನಗರಸಭೆ ಕ್ರಮ ಕೈಗೊಳ್ಳದ ಕಾರಣ ಮತ್ತು ಬಸ್ ನಿಲ್ದಾಣದಲ್ಲಿ ನಿರ್ಮಿಸಲಾದ ಚರಂಡಿಯನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವುದು ಇಷ್ಟೆಲ್ಲಾ ಅನಾಹುತಕ್ಕೆ ಕಾರಣವಾಗಿದೆ ಎಂಬ ಆರೋಪ ಕೇಳಿಬಂದಿದೆ.

### ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಣೆ ಸರ್ಕಾರಿ ಕಟ್ಟಡಗಳು ಖಾಲಿ–ಖಾಲಿ

• **ಉದಯವಾಹಿನಿ ಮುಳಬಾಗಿಲು**

ತಾಲ್ಲೂಕಿನಲ್ಲಿ ಹತ್ತಾರು ಸರ್ಕಾರಿ ಕಚೇರಿಗಳು ಸುಮಾರು ವರ್ಷಗಳಿಂದ ಖಾಲಿಯಾಗಿಯೇ ಬಿದ್ದಿವೆ. ಆದಾಗ್ಯೂ, ತಾಲ್ಲೂಕು ಕೇಂದ್ರದಲ್ಲಿರುವ ಹಲವು ಸರ್ಕಾರಿ ಕಚೇರಿಗಳು ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಹೀಗಾಗಿ, ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲ್ಪಡುತ್ತಿರುವ ಸರ್ಕಾರಿ ಕಚೇರಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಬೇಕು ಎಂಬುದು ಸ್ಥಳೀಯರ ಬೇಡಿಕೆಯಾಗಿದೆ. ಕೆಲವು ಸರ್ಕಾರಿ ಕಟ್ಟಡಗಳು ಸುಸಜ್ಜಿತವಾಗಿದ್ದರೂ, ಅವುಗಳು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಒಂದೆಡೆ ಸರ್ಕಾರದ ಬಾಡಿಗೆ ವ್ಯರ್ಥವಾಗುತ್ತಿದ್ದರೆ, ಮತ್ತೊಂದೆಡೆ ಸರ್ಕಾರದ ಕಟ್ಟಡಗಳು ನಿರುಪಯುಕ್ತವಾಗಿ, ಪಾಳು ಬಂಗಲೆಯಾಗುತ್ತಿವೆ.

### ನರೇಂದ್ರಸ್ವಾಮಿ ರಾಜೀನಾಮೆಗೆ ಆಗ್ರಹ

• **ಉದಯವಾಹಿನಿ ಮಂಡ್ಯ**

ಅಂಬೇಡ್ಕರ್ ಅವರಿಗೆ ಅಗೌರವ ತೋರಿದ ಕೇಂದ್ರ ಸಚಿವ ಅಮಿತ್ ಶಾ ಮತ್ತು ಸಂವಿಧಾನಕ್ಕಿಂತ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿದ್ಧಾಂತ ಮುಖ್ಯವೆಂದ ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು ರಾಜೀನಾಮೆ ನೀಡಬೇಕೆಂದು ನೈಜ ಪರಿಶಿಷ್ಟ ಸಮುದಾಯಗಳ ಸಾಂವಿಧಾನಿಕ ಹಕ್ಕು ಅವಕಾಶಗಳ ಸಂರಕ್ಷಣೆ ವೇದಿಕೆ ಕಾರ್ಯಕರ್ತರು ನಗರದಲ್ಲಿ ಅಂಬೇಡ್ಕರ್ ಭಾವಚಿತ್ರ ಹಿಡಿದು ಸೋಮವಾರ ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಎದುರಿನ ಉದ್ಯಾನದಲ್ಲಿರುವ ಅಂಬೇಡ್ಕರ್ ಪ್ರತಿಮೆ ಎದುರು ಅಂಬೇಡ್ಕರ್ ಅವರ ಭಾವಚಿತ್ರ ಹಿಡಿದು ಅಮಿತ್ ಶಾ ಮತ್ತು ಪಿ.ಎಂ.ನರೇಂದ್ರಸ್ವಾಮಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. '

ಅಮಿತ್ ಶಾ ಅವರು ಅಂಬೇಡ್ಕರ್ ಹೆಸರು ಫ್ಯಾಷನ್ ಆಗಿಬಿಟ್ಟಿದೆ ಎಂದು ಹೇಳುವ ಮೂಲಕ ಅವಮಾನ ಮಾಡಿದ್ದಾರೆ ಕೂಡಲೇ ಕ್ಷಮೆ ಕೇಳಬೇಕು. ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರು ಸಭೆಯೊಂದರಲ್ಲಿ ರಾಜ್ಯದಲ್ಲಿ ಅಂಬೇಡ್ಕರ್ ಸಿದ್ಧಾಂತದ ಬದಲಿಗೆ ಸಿದ್ದರಾಮಯ್ಯ ಸಿದ್ಧಾಂತವೇ ಮುಖ್ಯ ಎನ್ನುವ ಮೂಲಕ ಸಂವಿಧಾನದ ಆಶಯಕ್ಕೆ ಅವಮಾನ ಮಾಡಿದ್ದಾರೆ ಇವರು ಸಹ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

### ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿಗೆ ಚಿಕಿತ್ಸೆ ಕೊಡಿಸಿದ ಶಾಸಕ ಪುಟ್ಟರಂಗಶೆಟ್ಟಿ

• **ಉದಯವಾಹಿನಿ ಕೊಳ್ಳೇಗಾಲ**

ಅಪಘಾತದಿಂದ ಪೆಟ್ಟಾಗಿ ನರಳಾಡುತ್ತಿದ್ದ ಗಾಯಾಳುವನ್ನು ಚಾಮರಾಜನಗರ ಕ್ಷೇತ್ರದ ಶಾಸಕ ಪುಟ್ಟರಂಗಶೆಟ್ಟಿ ಅವರು ತಮ್ಮ ಸ್ವಂತ ಕಾರಿನಲ್ಲಿ ನಗರದ ಸರ್ಕಾರಿ ಉಪವಿಭಾಗ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದಿದ್ದಾರೆ. ತಾಲ್ಲೂಕಿನ ದಾಸನಪುರ ಹಾಗೂ ಕಾವೇರಿಪುರ ಮಾರ್ಗವಾಗಿ ಶಾಸಕ ಪುಟ್ಟರಂಗಶೆಟ್ಟಿ ಅವರು ಕೊಳ್ಳೇಗಾಲಕ್ಕೆ ಬರುತ್ತಿದ್ದರು. ಈ ವೇಳೆ ಎರಡು ಬೈಕ್‌ಗಳ ನಡುವೆ ಅಪಘಾತವಾಗಿ ಮಂಡ್ಯ ಜಿಲ್ಲೆಯ ಜಯರಾಜ್ ಅವರು ತೀವ್ರ ಪೆಟ್ಟಾಗಿ ನರಳಾಡುತ್ತಿದ್ದರು. ಇದನ್ನು ಗಮನಿಸಿದ ಶಾಸಕರು ತಮ್ಮ ವಾಹನದಲ್ಲೇ ಗಾಯಾಳುವನ್ನು ಕರೆದುಕೊಂಡು ಬಂದು ನಗರದ ಸರ್ಕಾರಿ ಉಪ ವಿಭಾಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ವೈಯಕ್ತಿಕವಾಗಿ ಹಣ ಸಹಾಯವನ್ನು ಸಹ ಮಾಡಿದರು. ಕರ್ತವ್ಯ ನಿರತರಾದ ಡಾ. ಟೀನಾ ಅವರು ಗಾಯಾಳುವಿಗೆ ಚಿಕಿತ್ಸೆ ನೀಡಿದರು. ಈ ಸಂದರ್ಭದಲ್ಲಿ ಶಾಸಕರು ವೈದ್ಯರಿಗೆ ಹಾಗೂ ಅಲ್ಲಿದ್ದ ಸಾರ್ವಜನಿಕರಿಗೆ ಧನ್ಯವಾದಗಳು ತಿಳಿಸಿ ಹೊರಟರು. ಇದೀಗ ಸಾರ್ವಜನಿಕ ವಲಯದಲ್ಲಿ ಹಾಗೂ ಸಾಮಾಜಿಕ ಜಾಣತಾಣಗಳಲ್ಲಿ ಶಾಸಕರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.



ಉದಯವಾಹಿನಿ ಚಿತ್ರ

ಅಂತರಾಳದಿಂದ... EDITORIAL

# ಗುತ್ತಿಗೆದಾರನ ಆತ್ಮಹತ್ಯೆ: ಇತಿಹಾಸ ಮರುಕಳಿಸದಿರಲಿ

ಮುಳುಗುವವನಿಗೆ ಹುಲ್ಲುಕಡ್ಡಿ ಎನ್ನುವಂತೆ ಗುತ್ತಿಗೆದಾರ ಪಾಂಚಾಳ ಆತ್ಮಹತ್ಯೆ ಪ್ರಕರಣವನ್ನು ಬಿಜೆಪಿಯು ಪ್ರಿಯಾಂಕ್ ಖರ್ಗೆ ವಿರುದ್ಧ ತಿರುಗಿಸಿದೆ. ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ ಎರಡು ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಮುನ್ನ ಅವರು ಬರೆದಿಟ್ಟಿರುವ ಪತ್ರ ಇದೀಗ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಕಲಬುರಗಿಯ ಕಾಂಗ್ರೆಸ್ ಮುಖಂಡ ರಾಜು ಕಪನೂರ ಸೇರಿದಂತೆ ಎಂಟು ಮಂದಿ ಟೆಂಡರ್ ವಿಚಾರವೊಂದಕ್ಕೆ ಸಂಬಂಧಿಸಿ ತನ್ನಿಂದ ಹಣದ ಬೇಡಿಕೆಯನ್ನು ಇಟ್ಟಿದ್ದಾರೆ ಎಂದು ಅವರು ತನ್ನ ಮರಣಪತ್ರದಲ್ಲಿ ಆರೋಪಿಸಿದ್ದಾರೆ. ರಾಜು ಕಪನೂರ ಎಂಬಾತ ಪ್ರಿಯಾಂಕ್ ಖರ್ಗೆಯ ಆಪ್ತ ಎನ್ನುವುದು, ಆತ್ಮಹತ್ಯೆ ಪ್ರಕರಣಕ್ಕೆ ರಾಜಕೀಯ ಬಣ್ಣವನ್ನು ನೀಡಿದೆ. ಆತ್ಮಹತ್ಯೆಗೆ ಪ್ರಿಯಾಂಕ್ ಖರ್ಗೆ ಅವರು ಪರೋಕ್ಷ ಕಾರಣರಾಗಿದ್ದು ಅವರು ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಒತ್ತಾಯಿಸುತ್ತಿದೆ. ಇದೇ ಸಂದರ್ಭದಲ್ಲಿ ಆರೋಪಗಳನ್ನು ಪ್ರಿಯಾಂಕ್ ಖರ್ಗೆ ಸಾರಾಸಗಟಾಗಿ ಅಲ್ಲಗಳೆದಿದ್ದು ಪ್ರಕರಣಕ್ಕೂ ತನಗೂ ಯಾವ ಸಂಬಂಧವೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮುಖ್ಯವಾಗಿ ಆತ್ಮಹತ್ಯೆಗೈದ ಪಾಂಚಾಳ ತನ್ನ ಮರಣ ಪತ್ರದಲ್ಲಿ ಸಚಿವರ ಹೆಸರನ್ನು ಉಲ್ಲೇಖ ಮಾಡಿರಲಿಲ್ಲ. ಆತ ಉಲ್ಲೇಖಿಸಿರುವ ರಾಜು ಕಪನೂರ ಪ್ರಿಯಾಂಕ್ ಖರ್ಗೆಯವರ ಆಪ್ತ ಎನ್ನುವ ಒಂದೇ ಕಾರಣಕ್ಕೆ ನೇರವಾಗಿ ಪ್ರಿಯಾಂಕ್ ಖರ್ಗೆಯನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಲು ಆಗುವುದಿಲ್ಲ ಮೊದಲು ಮರಣ ಪತ್ರದಲ್ಲಿರುವ ಆರೋಪ ಎಷ್ಟರಮಟ್ಟಿಗೆ ಸತ್ಯ ಎನ್ನುವುದು ತನಿಖೆಯಿಂದ ಬೆಳಕಿಗೆ ಬರಬೇಕು. ಇದಾದ ಬಳಿಕ, ಆಪ್ತನ ಹಿಂದೆ ಪ್ರಿಯಾಂಕ್ ಖರ್ಗೆ ಇದ್ದಾರೆಯೇ ಎನ್ನುವುದು ಗೊತ್ತಾಗಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಕರಣವನ್ನು ತನಿಖೆಗೆ ಆಗ್ರಹಿಸಬಹುದಾಗಿದೆಯೇ ಹೊರತು, ಆತ್ಮಹತ್ಯೆಗೂ ಸಚಿವ ಖರ್ಗೆಗೂ ನೇರ ಸಂಬಂಧವನ್ನು ಕಲ್ಪಿಸುವುದು ತಪ್ಪಾಗುತ್ತದೆ. ಇದೇ ಸಂದರ್ಭದಲ್ಲಿ ತನಿಖೆಯನ್ನು ಸಿಐಡಿಗೆ ನೀಡುವ ಇಂಗಿತವನ್ನೂ ಸರಕಾರ ವ್ಯಕ್ತಪಡಿಸಿರುವುದರಿಂದ ಬಿಜೆಪಿಯ ಗದ್ದಲ ಅನಗತ್ಯವಾಗಿದೆ.ಪ್ರಿಯಾಂಕ್ ಖರ್ಗೆಯ ಆಪ್ತ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಖರ್ಗೆ ಕಟಕಟೆಯಲ್ಲಿ ನಿಲ್ಲಬೇಕು ಎನ್ನುವುದಾದರೆ, ಪಕ್ಷದ ಟಿಕೆಟ್ ನೀಡುತ್ತೇನೆ ಎಂದು ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿರುವ ಬಿಜೆಪಿ ನಾಯಕ ಪ್ರಹ್ಲಾದ್ ಜೋಶಿ ಅವರ ಸೋದರನ ಪ್ರಕರಣದ ಬಗ್ಗೆ ಬಿಜೆಪಿ ಏನು ಹೇಳುತ್ತದೆ ಪ್ರಹ್ಲಾದ್ ಜೋಶಿಯ ಸೋದರನ ಹೆಸರು ಇದರಲ್ಲಿ ಕೇಳಿ ಬರುತ್ತಿದ್ದಂತೆಯೇ, ಪ್ರಹ್ಲಾದ್ ಜೋಶಿಯನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಲಾಗಿತ್ತು ಆದರೆ, ಸೋದರನಿಗೂ ತನಗೂ ಯಾವ ಸಂಬಂಧವೂ ಇಲ್ಲ ಎಂದು ಮಾಧ್ಯಮಗಳಲ್ಲಿ ಜೋಶಿ ಸ್ಪಷ್ಟನೆ ನೀಡಿದರು. ಪ್ರಜ್ವಲ್ ಗೌಡ ಮಾಡಿದ ಆರೋಪಗಳಿಗೆ ದೇವೇಗೌಡ ಕುಟುಂಬ ಯಾವ ರೀತಿಯಲ್ಲೂ ಹೊಣೆ ಅಲ್ಲ ಎಂದಾದರೆ, ಒಬ್ಬ ರಾಜಕೀಯ ಆಪ್ತ ಮಾಡಿದ ಆರೋಪಕ್ಕೆ ಪ್ರಿಯಾಂಕ್ ಖರ್ಗೆ ಹೊಣೆಯಾಗುವುದು ಹೇಗೆ ಎನ್ನುವ ಪ್ರಶ್ನೆಗೂ ವಿರೋಧ ಪಕ್ಷಗಳು ಉತ್ತರಿಸಬೇಕಾಗುತ್ತದೆ. ಈ ಹಿಂದೆ ಬೊಮ್ಮಾಯಿ ನೇತೃತ್ವದ ಸರಕಾರ ಅಸ್ತಿತ್ವದಲ್ಲಿದ್ದಾಗಲೂ ಇಂತಹದೇ ಒಂದು ಪ್ರಕರಣ ಮಾಧ್ಯಮಗಳಲ್ಲಿ ಸುದ್ದಿಯಾಗಿತ್ತು. ಗುತ್ತಿಗೆದಾರರೊಬ್ಬರು ಸಚಿವ ಈಶ್ವರಪ್ಪ ಅವರು ಹಣ ಬಿಡುಗಡೆ ಮಾಡಲು ತಡೆಯಾಗಿದ್ದಾರೆ ಎನ್ನುವ ಆರೋಪ ಹೊರಿಸಿ ಹೊಟೇಲೊಂದರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಪ್ರಕರಣದಲ್ಲಿ ಈಶ್ವರಪ್ಪ ಅವರು ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಬಳಿಕ ನಡೆದ ತನಿಖೆಯಲ್ಲಿ ಈಶ್ವರಪ್ಪನವರಿಗೆ ಸರಕಾರವೇ ಕ್ಲೀನ್ ಚಿಟ್ ನೀಡಿ ರಕ್ಷಿಸಿತು ಎನ್ನುವುದು ಬೇರೆ ವಿಷಯ. ಆ ಪ್ರಕರಣವನ್ನು ಇದೀಗ ಬೀದರ್‌ನ ಗುತ್ತಿಗೆದಾರನ ಆತ್ಮಹತ್ಯೆಗೆ ಹೋಲಿಸಿ, ಈಶ್ವರಪ್ಪರಂತೆಯೇ ಖರ್ಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ತಗಾದೆ ತೆಗೆದಿದೆ. ಉಡುಪಿಯಲ್ಲಿ ಅಂದು ಆತ್ಮಹತ್ಯೆ ಮಾಡಿಕೊಂಡಿದ್ದ ಗುತ್ತಿಗೆದಾರ ಸಂತೋಷ್ ಸಚಿವ ಈರಪ್ಪ ಅವರನ್ನು ನೇರವಾಗಿ ಮರಣಪತ್ರದಲ್ಲಿ ಉಲ್ಲೇಖಿಸಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ತನಗಾಗಿರುವ ಅನ್ಯಾಯವನ್ನು ಅವರು ಅದಕ್ಕೂ ಮುಂಚೆ ಪ್ರಧಾನಮಂತ್ರಿಗೂ ಪತ್ರ ಬರೆದು ತಿಳಿಸಿದ್ದರು. ಆದರೆ, ಇದರಿಂದ ಅವರ ಸಮಸ್ಯೆ ಪರಿಹಾರವಾಗದೆ ಉಲ್ಬಣಗೊಂಡಿತು. ಆರೋಪ ಮಾಡಿದ ಗುತ್ತಿಗೆದಾರನ ವಿರುದ್ಧ ಮೊಕದ್ದಮೆ ದಾಖಲಿಸಲ್ಪಟ್ಟಿತ್ತು ಸರಕಾರದ ವಿರುದ್ಧ ಆರೋಪ ಮಾಡಿದ ಕಾರಣಕ್ಕಾಗಿ ತನಗೆ ಕಿರುಕುಳ ನೀಡಲಾಗುತ್ತಿದೆ ಎಂದೂ ಅವರು ಅಲವತ್ತುಕೊಂಡಿದ್ದರು. ಆಗಲೂ ಸರಕಾರ ಸ್ಪಂದಿಸದೇ ಇದ್ದಾಗ, ಈಶ್ವರಪ್ಪ ಅವರ ಹೆಸರನ್ನು ಉಲ್ಲೇಖಿಸಿ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಆತ್ಮಹತ್ಯೆ ಅಂದಿನ ಬೊಮ್ಮಾಯಿ ಸರಕಾರಕ್ಕೆ ಸಾಕಷ್ಟು ಮುಜುಗರ ಸೃಷ್ಟಿಸಿತ್ತು ಗುತ್ತಿಗೆದಾರರ ಸಂಘಟನೆ ಬಹಿರಂಗವಾಗಿ ಸರಕಾರದ ಲಂಚ, ಭ್ರಷ್ಟಾಚಾರದ ವಿರುದ್ಧ ಯುದ್ಧ ಸಾರಿತ್ತು ಆದರೆ ಬೀದರ್‌ನ ಭಾಲ್ಕಿಯಲ್ಲಿ ಗುತ್ತಿಗೆದಾರನ ಆತ್ಮಹತ್ಯೆ ಖಾಸಗಿ ವ್ಯವಹಾರಕ್ಕೆ ಸಂಬಂಧಪಟ್ಟದ್ದು ಎನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಇಲ್ಲಿ ಸಚಿವರ ಹೆಸರು ಎಲ್ಲೂ ಪ್ರಸ್ತಾಪವಿಲ್ಲ ಬಿಜೆಪಿ ನಾಯಕರೇ ಸಚಿವ ಖರ್ಗೆಯವರ ಹೆಸರನ್ನು ಪ್ರಕರಣದಲ್ಲಿ ಜೋಡಿಸಲು ಪ್ರಯತ್ನಿಸುತ್ತಿದ್ದಾರೆ.ಹಾಗೆಂದು ಆತ್ಮಹತ್ಯೆ ಪ್ರಕರಣದೊಂದಿಗೆ ಸಚಿವ ಖರ್ಗೆ ಅವರಿಗೆ ಸಂಬಂಧವೇ ಇಲ್ಲ ಎನ್ನುವಂತಿಲ್ಲ ಸಚಿವರೊಬ್ಬರ ಆಪ್ತ ಸಹಾಯಕ ತನ್ನ ವೈಯಕ್ತಿಕ ವ್ಯವಹಾರಗಳಲ್ಲಿ ಸಚಿವರ ವರ್ಚಸ್ಸನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಗಳೂ ಇರುತ್ತವೆ. ಆದುದರಿಂದಲೇ, ಪ್ರಕರಣ ತನಿಖೆಯಾಗಬೇಕು ತನಿಖೆಯಲ್ಲಿ ಆಪ್ತ ಸಚಿವರ ಹೆಸರನ್ನು ಬಳಕೆ ಮಾಡಿದ್ದರೆ ಅಥವಾ ತನ್ನ ಆಪ್ತನ ಮೂಲಕ ಗುತ್ತಿಗೆದಾರನಿಗೆ ಸಚಿವರು ಒತ್ತಡ ಹಾಕಿದ್ದಾರೆ ಎನ್ನುವುದು ಬಹಿರಂಗವಾದರೆ ಆ ಬಳಿಕ ಸಚಿವರ ರಾಜೀನಾಮೆಗೆ ಒತ್ತಾಯಿಸುವುದರಲ್ಲಿ ನ್ಯಾಯವಿದೆ. ಇದೇ ಸಂದರ್ಭದಲ್ಲಿ ರಾಜಕಾರಣಿಗಳೊಂದಿಗೆ ಗುತ್ತಿಗೆದಾರರ ಅನೈತಿಕ ಸಂಬಂಧ ಇಂದು ನಿನ್ನೆಯದಲ್ಲ, ರಾಜಕಾರಣಿಗಳ ವರ್ಚಸ್ಸಿನ ಬಲವನ್ನು ನಂಬಿಕೊಂಡು ಹಣ ಚೆಲ್ಲಿ ಟೆಂಡರ್‌ಗಳನ್ನು ತಮ್ಮದಾಗಿಸಿ, ಬಳಿಕ ಸಾಲಸೋಲದ ಸುಳಿಗೆ ಸಿಲುಕಿ ಕೊಳ್ಳುವ ನೂರಾರು ಗುತ್ತಿಗೆದಾರರು ನಮ್ಮ ನಡುವೆ ಇದ್ದಾರೆ.

**ಈ ವಂಚನೆ ಆರೋಪಕ್ಕೆ ಸಂಬಂಧಿಸಿ ಈವರೆಗೆ ಬಿಜೆಪಿ ವರಿಷ್ಠರು ಪ್ರಹ್ಲಾದ್ ಜೋಶಿ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಹೀಗಿರುವಾಗ, ಆಪ್ತ ಮಾಡಿರುವ ತಪ್ಪಿಗಾಗಿ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಗದ್ದಲ ಎಬ್ಬಿಸುವುದು ಎಷ್ಟು ಸರಿ ಪ್ರಜ್ವಲ್ ಗೌಡ ಎಸಗಿದ ಲೈಂಗಿಕ ಹಗರಣಕ್ಕೂ ತಮಗೂ ಯಾವ ಸಂಬಂಧವೂ ಇಲ್ಲ ಅನಗತ್ಯವಾಗಿ ದೇವೇಗೌಡರ ಕುಟುಂಬವನ್ನು ಇದರೊಂದಿಗೆ ಎಳೆದುಕೊಂಡು ಬರಬೇಡಿ ಎಂದು ಕುಮಾರಸ್ವಾಮಿ ಈ ಹಿಂದೆ ಮಾಧ್ಯಮಗಳಿಗೆ ಮನವಿ ಮಾಡಿದ್ದರು.**

# ರಾಮಾಯಣ



## ವಿಶ್ವಾಮಿತ್ರನು ಬ್ರಹ್ಮರ್ಷಿಯಾದದ್ದು

• ಹಿಂದಿನ ಸಂಚಿಕೆಯಿಂದ 63 ನೆಯ ಅಧ್ಯಾಯ


ಸಾವಿರ ವರುಷಗಳು ಪೂರ್ತಿಯಾಗುವ ವರೆಗೂ ಬಹುವಿಧವಾದ ವಿಘ್ನಗಳನ್ನೂ ಉಪದ್ರವಗಳನ್ನೂ ಮಾಡಿದರೂ ಕಾವ್ಯದ ಹಾಗೆ ಅಂತರಂಗದಲ್ಲಿ ಕೋಪವು ಹುಟ್ಟಲಿಲ್ಲ. ಆಗ ಆ ಮುನೀಶ್ವರನು ತನಗೆ ಕೋಪವು ಶಾಂತ ವಾಯಿತೆಂದು ನಿಶ್ಚಯಿಸಿ ಸಾವಿರ ವರುಷಗಳಾದಮೇಲೆ ನಿರಾಹಾರವ್ರತವನ್ನು ಸಮಾಪ್ತಿ ಮಾಡಿ ಅನ್ನವನ್ನು ಭುಜಿಸಬೇಕೆಂದು ಪ್ರಯತ್ನಿಸುತ್ತಿದ್ದನು. ಆ ಸಮಯದಲ್ಲಿ ದೇವೇಂದ್ರನು ಬ್ರಾಹ್ಮಣ ರೂಪದಿಂದ ಬಂದು ಗ್ರಾಸವನ್ನು ಬೇಡಲು ವಿಶ್ವಾಮಿತ್ರನು ಆತನಿಗೆ ಅನ್ನವನ್ನಿಕ್ಕಿದನು. ಪಾಕಮಾಡಿದ್ದ ಅನ್ನವೆಲ್ಲವನ್ನೂ ಆ ಬ್ರಾಹ್ಮಣನು ನಿಶ್ಶೇಷವಾಗಿ ಭುಜಿಸಿದನು ಮೌನವ್ರತದಲ್ಲಿದ್ದ ವಿಶ್ವಾಮಿತ್ರನು ಏನೂ ನುಡಿಯದೆ ಪುನಃ ನಿಟ್ಟುಸುರುಬಿಡುವುದಿಲ್ಲವೆಂಬ ವ್ರತವನ್ನು ಮಾಡಿಕೊಂಡು ಮತ್ತೂ ಸಾವಿರ ವರುಷಗಳು ತಪಸ್ಸನ್ನು ಮಾಡಿದನು. ಈ ರೀತಿಯಲ್ಲಿ ಸಾವಿರ ವರುಷಗಳು ವಾಯುನಿರೋಧವನ್ನು ಮಾಡಿಕೊಂಡು ನಿಟ್ಟುಸುರು ಬಿಡದೆ ಮೌನವ್ರತದಿಂದ ತಪಸ್ಸನ್ನು ಮಾಡುತ್ತಿರಲು ವಿಶ್ವಾಮಿತ್ರಮುನೀಶ್ವರನ ಬ್ರಹ್ಮರಂಧ್ರದಲ್ಲಿ ಹೊಗೆಯೆದ್ದು ಮೂರುಲೋಕ ಗಳಲ್ಲಿಯೂ ಅದು ಹರಡಿತು. ಆಗ ದೇವ ದಾನವ ಗಂಧರ್ವ ಯಕ್ಷ ಕಿನ್ನರ ಕಿಂಪುರುಷರೆಲ್ಲರೂ ವಿಶ್ವಾಮಿತ್ರಮುನೀಶ್ವರನ ಬ್ರಹ್ಮರಂಧ್ರದಿಂದೆದ್ದ ಉರಿಯಿಂದ ಕಂಗೆಟ್ಟು ಮುಖಕಾಂತಿಗುಂದಿ ಕಪ್ಪಾಗಿ ಬ್ರಹ್ಮದೇವನನ್ನು ಕುರಿತು ' ಬ್ರಹ್ಮದೇವ, ನಾವು ನಾನಾ ಉಪಾಯಗಳಿಂದ ವಿಶ್ವಾಮಿತ್ರನಿಗೆ ಕೋಪವು ಹುಟ್ಟುವುದಕ್ಕಾಗಿ ಎಷ್ಟು ಉಪದ್ರವಗಳನ್ನು ಮಾಡಿದರೂ ಆತನು ಕೋಪವಿಲ್ಲದೆ ಮತ್ತೂ ವಿಶೇಷವಾಗಿ ತಪಸ್ಸನ್ನು ಮಾಡುತ್ತಾ ಇದ್ದಾನೆ. ಆತನ ತಪಸ್ಸಿಗೆ ನಿಲುಗಡೆಯಿಲ್ಲ, ಆತನಲ್ಲಿ ಕಿಂಚಿತ್ತಾದರೂ ಊಣಯವಿಲ್ಲ. ಇಷ್ಟರಮೇಲೆ ಆತನ ಮನಸ್ಸಿನ ಇಷ್ಟಾರ್ಥವನ್ನು ಕೊಡದಿದ್ದರೆ ಆತನ ತಪೋಜ್ವಾಲೆಯು ಚರಾಚರಾತ್ಮಕವಾದ ಜಗತ್ತನ್ನು ಲಯಮಾಡುವುದು. ವಿಶ್ವಾಮಿತ್ರ ಮುನೀಶ್ವರನು ಮಂಜುಮುಸುಕಿದ ಸೂರ್ಯನಂತೆ ಅಂತರಂಗದಲ್ಲಿ ಬಹುಕುಪಿತನಾಗಿದ್ದಾನೆ. ಆದ ಕಾರಣ ಯಜ್ಞಪುರುಷನಿಗೆ ಸಮಾನನಾದ ವಿಶ್ವಾಮಿತ್ರನಿಗೆ ಕೋಪವು ಹುಟ್ಟಿ ಜಗತ್ತೆಲ್ಲವನ್ನೂ ನಾಶ ಮಾಡಬೇಕೆಂಬ ಬದ್ದಿ ಹುಟ್ಟುವದಕ್ಕಿಂತಲೂ ಮೊದಲೇ ಆತನನ್ನು ಸಂತವಿಡಬೇಕು. ಅಲ್ಲದಿದ್ದರೆ ಪ್ರಳಯಕಾಲಾಗ್ನಿಯಿಂದ ತ್ರಿಲೋಕಗಳೂ ಹೇಗೆ ಲಯವಾಗುವುವೋ ಹಾಗೆ ಆತನ ಕೋಪದಿಂದ ಲೋಕವೆಲ್ಲವೂ ಲಯವಾಗುವುದು ಆದ್ದರಿಂದ ಈತನಿಗೆ ಕೋವವು ಹುಟ್ಟುವುದಕ್ಕಿಂತಲೂ ಮೊದಲೇ ಆತನ ಇಷ್ಟಾರ್ಥವನ್ನು ಕೊಡಬೇಕು ಎಂದು ನುಡಿದರು. ಸಮಸ್ತದೇವತೆಗಳೂ ಋಷಿಗಳೂ ಬ್ರಹ್ಮದೇವನೊಡನೆ ವಿಶ್ವಾಮಿತ್ರಮುನಿಯ ಬಳಿಗೆ ಬಂದು ಆತನನ್ನು ಕುರಿತು ' ಎ ಬ್ರಹ್ಮರ್ಷಿ ನಿನ್ನ ತಪಸ್ಸಿನಿಂದ ನಾವು ಸಂತುಷ್ಟರಾದೆವು. ನೀನು ಉಗ್ರವಾದ ತಪಸ್ಸನ್ನು ಮಾಡಿ ಬ್ರಾಹ್ಮಣ್ಯವನ್ನು ವಡೆದೆ. ನೀನು ಇಂದು ಮೊದಲು ಬ್ರಹ್ಮರ್ಷಿಯಾದೆ. ನಿನಗೆ ನಾವು ದೀರ್ಘಾಯುದ್ಧವನ್ನು ಕೊಟ್ಟೆವು ನಿನಗೆ ಅಧಿಕವಾದ ಶ್ರೇಯಸ್ಸಾದೀತು' ನೀನು ನಿನ್ನ ರಾಜ್ಯಕ್ಕೆ ಸುಖವಾಗಿ ಹೋಗು' ಎಂದು ಹೇಳಿದರು

ಮುಂದುವರಿಯುವುದು...

# ವರ್ಷದ ಮೊದಲ ತಿಂಗಳಲ್ಲಿ ಹಲವು ಸಂಕ್ರಮಣ

• ಉದಯವಾಹಿನಿ , ಬೆಂಗಳೂರು

ಹೊಸ ವರ್ಷವನ್ನು ಸ್ವಾಗತಿಸಲು ನಾವು ತುದಿಗಾಲಿನಲ್ಲಿ ನಿಂತಿದ್ದೇವೆ. ಜ್ಯೋತಿಷ್ಯ ಶಾಸ್ತ್ರದಲ್ಲಿ 2025ಕ್ಕೆ ಬಹಳ ಮಹತ್ವ ನೀಡಲಾಗಿದೆ. ಏಕೆಂದರೆ ಹಲವು ಗ್ರಹಗಳು ಹಲವು ರಾಶಿಗಳಲ್ಲಿ ಚಲಿಸುವುದು ಹಲವು ರಾಶಿಯವರಲ್ಲಿ ಬದಲಾವಣೆಗೆ ಕಾರಣವಾಗುತ್ತಿದೆ. ಅದರಲ್ಲೂ ಪ್ರತಿಯೊಂದು ನವಗ್ರಹಗಳು ನಿರ್ದಿಷ್ಟ ಮಧ್ಯಂತರದಲ್ಲಿ ಚಿಹ್ನೆಯನ್ನು ಬದಲಾಯಿಸುತ್ತವೆ ಮತ್ತು ಮಾನವ ಜೀವನದ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ.



ಇನ್ನು 2025ಕ್ಕೆ ಪ್ರವೇಶಿಸುತ್ತಿರುವ ನಾವು ಜನವರಿಯಲ್ಲಿ ಹಲವು ರೀತಿಯ ಸ್ಥಾನಗಳಲ್ಲಿ ಬದಲಾವಣೆ ಆಗುತ್ತಿರುವುದನ್ನು ನೋಡಲಿದ್ದೇವೆ. ಬುಧ ಜನವರಿ 4ರಂದು ಧನು ರಾಶಿಗೆ ಚಲಿಸುತ್ತಿದೆ. ಜನವರಿ 14 ರಂದು, ಸೂರ್ಯನು ಮಕರ ರಾಶಿಗೆ ಮತ್ತು ಜನವರಿ 21 ರಂದು, ಮಂಗಳವು ಮಿಥುನ ರಾಶಿಗೆ ಚಲಿಸುತ್ತದೆ. ನಂತರ ಜನವರಿ 24 ರಂದು ಬುಧನು ಮಕರ ರಾಶಿಯನ್ನು ಪ್ರವೇಶಿಸುತ್ತಾನೆ ಮತ್ತು ಸೂರ್ಯನೊಂದಿಗೆ ಒಂದಾಗುತ್ತಾನೆ ಮತ್ತು ಮತ್ತೆ ಬುಧತೀಯ ರಾಜಯೋಗವನ್ನು ರೂಪಿಸಲಿದೆ.

ಹೀಗೆ ಜನವರಿ ಸೇರಿ 2025ರಲ್ಲಿ ಹಲವು ರೀತಿಯ ಗ್ರಹಗತಿಗಳ ಬದಲಾವಣೆಗಳು ಎಲ್ಲರ ಜೀವನದಲ್ಲೂ ಬದಲಾವಣೆ ತರಲಿದೆ. ಆದ್ರೆ ಜನವರಿಯಲ್ಲಿ ಈ ರೀತಿಯ ಹಲವು ಬದಲಾವಣೆಯಿಂದ ಮೂರು ರಾಶಿಯವರಲ್ಲಿ ಹಲವು ಬದಲಾವಣೆ ನೋಡಬಹುದು. ಹಾಗಾದ್ರೆ ಯಾವೆಲ್ಲಾ ರಾಶಿಯವರಿಗೆ ಜನವರಿಯು ಲಾಭದಾಯಕವಾಗುತ್ತದೆ. ಯಾವ ಗ್ರಹಗತಿಗಳ ಬದಲಾವಣೆಯು ಅತ್ಯುತ್ತಮ ಆರಂಭಕ್ಕೆ ಕಾರಣವಾಗುತ್ತಿದೆ ಎಂಬುದನ್ನು ನಾವಿಂದು ತಿಳಿದುಕೊಳ್ಳೋಣ.

**ಮಕರ ರಾಶಿ :** 2025ರ ಜನವರಿಯಲ್ಲಿ ಸಂಭವಿಸುವ ಗ್ರಹಗತಿಗಳ ಸಂಚಾರವು ಮಕರ ರಾಶಿಯವರಲ್ಲಿ ವೃತ್ತಿ ಹಾಗೂ ವ್ಯವಹಾರದಲ್ಲಿ ಅತ್ಯುತ್ತಮ ಪ್ರಗತಿಗೆ ಕಾರಣವಾಗುತ್ತಿದೆ. ದಾಂಪತ್ಯ ಜೀವನ ಮಧುರವಾಗಿರುತ್ತದೆ. ಪ್ರಯಾಣಗಳು ಉತ್ತಮ ಆರ್ಥಿಕ ಲಾಭವನ್ನು ತರಲಿದೆ. ಹಣಕಾಸು ವಿಚಾರದಲ್ಲೂ ನಿಮಗೆ ಒಳಿತಾಗಲಿದೆ, ನೀವು ಅಂದುಕೊಂಡ ಕೆಲಸವನ್ನು ಯಾವ ಅಡೆಯಡೆ ಇಲ್ಲದೆ ಮುಗಿಸುವ ಅವಕಾಶವಿದೆ. ಬಹುದಿನಗಳ ನಿಮ್ಮ ಬಯಕೆ ಅಥವಾ ಆಸೆ ಈ ಜನವರಿಯಲ್ಲಿ ಸಾಕಾರಗೊಳ್ಳುವ ಅಥವಾ ಆ ಗುರಿ ಸನಿಹವಾಗಲಿದೆ. ಕೌಟುಂಬಿಕ ಜೀವನ ಸುಖಮಯವಾಗಿರುತ್ತದೆ. ಕುಟುಂಬದಿಂದ ಸಂಪೂರ್ಣ ಬೆಂಬಲ ಪಡೆಯಿರಿ. ವ್ಯಾಪಾರಸ್ಥರಿಗೆ ಹೆಚ್ಚಿನ ಲಾಭ ದೊರೆಯಲಿದೆ.

**3 ರಾಶಿಯವರಿಗೆ ಆರ್ಥಿಕ ಬಲ ಹೆಚ್ಚಳ**

**ಮೇಷ ರಾಶಿ :** ಜನವರಿ 2025ರ ಗ್ರಹಗಳ ಸಂಚಾರವು ಮೇಷ ರಾಶಿಯ ಜನರಲ್ಲಿ ಲಾಭದಾಯಕವಾಗಿ ಪರಿಣಮಿಸುತ್ತಿದೆ. ಹೊಸ ಆದಾಯಗಳು ನಿಮಗೆ ಹುಡುಕಿಬರಲಿದೆ. ಉದ್ಯಮಿಗಳಿಂದ ಹಿಡಿದು ಸಣ್ಣ ವ್ಯಾಪಾರಿಗಳು, ಗೃಹಿಣಿಯರಿಗೆ ಈ ಜನವರಿಯು ಲಾಭದಾಯಕವಾಗುತ್ತಿದೆ. ನೀವು ಮಾಡಿದ್ದ ಹೂಡಿಕೆಯಿಂದ ಲಾಭಗಳಿಸುತ್ತೀರಿ, ನಿಮ್ಮ ಉಳಿತಾಯ ಹೆಚ್ಚಾಗುತ್ತಿದೆ. ದಾಂಪತ್ಯದಲ್ಲಿ ಸಂತಸ ಇರಲಿದೆ. ಬಹುಕಾಲದಿಂದ ನೀವು ಬಾಕಿ ಉಳಿಸಿಕೊಂಡಿದ್ದ ಕೆಲಸಗಳು ಪೂರ್ಣವಾಗಲಿದೆ.

ಹಲವು ವರ್ಷಗಳಿಂದ ನೀವು ಮಾಡಲು ಬಯಸಿದ್ದ ಕೆಲಸಗಳ ಆರಂಭಿಸಲು ಇದು ಶುಭ ಕಾಲ.

**ತುಲಾ ರಾಶಿ :** ಜನವರಿಯಲ್ಲಿ ಗ್ರಹಗಳ ಸಂಚಾರದಿಂದಾಗಿ ತುಲಾ ರಾಶಿಯವರು ಅದೃಷ್ಟವಂತರಾಗಲಿದ್ದಾರೆ. ನಿಮ್ಮ ಆರ್ಥಿಕ ಬೆಂಬಲ ಹೆಚ್ಚಾಗಲಿದೆ. ಅವಿವಾಹಿತರಲ್ಲಿ ವಿವಾಹ ಭಾಗ್ಯದ ಅನುಕೂಲವಿದೆ. ನಿಮ್ಮ ಜಾತಕದ ದೋಷ ನಿವಾರಣೆಗೂ ಇದು ಶುಭ ಗಳಿಗೆ ಯಾಗಲಿದೆ. ಕೆಲಸ ಮತ್ತು ವ್ಯವಹಾರದಲ್ಲಿ ಉತ್ತಮ ಪ್ರಗತಿ ಇರುತ್ತದೆ. ಅದೃಷ್ಟದ ಕೃಪೆಯಿಂದ ನೀವು ಸಾಕಷ್ಟು ಲಾಭವನ್ನು ಪಡೆಯುತ್ತೀರಿ.

ದೀರ್ಘಕಾಲದ ಸಮಸ್ಯೆಗಳು ಕೊನೆಗೊಳ್ಳುತ್ತವೆ. ಬಾಕಿ ಉಳಿದಿರುವ ಕೆಲಸಗಳು ಪುನರಾರಂಭಗೊಳ್ಳುತ್ತವೆ ಮತ್ತು ಯಶಸ್ವಿಯಾಗಿ ಪೂರ್ಣಗೊಳ್ಳುತ್ತವೆ. ಕುಟುಂಬಸ್ಥರ ನೆರವಿನಿಂದಾಗಿ ನಿಮ್ಮ ಕನಸು ನನಸಾಗುವ ಸಂಭವವಿದೆ.



## ಸಾಮಾಜಿಕ ಕಳಕಳಿ

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

# ದಿನಕ್ಕೊಂದು ಮುಕ್ತಕ -65

• ಉದಯವಾಹಿನಿ, ವಿಶೇಷ

ತಾಯಿಯನು ನೆನೆಯುತಲಿ ಪ್ರೀತಿಯನು ತೋರಿಸುತ
ಮಾಯೆಯನು ನಂಬದಲೆ ಬಾಳುತಿರಲು
ಕಾಯಕವ ಮಾಡುತಲೆ ನಡೆಯುತಿರು ಜೀವನದಿ
ಪಾಯಸದ ಸಿಹಿಯಿರಲಿ ಲಕ್ಷ್ಮಿ ದೇವಿ....



**ಭಾವಾರ್ಥ :** ನಾವು ಹುಟ್ಟುವುದು ತಾಯಿಯ ಗರ್ಭದಲ್ಲಿ ಆ ತಾಯಿಯನ್ನು ನೆನೆಯುತ್ತಾ ಪ್ರೀತಿಯನ್ನು ತೋರಿಸುವ ಜೀವನದಲ್ಲಿ ಸಾಗಬೇಕು. ಯಾವುದೇ ರೀತಿಯ ಮೋಸಕ್ಕೆ ಮಾಯಾಜಾಲಕ್ಕೆ ಒಳಗಾಗಿ ತಾಯಿಯನ್ನು ತೊರೆಯಬಾರದು. ಶಾಶ್ವತವಾಗಿ ಉಳಿಯುವುದು ತಾಯಿಯ ಪ್ರೀತಿಯ ಹೊರತು ಹೊಸದಾಗಿ ಸಿಕ್ಕಂತಹ ಸಂಬಂಧ ದಿಂದಲ್ಲ. ಯಾರು ಬೇಕಾದರೂ ಕೆಟ್ಟವರಾಗಿರಬಹುದು ಆದರೆ ತಾಯಿ ಕೆಟ್ಟವಳಾಗಲು ಸಾಧ್ಯವೇ ಇಲ್ಲ. ಎಂತಹ ಕಷ್ಟದ ಸಂದರ್ಭದಲ್ಲೂ ಮಗುವನ್ನು ಸಾಕುವಂತಹ ದಿಟ್ಟ ನಾರಿ ಆಗಿರುತ್ತಾಳೆ.

ಯಾವುದೇ ಕೆಲಸವನ್ನು ಮಾಡಬೇಕಾದರೆ ತಾಯಿಯ ಆಶೀರ್ವಾದವನ್ನು ಪಡೆದು ಕೆಲಸ ಮಾಡಬೇಕು. ಆಕೆಯೊಂದಿಗೆ ಪ್ರೀತಿಯನ್ನ ಪಾಯಸದ ಸಿಹಿಯ ರೀತಿಯಲ್ಲಿನ ಮುಂದುವರೆಸಬೇಕು.

# ಯಾವ ಆಹಾರ ಕ್ರಮ ಮಕ್ಕಳಲ್ಲಿ ಜ್ಞಾಪಕ ಶಕ್ತಿ ಹೆಚ್ಚಿಸುತ್ತೆ

• ಉದಯವಾಹಿನಿ , ಬೆಂಗಳೂರು

ಡಿಸೆಂಬರ್ ಕಳೆಯಿತು ಎಂದರೆ ಮಕ್ಕಳಲ್ಲಿ ಪರೀಕ್ಷೆಯ ಒತ್ತಡ ಹೆಚ್ಚಾಗುವುದು. ಕೆಲ ಮಕ್ಕಳಂತೂ ತುಂಬಾನೇ ಮಾನಸಿಕ ಒತ್ತಡ ತೆಗೆದುಕೊಳ್ಳುತ್ತಾರೆ. ಸರಿಯಾದ ಆಹಾರ ಸೇವಿಸಲ್ಲ, ಓದುವಾಗ ಸ್ನ್ಯಾಕ್ಸ್ ಅಂದ ಚಿಪ್ಸ್, ಕುರುಕುರೆ ಅಂತ ಸವಿಯುತ್ತಾರೆ. ಆದರೆ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಲುವಂತಾಗಲು



ಉದಯವಾಹಿನಿ ಚಿತ್ರ

**ಶಾಲೆಯಿಂದ ಮರಳಿದ ಮೇಲೆ ಕೂಡ ಆರೋಗ್ಯಕರ ಆಹಾರ ನೀಡಿ**

**ಮಕ್ಕಳು ಶಾಲೆಯಿಂದ ಮನೆಗೆ ಮರಳಿದಾಗ ತಿನ್ನಲು ಏನಾದರು ಕೊಡುತ್ತಾರೆ, ಆವಾಗ ಮಕ್ಕಳ ಹೊಟ್ಟೆ ತುಂಬುವ ಆಹಾರದ ಬದಲಿಗೆ ಆರೋಗ್ಯಕರ ಆಹಾರದ ಕಡೆಗೆ ಗಮನಹರಿಸಬೇಕು. ಹಣ್ಣುಗಳು, ತರಕಾರಿ, ಕಾಳುಗಳನ್ನು ಬೇಯಿಸಿ ಕೊಡುವುದು ಮಾಡಬೇಕು. ಮಕ್ಕಳು ಅವರಿಗೆ ಇಷ್ಟವಾದ ಚಿಪ್ಸ್, ಕೇಕ್ ಎಲ್ಲಾ ತಿನ್ನಬಹುದು, ಆದರೆ ಮಿತಿಯಲ್ಲಿ ತಿನ್ನಬೇಕು.**

ಆಹಾರಕ್ರಮದ ಕಡೆ ಕೂಡಗಮನಹರಿಸುವುದು ಅಷ್ಟೇ ಮುಖ್ಯವಾಗಿದೆ ಅಂತಾರೆ ನ್ಯೂಟ್ರಿಷಿಯನಿಸ್ಟ್ ಶಿಶಿರಾ.

ಮಕ್ಕಳು ಓದಿನಲ್ಲಿ ಹೆಚ್ಚು ಏಕಾಗ್ರತೆ ನೀಡಲು ಬ್ರೇಕ್‌ಫಾಸ್ಟ್ ಕೂಡ ಪ್ರಮುಖ ಪಾತ್ರವಹಿಸುತ್ತದೆ

ಒಳ್ಳೆಯ ನಿದ್ದೆ ಜೊತೆಗೆ ಆರೋಗ್ಯಕರ ಬ್ರೇಕ್‌ಫಾಸ್ಟ್ ತಿನ್ನಲು ಪ್ರೋತ್ಸಾಹ ನೀಡಬೇಕು. ಅವರು ಬೆಳಗ್ಗೆ ಸರಿಯಾಗಿ ತಿನ್ನದೆ ಹೋದಾಗ ಓದಿನ ಕಡೆ ಹೆಚ್ಚು ಗಮನಹರಿಸಲು ಸಾಧ್ಯವಾಗಲ್ಲ. ಹಾಗಾಗಿ ಬೆಳಗ್ಗೆ ಮಕ್ಕಳ ಬ್ರೇಕ್‌ಫಾಸ್ಟ್ ಕಡೆಗೆ ಗಮನಹರಿಸುವುದು ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಚಳಿಗಾಲದಲ್ಲಿ ಈ ಹಣ್ಣುಗಳ ಸೇವನೆ ಬಿಡುವುದು ಉತ್ತಮ..! ಯಾವುದೆಲ್ಲಾ ಗೊತ್ತಾ? ಮಕ್ಕಳು ಬೆಳಗ್ಗೆ ಪೋಷಕಾಂಶ ಅಧಿಕವಿರುವ ಆಹಾರ ಸೇವಿಸಬೇಕು.ಅವರು ಬೆಳಗ್ಗೆ ಸೇವಿಸುವ ಆಹಾರದಲ್ಲಿ ಪ್ರೊಟೀನ್, ಪೋಷಕಾಂಶಗಳು, ವಿಟಮಿನ್‌ಗಳು ಎಲ್ಲವೂ ಇರಬೇಕು.

**ಮಕ್ಕಳ ಲಂಚ್‌ಗೆ ಕೂಡ ಆರೋಗ್ಯಕರ ಆಹಾರ ನೀಡಬೇಕು:** ಚೀಸ್, ಹಣ್ಣುಗಳು, ತರಕಾರಿ ಹಾಲಿನ ಉತ್ಪನ್ನಗಳು ಈ ಬಗೆಯ ಆಹಾರ ಅವರ ಲಂಚ್‌ಬಾಕ್ಸ್‌ನಲ್ಲಿ ಹಾಕಿ ಕಳುಹಿಸಬೇಕು. ಮಕ್ಕಳು ಬಾಕ್ಸ್ ವಿಷಯದಲ್ಲಿ ತುಂಬಾನೇ ಕಿರಿಕಿರಿ ಮಾಡುತ್ತವೆ, ಆದರೆ ಆರೋಗ್ಯಕರ ಆಹಾರ ನಿಮ್ಮ ಜ್ಞಾಪಕ ಶಕ್ತಿ ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಅವರಿಗೆ ತಿಳಿ ಹೇಳಿದಾಗ ಅವರು ಆರೋಗ್ಯಕರ ಆಹಾರ ಲಂಚ್‌ಬಾಕ್ಸ್‌ಗೆ ತುಂಬಿಸಲು ಒಪ್ಪುತ್ತಾರೆ.

**ಪೋಷಕಾಂಶ ಅಧಿಕವಿರುವ ಆಹಾರ ಮಕ್ಕಳಲ್ಲಿ ಜ್ಞಾಪಕ ಶಕ್ತಿ ಹೆಚ್ಚಿಸಲು ಸಹಕಾರಿ:** ಕಬ್ಬಿಣದಂಶ, ಸತು ಈ ಬಗೆಯ ಆಹಾರ ಜ್ಞಾಪಕ ಶಕ್ತಿ ಹೆಚ್ಚಿಸುತ್ತದೆ. ಇನ್ನು ಸಮುದ್ರಾಹಾರ, ಎಳು ಮಾಂಸ, ಧಾನ್ಯಗಳು, ಕೆಂಪಕ್ಕಿ ಅನ್ನ, ವ್ಹೀಟ್ ಬ್ರೆಡ್ ಸ್ಯಾಂಡ್‌ವಿಚ್ ಈ ಬಗೆಯ ಆಹಾರ ನೀಡಿ. ವಿಟಮಿನ್ ಸಿ ಇರುವ ಆಹಾರ ಮಾನಸಿಕ ಒತ್ತಡ ಕಡಿಮೆ ಮಾಡಲು ಸಹಕಾರಿಯಾಗಿದೆ, ಪರೀಕ್ಷೆ ಸಮಯದಲ್ಲಿ ಮಕ್ಕಳಲ್ಲಿ ಮಾನಸಿಕ ಒತ್ತಡ ಕಡಿಮೆ ಮಾಡಲು ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಈ ಬಗೆಯ ಆಹಾರ ಸಹಕಾರಿಯಾಗಿದೆ

**ನ್ಯೂಟ್ರಿಷಿಯನಿಸ್ಟ್ ನೀಡಿದ ಉಪಯುಕ್ತ ಸಲಹೆಗಳು**

**ಒಮೆಗಾ 3 ಕೊಬ್ಬಿನಂಶ ನೀಡಿ**

**ಅಗಸೆ ಬೀಜ, ಸೂಪ್, ಸಿಹಿ ಕುಂಬಳಕಾಯಿ ಬೀಜ, ಮೊಟ್ಟೆ ಈ ಬಗೆಯ ಆಹಾರ ಸೇವಿಸಲು ನೀಡಿ. ಸಾಕಷ್ಟು ನೀರು ಕುಡಿಯುವುದು ತುಂಬಾನೇ ಮುಖ್ಯ: ಪರೀಕ್ಷೆ ಸಮಯದಲ್ಲಿ ಸಾಕಷ್ಟು ನೀರು ಕುಡಿಯಬೇಕು. ದೇಹದಲ್ಲಿ ನೀರಿನಂಶ ಕಡಿಮೆಯಾದರೆ ಸುಸ್ತು ಉಂಟಾಗುವುದು. ಬರಿ ನೀರು ಕುಡಿಯಲು ಇಷ್ಟಪಡದಿದ್ದರೆ ಒಂದು ಲೋಟ ಫ್ರೆಷ್ ಜ್ಯೂಸ್ ಕೂಡ ಕುಡಿಯಬಹುದು.**

# ಗೃಹ ಸಚಿವ ಜಿ.ಪರಮೇಶ್ವರ್‌ಗೆ ತರಾಟೆ ತೆಗೆದುಕೊಂಡ ಬಿಜೆಪಿ

• ಉದಯವಾಹಿನಿ , ಬೆಂಗಳೂರು

ಗೃಹ ಸಚಿವ ಜಿ. ಪರಮೇಶ್ವರ್ ಅವರನ್ನು ಬಿಜೆಪಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ನೀವು ಗೃಹ ಸಚಿವರೋ ಅಥವಾ ಬೆನ್ನಿಗೆ ನಿಲ್ಲುವ ಗೃಹ ಸಚಿವರೋ ಎಂದು ಬಿಜೆಪಿ ಪ್ರಶ್ನೆ ಮಾಡಿದೆ. ಈ ಬಗ್ಗೆ ಸೋಷಿಯಲ್ ಮೀಡಿಯಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಆಕ್ರೋಶ ಹೊರ ಹಾಕಿದೆ.

ಈ ಬಗ್ಗೆ ಖಾರವಾಗಿಯೇ ಪ್ರಶ್ನೆ ಮಾಡಿದೆ. ಸಚಿವ ಪ್ರಿಯಾಂಕಾ ಖರ್ಗೆ ಅವರು ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲ ಎಂದು ಜಿ. ಪರಮೇಶ್ವರ್ ಅವರು ಹೇಳಿದ್ದರು. ಈ ವಿಚಾರ ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ಜಿ. ಪರಮೇಶ್ವರ್ ಅವರ ಮೇಲೆ ಕೆಂಡಕಾರಿದೆ. ಹಲೋ ಆಕಸ್ಮಿಕ ಗೃಹ ಸಚಿವ ಜಿ ಪರಮೇಶ್ವರ್ ಅವರೇ, ನೀವು ಯಾವತ್ತಾದರೂ ಅನ್ಯಾಯಕ್ಕೆ ಒಳಗಾದವರ ಬೆನ್ನಿಗೆ ನಿಂತಿದ್ದೀರಾ ಹೇಳಿ ಎಂದು ಪ್ರಶ್ನೆ ಮಾಡಿದೆ. ಆತ್ಮಹತ್ಯೆ ಮಾಡಿಕೊಂಡ ಸಚಿನ್ ಪಾಂಚಾಳ್ ಕುಟುಂಬದ ಬೆನ್ನಿಗೆ ನಿಂತುಕೊಳ್ಳುವುದು ಬಿಟ್ಟು, ಸಾವಿಗೆ ಕಾರಣರಾದ ಪ್ರಿಯಾಂಕಾ ಖರ್ಗೆ ಅವರ ಬೆನ್ನಿಗೆ ನಿಂತಿದ್ದೀರಿ ಎಂದರೆ, ನಿಮ್ಮ ಮನಸಾಕ್ಷಿ ಅದ್ಹೇಗೆ ಒಪ್ಪಿಕೊಂಡಿದೆ ಎಂದು ಆರೋಪಿಸಿದೆ. ನೀವು ಯಾವಾಗಲೂ ದುಷ್ಟರ ಬೆನ್ನಿಗೆ ನಿಂತುಕೊಳ್ಳುತ್ತೀರಿ ಎನ್ನುವುದು ಮೊದಲಿನಿಂದಲೂ ಸಾಬೀತಾಗಿದೆ ಎಂದಿದೆ. ಬಿಜೆಪಿ ಪಟ್ಟಿ ಮಾಡಿರುವ ಎಂಟು ಪ್ರಕರಣಗಳು ಪಾಕ್ ಪರ ಘೋಷಣೆ ಕೂಗಿದವರ ಬೆನ್ನಿಗೆ ನಿಂತಿದ್ದೀರಿ ಉಡುಪಿ ಕಾಲೇಜಿನ ಶೌಚಾಲಯದಲ್ಲಿ ವಿಡಿಯೋ ಮಾಡಿದವರ ಬೆನ್ನಿಗೆ ನಿಂತಿದ್ದೀರಿ ಡಿಜೆ ಹಳ್ಳಿ ಹಾಗೂ ಕೆಜಿ ಹಳ್ಳಿಯಲ್ಲಿ ಗಲಭೆ ಮಾಡಿದ ಮತಾಂಧರ ಬೆನ್ನಿಗೆ ನಿಂತಿರಿ ಹುಬ್ಬಳ್ಳಿ ಗಲಭೆಕೋರರ ಬೆನ್ನಿಗೆ ನಿಂತಿದ್ದೀರಿ ಕುಕ್ಕರ್ ಬಾಂಬ್ ಸ್ಫೋಟಿಸಿದ ಉಗ್ರರ ಪರವಾಗಿ ನಿಂತಿದ್ದೀರಿ ಶಿವಮೊಗ್ಗದಲ್ಲಿ ಕಲ್ಲು ತೂರಿದ ಮತಾಂಧರ ಬೆನ್ನಿಗೆ ನಿಂತಿದ್ದೀರಿ ಬೆಳಗಾವಿ ಸುವರ್ಣಸೌಧದಲ್ಲಿ ಗೂಂಡಾಗಿರಿ ಮಾಡಿದವರ ಬೆನ್ನಿಗೆ ನಿಂತಿದ್ದೀರಿ ಇದೀಗ ಆತ್ಮಹತ್ಯೆಗೆ ಕಾರಣರಾದ ಪ್ರಿಯಾಂಕ್ ಖರ್ಗೆ ಬೆನ್ನಿಗೆ ನಿಂತಿದ್ದೀರಿ ಎಂದು ಹೇಳಿದೆ.



**ಜಿ. ಪರಮೇಶ್ವರ್ ಹೇಳಿದ್ದೇನು**

**ಸುದ್ದಿಗಾರರೊಂದಿಗೆ ಮಾತನಾಡಿದ್ದ ಜಿ ಪರಮೇಶ್ವರ್ ಅವರು, ಪ್ರಿಯಾಂಕಾ ಖರ್ಗೆ ಅವರು ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲ ಎಂದಿದ್ದರು. ಮುಂದುವರಿದು ಬಿಜೆಪಿ ಅವರು ಹೇಳುವ ಎಲ್ಲದಕ್ಕೂ ಪ್ರತಿಕ್ರಿಯೆ ನೀಡುವ ಅವಶ್ಯಕತೆ ಇಲ್ಲ. ಅವರು ಸಕಾರಾತ್ಮಕವಾಗಿ ಟೀಕೆ ಮಾಡಿದರೆ ಪ್ರತಿಕ್ರಿಯೆ ನೀಡುವುದರಲ್ಲಿ ಅರ್ಥವಿದೆ ಎಂದಿದ್ದರು. ಇದಕ್ಕೆ ಬಿಜೆಪಿ ಜಿ ಪರಮೇಶ್ವರ್ ಅವರನ್ನು ತರಾಟೆಗೆ ತೆಗೆದುಕೊಂಡಿದೆ.**

# ಹೊಸ ವರ್ಷದ ಆಚರಣೆಗೆ ಬೆಂಗಳೂರು ಖಾಲಿ ಖಾಲಿ

• ಉದಯವಾಹಿನಿ , ಬೆಂಗಳೂರು

ಹೊಸ ವರ್ಷ ಸ್ವಾಗತಿಸುವ ಬಹುತೇಕ ಬೆಂಗಳೂರಿಗರು ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದಾರೆ. ಬೆಂಗಳೂರು ಬಹುತೇಕ ಖಾಲಿ ಖಾಲಿಯಾಗಿದ್ದು ರೆಸಾರ್ಟ್, ಹೋಮ್ ಸ್ಟೇ, ಲಾಡ್ಜ್ ಹಾಗೂ ರಾಜ್ಯದ ಪ್ರಮುಖ ವೀಕ್ಷಣೆಯ ಸ್ಥಳಗಳಲ್ಲಿ ಜನ ಸಾಗರವೇ ಕಂಡುಬರುತ್ತಿದೆ. ಹೌದು... ಪ್ರತೀ ಬಾರಿ ಹೊಸ ವರ್ಷವನ್ನು ಸ್ವಾಗತಿಸಲು ರಾಜ್ಯದ ಜನ ಗೋವಾದತ್ತ ಹೆಚ್ಚಾಗಿ ಮುಖ ಮಾಡುತ್ತಿದ್ದರು. ಇದೀಗ 2025 ಅನ್ನು ಸ್ವಾಗತಿಸಲು ಜನ ರಾಜ್ಯದ ಇತರ ಪ್ರಮುಖ ಹಾಗೂ ಪ್ರಸಿದ್ಧ ಪ್ರವಾಸಿ ತಾಣಗಳತ್ತ ಹೆಚ್ಚಾಗಿ ಪ್ರಯಾಣ ಬೆಳೆಸಿದ್ದಾರೆ. ರಾಜ್ಯದ ಕಡಲ ತೀರಗಳು, ದೇವಸ್ಥಾನಗಳು, ಹಸಿರು ತಾಣಗಳಿಗೆ ಹೆಚ್ಚಾಗಿ ಜನ ಭೇಟಿ ನೀಡುತ್ತಿದ್ದಾರೆ. ರಾಜ್ಯದ ಪ್ರಮುಖ ಕಡಲ ತೀರಗಳಿಗೆ ಭೇಟಿ- 2025 ಕರ್ನಾಟಕದ ಕಾರವಾರದ ಕರಾವಳಿ ತೀರದಲ್ಲಿರುವ ದ್ವೀಪ ದೇವ್‌ಭಾಗ್. ಕಾಳಿ ನದಿ ಹರಿದು ಬಂದು ಈ ಸಮುದ್ರವನ್ನು ಸೇರುವುದರಿಂದ ಹಾಗೂ ದಟ್ಟವಾದ ಕಾಡನ್ನು ಇದು ಹೊಂದಿರುವುದರಿಂದ ಪ್ರಕೃತಿ ಪ್ರೇಮಿಗಳಿಗೆ ಹಾಗೂ ಸಹಾಸಿಗಳಿಗೆ ಒಳ್ಳೆಯ ತಾಣವಾಗಿದೆ. ಜೊತೆಗೆ ಮುರುಡೇಶ್ವರ ಬೀಚ್, ಮಂಗಳೂರು ಬೀಚ್, ಗೋಕರಣ ಬೀಚ್, ಕಾರವಾರ, ಮಲ್ಪೆ ಬೀಚ್ ಗಳಲ್ಲಿ ಜನ ಹೆಚ್ಚಾಗಿ ಕಂಡುಬರುತ್ತಿದ್ದಾರೆ.

ರಾಜ್ಯದ ಪ್ರಮುಖ ದೇವಸ್ಥಾನಗಳಿಗೆ ಭೇಟಿ- 2025 ಹೊಸ ವರ್ಷವನ್ನು ದೇವರ ಆಶೀರ್ವಾದದ ಮೂಲಕ ಸ್ವಾಗತಿಸಲು ಜನ ರಾಜ್ಯದ ಪ್ರಮುಖ ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಹಂಪಿಯ ವಿರೂಪಾಕ್ಷ ದೇವಸ್ಥಾನ, ಉಡುಪಿಯ ಶ್ರೀಕೃಷ್ಣ ದೇವಸ್ಥಾನ, ಶೃಗೇರಿಯ ವಿದ್ಯಾಶಂಕರ ದೇವಸ್ಥಾನ, ಮುರುಡೇಶ್ವರ ಶಿವ ದೇವಸ್ಥಾನ, ಹಂಪಿ ವಿಠ್ಠಲ ದೇವಸ್ಥಾನ, ಗೋಕರ್ಣದ ಮಹಾಬಲೇಶ್ವರ, ಬೇಲೂರು ಚೆನ್ನಕೇಶ್ವರ ದೇವಸ್ಥಾನ, ಕೋಲಾರ ಕೋಟಿಲಿಂಗೇಶ್ವರ, ಪಟ್ಟದಕಲ್ಲು ಮಲ್ಲಿಕಾರ್ಜುನ, ಬಲ್ಲಿಗಾವಿ ಕೇದಾರೇಶ್ವರ, ಐಹೊಳೆ ಗ್ರಾಮದ ದುರ್ಗಾ ದುಡಿ, ಬಾಗಲಕೋಟೆ ಬಾದಾಮಿ ಗುಹಾ ದೇವಾಲಯಗಳಿಗೆ ಜನ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ.

ಪ್ರಸ್ತುತ ಚುಮು ಚುಮು ಚಳಿ ಶುರುವಾಗಿದೆ. ಬೆಳಗಿನ ಮಂಜು ಹಿತ ನೀಡುತ್ತಿದೆ. ಈ ಸಂದರ್ಭದಲ್ಲಿ ಹಚ್ಚ ಹಸಿರು ತಾಣಗಳಿಗೆ ಭೇಟಿ ನೀಡಿದರೆ ಅದರಲ್ಲಿರುವ ಮಜಾನೇ ಬೇರೆ. ವಿಶೇಷವಾಗಿ ಜಲಪಾತಗಳು ಇರುವ ಸ್ಥಳಗಳು ಹಾಗೂ ದೇವಸ್ಥಾನಗಳಿಗೆ ಜನ ಕಿಕ್ಕಿರುದು ಭೇಟಿ ನೀಡುತ್ತಿದ್ದಾರೆ.

# ಸಾಧನ ನೃತ್ಯಶಾಲೆಯ ಏಕಾದಶ ವಾರ್ಷಿಕೋತ್ಸವ ಸಂಭ್ರಮ





## ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

• ಉದಯವಾಹಿನಿ, ವಿಶೇಷ

ನೃತ್ಯರಂಗದಲ್ಲಿ ಉತ್ತಮ ಕಲಾವಿದೆ ಮತ್ತು ಬದ್ಧತೆಯ ಗುರುವೆಂದು ಹೆಸರಾದ ವಿದುಷಿ. ಭಾವನಾ ಶಂಕರ್ ವರ್ಷಪೂರ್ತಿ ಚಟುವಟಿಕೆಯಿಂದ ನೃತ್ಯ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿರುವ ವಿಶೇಷ ಅಸ್ಮಿತೆಯುಳ್ಳ ಬಹುಮುಖ ಪ್ರತಿಭೆಯ ಉತ್ಸಾಹೀ ಕಲಾವಿದೆ.

ಬೆಂಗಳೂರಿನ 'ಸಾಧನ ಡ್ಯಾನ್ಸ್ ಸೆಂಟರ್' ನೃತ್ಯಸಂಸ್ಥೆಯನ್ನು ಸ್ಥಾಪಿಸಿ ಕಳೆದ ಹನ್ನೊಂದು ವರ್ಷಗಳಿಂದ ವಿಶಿಷ್ಟ ರೀತಿಯಲ್ಲಿ ಮುನ್ನಡೆಸಿಕೊಂಡು ಬರುತ್ತಿರುವ ಭಾವನಾ, ಸ್ವತಃ ತಾವೂ ನಾಡಿನ ಅನೇಕ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನಗಳನ್ನು ಕೊಡುತ್ತ ಬಂದಿರುವರಲ್ಲದೆ, ತಮ್ಮ ನುರಿತ ಗರಡಿಯಲ್ಲಿ ನೃತ್ಯಾಕಾಂಕ್ಷಿಗಳನ್ನು ಸೂಕ್ತ ಎರಕದಲ್ಲಿ ರೂಪುಗೊಳಿಸುತ್ತ ಬಹು ಪರಿಶ್ರಮದಿಂದ ಅವರ ಬೆಳವಣಿಗೆಗಾಗಿ ಶ್ರಮಿಸುತ್ತಿರುವ ಪ್ರಾಮಾಣಿಕ ಮಾರ್ಗದರ್ಶಿ ಎನ್ನಬಹುದು.

ಪ್ರಸ್ತುತ ಭಾವನ ನೇತೃತ್ವದ ಸಾಧನ ಡ್ಯಾನ್ಸ್ ಸೆಂಟರ್‌ನ ಹನ್ನೊಂದನೆಯ ವಾರ್ಷಿಕೋತ್ಸವ ಸಮಾರಂಭ ದಿ. 5 ಜನವರಿ ಭಾನುವಾರ ಸಂಜೆ 6.30 ಕ್ಕೆ ಜಯನಗರದ 4ನೇ ಬ್ಲಾಕಿನ 'ವಿವೇಕ ಆಡಿಟೋರಿಯಂ' ಯುವಪಥದಲ್ಲಿ ನಡೆಯಲಿದೆ.

ಅದರಲ್ಲಿ ಅವರ ಶಿಷ್ಯರ ನೃತ್ಯ ಪ್ರದರ್ಶನಗಳೊಂದಿಗೆ ತಮ್ಮ ವಿಶೇಷ ಪರಿಕಲ್ಪನೆಯ ಕಥಾದೃಶ್ಯಗಳು ಮತ್ತು ವಿಶಿಷ ನೃತ್ಯ ಸಂಯೋಜನೆಯೊಂದಿಗೆ 'ರಾಮಾಯಣ' ನೃತ್ಯರೂಪಕವನ್ನು ಅರ್ಪಿಸಲಿದ್ದಾರೆ.

ಉದಯೋನ್ಮುಖ ಪ್ರತಿಭೆಗಳ ನೃತ್ಯವಲ್ಲರಿಯನ್ನು ಕಣ್ತುಂಬಿಸಿಕೊಳ್ಳಲು ಸರ್ವರಿಗೂ ಸ್ವಾಗತ.

ಉತ್ತಮ ನೃತ್ಯಗಾರ್ತಿಯಾಗಿಯೂ ಪ್ರಗತಿಪಥದಲ್ಲಿ ಸಾಗುತ್ತಿರುವ ನೃತ್ಯಗುರು ಭಾವನಾ ಶಂಕರ್, ಪ್ರತಿವರ್ಷವೂ ತಮ್ಮ ಎರಡುದಶಕಗಳ ನೃತ್ಯಾನುಭಾವದಿಂದ 'ಸಾಧನ ನೃತ್ಯ ಶಾಲೆ'ಯ ವಾರ್ಷಿಕೋತ್ಸವವನ್ನು ಬಹು ವಿಶಿಷ್ಟವಾಗಿ ರೂಪಿಸಿ, ತಮ್ಮ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯನ್ನು ಒದಗಿಸುವ ಪ್ರೋತ್ಸಾಹದಾಯಕ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ತಮ್ಮ ನವ ಪರಿಕಲ್ಪನೆಯ ನೃತ್ಯರೂಪಕಗಳೊಂದಿಗೆ ಉದಯೋನ್ಮುಖ ಪ್ರತಿಭೆಗಳ ಏಕವ್ಯಕ್ತಿ ನೃತ್ಯ ಪ್ರದರ್ಶನಕ್ಕೂ ಅನುವು ಮಾಡಿಕೊಡುವುದು ಅವರ ವಿಶೇಷ.

**ಸಾಧನ ನೃತ್ಯ ಶಾಲೆಯ ಏಕಾದಶ ಸಂಭ್ರಮ**

ಭಾವನಾ, ಚಿಕ್ಕ ವಯಸ್ಸಿನಿಂದಲೇ ಭರತನಾಟ್ಯವನ್ನು ಗುರು ಅನುರಾಧಾ ಶ್ರೀಧರ್ ಅವರಲ್ಲಿ ಕಲಿತು ಅನೇಕ ಕಡೆ ಪ್ರದರ್ಶನ ನೀಡಿ ಹದಗೊಂಡ ಅವರಿಗೆ ಹಲವಾರು ಪ್ರತಿಷ್ಠಿತ ಪ್ರಶಸ್ತಿ-ಬಿರುದುಗಳು ಸಂದಿವೆ. ದೇಶಾದ್ಯಂತ ತಮ್ಮ ನೃತ್ಯ ಪ್ರದರ್ಶನ ನೀಡಿರುವ ಇವರು, ತಮ್ಮ ಶಿಷ್ಯರನ್ನೂ ಅಷ್ಟೇ ಆಸ್ಥೆಯಿಂದ ಬೆಳೆಸುತ್ತಿದ್ದಾರೆ. ಉಡುಪಿಯ ರಾಜಾಂಗಣ, ಭರತ ನೃತ್ಯೋತ್ಸವ-2024, ಮೈಸೂರಿನ 40 ನೇ ಅಂತರರಾಷ್ಟ್ರೀಯ ಕಲೆಮನೆ' ಉತ್ಸವ ಮತ್ತು ಅರ್ಕ ಕಲಾ ಸಂಭ್ರಮ ಮುಂತಾದವು- ಇವರ ಪ್ರಮುಖ ಕಾರ್ಯಕ್ರಮಗಳಲ್ಲಿ ಕೆಲವು. ಉತ್ತಮ ಸಾಧನೆಯ ಕನಸು ಹೊತ್ತ ಭಾವನಾ ಹಗಲಿರುಳೂ ಶ್ರಮಿಸುತ್ತಿದ್ದಾರೆ. ಅವರಿಗೆ ಸರ್ವ ಶುಭಾಶಯಗಳು.

# ಎಳ್ಳು ಅಮಾವಾಸ್ಯೆ ನಿಮಿತ್ತ ಜೋಳದ ಹೊಲದಲ್ಲಿ ಚರಗ ಚೆಲ್ಲಿ ಸಂಭ್ರಮ

## ಸಾಮೂಹಿಕ ಶುಚಿ, ರುಚಿ ಭೋಜನ ಸವಿದ ಸಂತೃಪ್ತಿ, ಮಾರ್ಗಶಿರ ಮಾಸದಲ್ಲಿ ಬರುವ ಎಳ್ಳು ಅಮಾವಾಸ್ಯೆ ಅಪ್ಪಟ ರೈತರ ಹಬ್ಬ

• ಉದಯವಾಹಿನಿ, ಚಿಂಚೋಳಿ





ಉದಯವಾಹಿನಿ ಚಿತ್ರ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಳ್ಳು ಅಮಾವಾಸ್ಯೆ ಹಬ್ಬವನ್ನು ವಿಶೇಷವಾಗಿ ರೈತರ ಹೊಲದಲ್ಲಿ ಜೋಳದ ಹೊಲದಲ್ಲಿ ಚರಗಾ ಚೆಲ್ಲಿ ವಿಶೇಷವಾಗಿ ಕಡಬು, ಭಜ್ಜಿ ಸಜ್ಜದ ರೊಟ್ಟಿ, ಶೇಂಗಾದ ಹೋಳಿಗೆ, ಈರುಳ್ಳಿ ಪಲ್ಯಾ, ಅನ್ನ, ಸಾಂಬಾರು, ಅಡುಗೆ ಮಾಡಿ ಸ್ನೇಹಿತರಿಗೆ ಆಹ್ವಾನಿಸಿ ಊಟ ಸವಿಯುವ ಪರಂಪರೆವಿದ್ದು ಸಂಭ್ರಮದಿಂದ ಎಳ್ಳು ಅಮಾವಾಸ್ಯೆ ಹಬ್ಬವು ಸಂಭ್ರಮದಿಂದ ಆಚರಣೆ ಮಾಡುತ್ತಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಹಿರಿಯ ಮುಖಂಡ ಗೋಪಾಲರಾವ ಕಟ್ಟಿಮನಿ ಮಾರ್ಗಶಿರ ಮಾಸದಲ್ಲಿ ಬರುವ ಎಳ್ಳು ಅಮಾವಾಸ್ಯೆ ಅಪ್ಪಟ ರೈತರ ಹಬ್ಬ ಹೊಲಗಳಲ್ಲಿ ಬೆಳೆದು ನಿಂತಿರುವ ಹಿಂಗಾರು ಪೈರುಗಳ ನಡುವೆ ಬನ್ನಿ ಮರಗಳಿಗೆ, ಬನ್ನಿ ಕಂಟಿಗೆ ಸೀರೆ ಉಡಿಸಿ,ಐದು ಕಲ್ಲುಗಳನ್ನು ಪಾಂಡವರುವೆಂದು ಇಟ್ಟು ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ, ನಂತರ ಹುಲ್ ಹುಲ್‌ಗೋ ಚಲಾಂಬರಗೋ ಎಂದು ಕೂಗುತ್ತ ಮನೆಯಿಂದ ತಂದ ಆಹಾರವನ್ನು ಹೊಲದಲ್ಲಿ ಚೆಲ್ಲುತ್ತಾರೆ, ಇದನೇ ಚರಗ ಚೆಲ್ಲುವುದು ಎಂದು ಕರೆಯುತ್ತಾರೆ ಎಂದರು. ಗೌತಮ್ ವೈಜೇನಾಥ ಪಾಟೀಲ ಮಾತನಾಡಿ ಹಬ್ಬದ ವಿಶೇಷ ಅಮಾವಾಸ್ಯೆ 3-4 ದಿನ ಇರುವಾಗಲೇ ರೈತರ ಮನೆಗಳಲ್ಲಿ ಹಬ್ಬದ ತಯಾರಿ ನಡೆಯುತ್ತದೆ, ಎಳ್ಳು ಹಚ್ಚಿದ ಸಜ್ಜೆ ಜೋಳದ ರೋಟಿ ತಯಾರಿಸುವುದು, ನಾನಾ ಬಗೆಯ ಚಟ್ನಿ, ಕಾಳು, ಎಣ್ಣೆಗಾಯಿ, ಎಳ್ಳು, ಸೇಂಗಾ ಹೋಳಿಗೆ ತಯಾರಿಸಲಾಗುತ್ತದೆ,ಈ ಹಬ್ಬವು ರೈತರ ಹಬ್ಬವಾಗಿದ್ದು, ಜಾತಿ, ಮತ ಭೇದವಿಲ್ಲದೆ, ಒಕ್ಕಲುತನ ಅವಲಂಬಿಸಿರುವ ಹಿಂದೂ, ಮುಸ್ಲಿಂ ಕುಟುಂಬಗಳು ಎಳ್ಳು ಅಮಾವಾಸ್ಯೆಯಂದು ಹೊಲಕ್ಕೆ ಹೋಗಿ ಚರಗ ಚೆಲ್ಲುವುದು ಈ ಭಾಗದಲ್ಲಿ ಕಂಡು ಬರುತ್ತದೆ ಎಂದರು.

**ಹೊಲಕ್ಕೆ ಹೋಗಿ ಚರಗ ಚೆಲ್ಲುವುದು**

ಈ ಸಂದರ್ಭದಲ್ಲಿ ಸಂಜೀವನ್ ಆರ್. ಯಾಕಾ ಪೂರ, ವಿಕ್ರಂಪಾಟೀಲ, ಡಾ.ಬಸವೇಶ್ವ ಪಾಟೀಲ, ರೂಪಕಲಾ ಕಟ್ಟಿಮನಿ, ನಾಗೇಂದ್ರಪ್ಪ ಗುರಂಪಳ್ಳಿ, ಕೆಎಂ ಬಾರಿ, ರಾಜು ಪವ್ಹಾರ, ಪ್ರೇಮಸಿಂಗ್ ಜಾಧವ, ಶ್ರೀ ಮಂತ ಕಟ್ಟಿಮನಿ, ಹಣಮಂತ ಪೂಜಾರಿ, ಬಸವರಾಜ ಸಿರಸಿ, ರಾಹುಲ್ ಯಾಕಾಪೂರ, ಅವಿರೋಧ ಕಟ್ಟಿಮನಿ, ಸೈಯದ್ ಶಬ್ಬೀರ, ಖಲೀಲ್ ಪಟೇಲ, ಚಿತ್ರಶೇಖರ ಪಾಟೀಲ, ಪ್ರಭು ಲೇವಡಿ, ವಿಜಯಕುಮಾರ, ಹಾಫೀಜ್, ಅಬ್ದುಲ್ ಹಮೀದ್, ಗಣಪತರಾವ, ಅಶ್ವಥ ಕಟ್ಟಿಮನಿ, ಗಿರಿ ರಾಜ ನಾಟೀಕಾರ, ರೈತರು, ಸುನೀಲ್ ಸಲಗಾರ್ ಕುಟುಂಬಸ್ಥರು ಅನೇಕರಿದ್ದರು.

> ಹಿರಿಯ ರೈತರಿಗೆ ಭೂಮಿಗೆ ಪೂಜೆ ಸಲ್ಲಿಸಿದ ಧನ್ಯತೆಯಾದರೆ ಮಕ್ಕಳಿಗೆ ಹಸಿ ಕಡಲೆ ಕಿತ್ತು ತಿನ್ನುವ ಸಂಭ್ರಮ,ಹೀಗೆ ಹೊಲದಲ್ಲಿ ಸಂಜೆವರೆಗೆ ಆಟವಾಡುವ ಖುಷಿ ಮಕ್ಕಳಿಗೆ ಇರುತ್ತದೆ. ಹೆಚ್ಚಾಗಿ ಎರೆ ಭೂಮಿ ಪ್ರದೇಶದಲ್ಲಿ ಈ ಹಬ್ಬ ಸಾಕಷ್ಟು ವಿಜೃಂಭಣೆಯಿಂದ ಆಚರಿಸುತ್ತಾರೆ,ಉತ್ತಮ ಮಳೆ ಬೆಳೆ ಹಾಗೂ ಸಮೃದ್ಧ ಬೆಳೆ ಬೆಳೆಯುವಂತೆ ಕರುಣಿಸಲಿ ಎಂದು ದೇವರಲ್ಲಿ ಕೈಮುಗಿದು ರೈತರು ಪ್ರಾರ್ಥಿಸಿಕೊಳ್ಳುತ್ತಾರೆ
>
> – ರಮೇಶ ಯಾಕಾಪೂರ
> ಹಿರಿಯ ಸಮಾಜ ಸೇವಕ

**ಊಟ ಸವಿದು ಆಚರಣೆ**

ತಾಲ್ಲೂಕಿನ ವಿವಿಧೆಡೆ ಪಟ್ಟಣದ ಚಂದಾಪೂರದ ಹಿರಿಯ ಮುತ್ಸದ್ದಿ ಸಮಾಜ ಸೇವಕ ರಮೇಶ ಯಾಕಾಪೂರ ಮತ್ತು ರಾಜಕೀಯ ಹಿರಿಯ ಮುಖಂಡ ಗೋಪಾಲರಾವ ಕಟ್ಟಿಮನಿ, ರಾಜಕೀಯ ಯುವ ಮುಖಂಡ ಗೌತಮ್ ವೈಜಿನಾಥ ಪಾಟೀಲ ಅವರ ಹೊಲದಲ್ಲಿ ಎಳ್ಳು ಅಮಾವಾಸ್ಯೆ ಹಬ್ಬವನ್ನು ರೈತರನ್ನು, ಸ್ನೇಹಿತರನ್ನು ಆಹ್ವಾನಿಸಿ, ಕುಟುಂಬಸ್ಥರ ಜೊತೆ ಜೋಳದ ಹೊಲದಲ್ಲಿ ಚರಗಾ ಹೊಡೆದು ಸಾಮೂಹಿಕ ಊಟ ಸವಿದು ವಿಶೇಷವಾಗಿ ಸಂಭ್ರಮದಿಂದ ಆಚರಣೆ ಮಾಡಿದರು.

## ಭೂಮಿ ತಾಯಿಗೆ ಚರಗ ಚಲ್ಲಿ ಸಡಗರದಿಂದ ಎಳ್ಳು ಅಮವಾಸ್ಯೆ ಆಚರಿಸಿದ ರೈತರು

• ಉದಯವಾಹಿನಿ, ಯಾದಗಿರಿ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಮುದ್ನಾಳ ಉಮಲ್ಲಾ ನಾಯಕ ತಾಂಡದ ರೈತ ವಿಜಯ ಜಮೀನಿನಲ್ಲಿ ಸರಗ ಚೆಲ್ಲಿ ಸಡಗರದಿಂದ ಎಳ್ಳ ಅಮವಾಸ್ಯೆ ರೈತರ ಹಬ್ಬವನ್ನು ಆಚರಿಸಲಾಯಿತು. ಪೂಜೆ ಸಲ್ಲಿಸಿ ಸರಗ ಚೆಲ್ಲಿದ ನಂತರ ಮಾತನಾಡಿದ ಕರ್ನಾಟಕ ಪ್ರದೇಶ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಘೂ ಸಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ, ಇದು ಅಪ್ಪಟ ದೇಸಿ ಆಹಾರ ಸಂಸ್ಕೃತಿಯ ಅಮವಾಸೆಯಾಗಿದ್ದು, ಪುರಾತನ ಕಾಲದಿಂದಲೂ ನಮ್ಮ ಹಿರಿಯರು ಮಾಡಿಕೊಂಡು ಬಂದ ಸಂಪ್ರದಾಯಿಕ ಹಬ್ಬವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಒಳ್ಳೆಯ ಬೆಳವಣಿಗೆ.

ರೈತರು ತನ್ನ ಜಮೀನಿನಲ್ಲಿ ಬೆಳೆದ ಬೆಳೆಗೆ ಸರಗ ಚೆಲ್ಲುವ ಮೂಲಕ ಭೂಮಿ ತಾಯಿಗೆ ಸ್ಮರಿಸುವ ವಿಶಿಷ್ಟವಾದ ಈ ಹಬ್ಬದಿಂದಾಗಿ ರೈತರು ನೋವಿನಲ್ಲೂ ಸಂತಸ ಹರ್ಷ ಪಡುತ್ತಾರೆ ಎಂದು ನುಡಿದರು. ಈ ಹಬ್ಬದಂದು ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೇವಲ ಒಂದೇ ಬಾರಿ ಮಳೆ ಬಂದರೂ ಸಾಕು ಕೇವಲ ಇಬ್ಬನಿಗೆ ಬೆಳೆದು ನಿಲ್ಲುವ ಬೆಳೆ ಜೋಳದ ಬೆಳೆಯಾಗಿದೆ ಈ ಬೆಳೆ ಬೆಳೆಯುವುದರಿಂದ ಜೋಳದಿಂದ ರೈತರಿಗೆ ಹೊಟ್ಟೆ ತುಂಬುತ್ತದೆ. ವರ್ಷಪೂರ್ತಿ ರೈತರ ಮಿತ್ರರಾದ ಎತ್ತು ದನಕರುಗಳಿಗೆ ಸೊಪ್ಪೆ ಲಭಿಸುತ್ತದೆ. ಆದರೆ ಇತ್ತೀಚಿಗೆ ರೈತರು ಕೇವಲ ದುಡ್ಡಿನ ಬೆಳೆಗೆ ಒತ್ತು ಕೊಡುತ್ತಿರುವುದು ಸಾಮಾನ್ಯವಾಗಿದೆ.

ಹತ್ತಿ, ಸೂರ್ಯಪಾನ ಮುಂತಾದ ವಾಣಿಜ್ಯ ಬೆಳೆಗಳಿಗೆ ಮುಂದಾದ ಸಂದರ್ಭದಲ್ಲಿ ಈದೀಗ ಅತಿವೃಷ್ಟಿಯಲ್ಲಿ ಜೋಳ ಹೆಚ್ಚಿಗೆ ಬೆಳೆದಿರುವುದು ಕಂಡುಬರುತ್ತಿದೆ. ಜೋಳ ಅತಿವೃಷ್ಟಿಯಲ್ಲಿ ರೈತನ ಕೈ ಹಿಡಿದು ರೈತನಿಗೆ ಹಬ್ಬದ ಸಂಭ್ರಮ ತಂದುಕೊಡುವ ಬೆಳೆಯಾಗಿದೆ ಎಂದರು.

**ಸಾಮೂಹಿಕ ವನಭೋಜನ**

ಈ ಹಬ್ಬ ಬಂದರೆ ಸಾಕು ರೈತರು ತಮ್ಮ ಮನೆಯನ್ನು ಸ್ವಚ್ಛಗೊಳಿಸಿ ಎತ್ತು ಬಂಡಿಗಳನ್ನು ಸಿಂಗರಿಸಿ ಹೊಲಕ್ಕೆ ಹೋಗಿ ಸಂಭ್ರಮದಿಂದ ಸರಗ ಚೆಲ್ಲಿ ಭೂಮಿ ತಾಯಿಗೆ ಎಲ್ಲಾ ಮೂಲೆಗಳಿಗೆ ಅನ್ನದ ತುತ್ತುಗಳನ್ನು ಚರಗ ಚೆಲ್ಲಿ ಬೆಳೆ ಸಮೃದ್ಧಿಯಾಗಿ ಬೆಳೆಯಿಲಿ ಎಂದು ಪ್ರಾರ್ಥಿಸುತ್ತಾರೆ. ತದನಂತರ ಎತ್ತುಗಳಿಗೆ ಅನ್ನದ ತುತ್ತುಗಳನ್ನು ತಿನ್ನಿಸಿ ಸಾಮೂಹಿಕ ವನಭೋಜನ ಮಾಡುತ್ತಾರೆ.

ಈ ಸಂದರ್ಭದಲ್ಲಿ ಗೋಪಾಲ, ಜೈರಾಮು, ಚಾಂಧಿ ಬಾಯಿ, ಹೆಮಲಿ ಬಾಯಿ, ಗನ್ನಿ ಬಾಯಿ, ಶಾಂತಿ ಬಾಯಿ ಪೂರಿ ಬಾಯಿ, ದೇವಿ ಬಾಯಿ, ಜಮಲಿ ಬಾಯಿ, ಚಂದ್ರು, ರಾಜು, ಸೋನಿ ಬಾಯಿ, ಕರಿ ಬಾಯಿ, ಚಾಂದಿ ಬಾಯಿ, ಗಂಗಿ ಬಾಯಿ, ಸೇರಿ ಅನೇಕರು ರೈತರು ಮಕ್ಕಳು ಉಪಸ್ಥಿತರಿದ್ದರು.

## ಕೃಷಿ ಕಾಯಕ ಪವಿತ್ರವಾದದ್ದು ರೈತರಿಲ್ಲದ ಜಗತ್ತು ಇಲ್ಲ

• ಉದಯವಾಹಿನಿ, ವಡಗೇರಾ



ಉದಯವಾಹಿನಿ ಚಿತ್ರ

ಭೂಮಿ ಮೇಲಿರುವ ಸಕಲ ಜೀವರಾಶಿಗಳಿಗೆ ಆಸರೆ ನೀಡಿರುವ ಮತ್ತು ರೈತರ ಆರಾಧ್ಯ, ದೇವತೆ ಭೂಮಿ ತಾಯಿಗೆ ಎಳ್ಳ ಅಮಾವಾಸ್ಯೆ ದಿನದಂದು ವಿಶೇಷ ಪೂಜೆ ಸಲ್ಲಿಸಿ ಚೇರಗ ಚೆಲ್ಲುವ ಸಂಪ್ರದಾಯ ಅನಾದಿಕಾಲದಿಂದಲೂ ನಡೆದು ಬಂದಿದೆ ಎಂದು ಪರಮಪೂಜ್ಯ, ಶ್ರೀ ಕರುಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು. ಅಮಾವಾಸ್ಯೆ ನಿಮಿತ್ಯ ತಾಲ್ಲೂಕಿನ ಸುಕ್ಷೇತ್ರ ಕೃಷ್ಣವೇಣಿ ಭೀಮಾ ಸಂಗಮದ ಸಂಗಮೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ 91ನೇ ಶಿವಾನುಭವ ಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿದರು.

ಈ ಶಿವಾನುಭವ ಗೋಷ್ಠಿಯ ವಿಶೇಷ ಉಪನ್ಯಾಸವನ್ನು ವೇದಮೂರ್ತಿ ಶ್ರೀ ಬನ್ನಯ್ಯ ಸ್ವಾಮಿ ಹಿರೇಮಠ ರಾಜೋಳ್ ನಿಡಿದರು .ಇದು ರೈತರ ಪ್ರಮುಖ ಹಬ್ಬವಾಗಿದ್ದು ಒಕ್ಕಲುತನ ಅವಲಂಬಿಸಿರುವ ರೈತರು ಜಾತಿ ಭೇದವಿಲ್ಲದೆ ಹೊಲಗಳಿಗೆ ತೆರಳಿ ಪೂಜೆಸಲ್ಲಿಸಿ ಸಾಮೂಹಿಕ ಭೋಜನ ಸವಿಯುವ ಪ್ರತಿತಿಯಿದೆ ಎಂದರು.

ಈ ಸಂದರ್ಭದಲ್ಲಿ ವೇದಮೂರ್ತಿ ಶ್ರೀ ವೀರಭದ್ರಯ್ಯ ಸ್ವಾಮಿ ದೇವಸುಗೂರು, ಶಿವಯ್ಯ ಸ್ವಾಮಿ ಸಾತಕೇಡ, ಚಂದ್ರಶೇಖರಗೌಡ ಗೋನಾಲ, ಮಲ್ಲಿಕಾರ್ಜುನ್ ರೆಡ್ಡಿ, ಶಾಂತಯ್ಯ ಸ್ವಾಮಿ ಗೊಬ್ಬುರ, ಶ್ರೀಮತಿ ಅನುಷಾ, ಸಿದ್ದಪ್ಪಗೌಡ ಶಿವಪುರ, ಶಿವಶರಣಯ್ಯ ಸ್ವಾಮಿ, ಮಲ್ಲಿಕಾರ್ಜುನ್ ಗೌಡ ಕಾಡ್ಲುರ, ಮರೇಪ್ಪ ತೋಟದ, ಬಸವರಾಜಪ್ಪ ಗೌಡ ಚಿಕ್ಕಬೂದುರ, ಶ್ರೀಮತಿ ಭೀಮಮ್ಮ, ಶ್ರೀಮತಿ ಬನ್ನಮ್ಮ ವೆಂಕಟೇಶ್ ,ಮಲ್ಲಿಕಾರ್ಜುನ್, ಶರಣಪ್ಪ, ಮಾರೆಪ್ಪ ಕಾಡ್ಲೂರು, ಹಾಗೂ ಇನ್ನಿತರರು ಉಪಸ್ಥಿತರಿದ್ದರು

> ಭೂಮಿತಾಯಿ ರೈತರ ಸಂಬಂಧ ತಾಯಿ ಮಕ್ಕಳ ಸಂಬಂಧವಾಗಿದೆ ಕೃಷಿಯ ಕಡೆಗಣನೆ ಮಾಡಬಾರದು ರೈತರಿಲ್ಲದ ಜಗತ್ತು ಇಲ್ಲ ಕೃಷಿ ಕಾಯಕ ಅತ್ಯಂತ ಪವಿತ್ರವಾದದ್ದು ರೈತರಿಲ್ಲದೆ ಜಗತ್ತು ಇಲ್ಲ ದೇಶಕ್ಕೆ ಅನ್ನ ನೀಡುವ ರೈತನನ್ನು ಪ್ರತಿಯೊಬ್ಬರು ಗೌರವಿಸಬೇಕು ಎಂದರು.

## ರಾಜಕೀಯ ಪಲ್ಲಟ, ಅಸ್ಪೃಶ್ಯತೆ ಆಚರಿಸಿದವರಿಗೆ ಪಾಠ

• ಉದಯವಾಹಿನಿ, ಕೊಪ್ಪಳ



ಉದಯವಾಹಿನಿ ಚಿತ್ರ

ಎರಿಳಿತಗಳ ನೆನಪುಗಳನ್ನು ಹೊತ್ತು 2024ಕ್ಕೆ ವಿದಾಯ ಹೇಳುವ ಹೊಸ್ತಿಲಲ್ಲಿದ್ದೇವೆ. ಈ ವರ್ಷ ಬೊಗಸೆ ತುಂಬಾ ಸಿಹಿಕಹಿಗಳ ನೆನಪುಗಳು ಮೆರವಣಿಗೆಯೇ ಸಾಗಿ ಬಂದಿದೆ. ಮುಖ್ಯವಾಗಿ ರಾಜಕೀಯ ಪಲ್ಲಟ ಮತ್ತು ಅಸ್ಪೃಶ್ಯತೆ ಆಚರಣೆ ಮಾಡಿದ್ದಕ್ಕೆ ಪಾಠ ಕಲಿಸಿದ ಘಟನೆಗಳು ನಡೆದಿವೆ. ಜಿಲ್ಲೆಯಲ್ಲಿ ನಡೆದ ಪಲ್ಲಟಗಳು ರಾಜಕೀಯ ಹೊಸ ಬದಲಾವಣೆಗೆ ನಾಂದಿಯಾದವು.

ಲೋಕಸಭಾ ಚುನಾವಣೆ ವೇಳೆ ಸತತ ಮೂರನೇ ಬಾರಿಗೆ ಬಿಜೆಪಿಯಿಂದ ಟಿಕೆಟ್ ಆಕಾಂಕ್ಷಿಯಾಗಿದ್ದ ಸಂಗಣ್ಣ ಕರಡಿ ಅವರಿಗೆ ಈ ಬಾರಿ ಪಕ್ಷ ಕೈ ಹಿಡಿಯಲಿಲ್ಲ. ವೈದ್ಯ ಬಸವರಾಜ ಕ್ಯಾಟರ್ ಅವರಿಗೆ ಟಿಕೆಟ್ ನೀಡಿತು. ಇದರಿಂದ ಸಿಟ್ಟಾದ ಸಂಗಣ್ಣ ಕಮಲ ತೊರೆದು 'ಕೈ' ಹಿಡಿದರು. ಬೆಂಬಲಿಗರು ಬಿಜೆಪಿ ಕಚೇರಿಯಲ್ಲಿ ದಾಂಧಲೆ ಮಾಡಿ ಗಾಜು ಒಡೆದರು. ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಸೋಲು ಕಂಡಿದ್ದ ರಾಜಶೇಖರ ಹಿಟ್ನಾಳ ಅವರಿಗೆ ಈ ಪರಿಸ್ಥಿತಿ ಲಾಭ ತಂದುಕೊಟ್ಟಿತು. ಮೊದಲ ಬಾರಿಗೆ ಸಂಸದರಾಗುವ ಅವಕಾಶವೂ ಒದಗಿಬಂದಿತು.


ಇದರಿಂದ ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಸತತ ಮೂರು ಬಾರಿ ಜಯಿಸಿದ್ದ ಬಿಜೆಪಿ ಅಧಿಕಾರ ಅಂತ್ಯವಾಯಿತು. ರಾಜಕೀಯ ಅಧಿಕಾರಕ್ಕಾಗಿ ಬಳ್ಳಾರಿಯಿಂದ ಗಂಗಾವತಿಗೆ ಬಂದ ಜನಾರ್ದನ ರೆಡ್ಡಿ ಕೆಆರ್‌ಪಿಪಿಯಿಂದ ಗೆದ್ದು ಶಾಸಕರಾಗಿದ್ದರು. ಲೋಕಸಭಾ ಚುನಾವಣೆ ವೇಳೆ ತವರು ಪಕ್ಷ ಬಿಜೆಪಿಗೆ ಮರಳಿದರು.

ಮಾಜಿ ಸಚಿವ ಅಮರೇಗೌಡ ಬಯ್ಯಾಪುರ ಕಾಂಗ್ರೆಸ್ ಪಕ್ಷದ, ನವೀನ್ ಗುಳಗಣ್ಣನವರ ಬಿಜೆಪಿ ಜಿಲ್ಲಾಧ್ಯಕ್ಷರಾಗಿ ನೇಮಕವಾದರು.

**ಆಚರಣೆಗೆ ಪಾಠ:** ಜಿಲ್ಲೆಯಲ್ಲಿ ಒಂದೇ ವರ್ಷದಲ್ಲಿ ಆಸ್ಪೃಶ್ಯತೆ ಆಚರಿಸಿದ ಹಾಗೂ ಪರಿಶಿಷ್ಟ ಜಾತಿ, ಪಂಗಡದ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿ 62 ಪ್ರಕರಣಗಳು ದಾಖಲಾದವು. ಅದರಲ್ಲಿ 18 ಎಫ್‌ಐಆರ್ ಮಾಡಲಾಯಿತು.

## ಬಾಣಂತಿ ಸಾವಿನ ಪ್ರಕರಣ ಮಾಸುವ ಮುನ್ನವೇ ವಿಜಯನಗರದಲ್ಲಿ ಬಾಣಂತಿ ಸಾವು

• ಉದಯವಾಹಿನಿ, ಹೊಸಪೇಟೆ



ಉದಯವಾಹಿನಿ ಚಿತ್ರ

ಬಳ್ಳಾರಿಯಲ್ಲಿ ಬಾಣಂತಿ ಸಾವಿನ ಪ್ರಕರಣ ಮಾಸುವ ಮುನ್ನವೇ, ವಿಜಯನಗರ ಜಿಲ್ಲೆಯಲ್ಲಿ ಬಾಣಂತಿ ಸಾವಿನ ಪ್ರಕರಣ ಬೆಳಕಿಗೆ ಬಂದಿದೆ.

> ಹೆರಿಗೆಯಾಗಿ ನಾಲ್ಕು ದಿನಗಳಾದ ಮೇಲೆ ಐಶ್ವರ್ಯಳ ಸಾವಾಗಿದೆ. ಫುಡ್ ಪಾಯ್ಸನ್‌ನಿಂದ ಈ ಘಟನೆ ನಡೆದಿದೆ ಎಂದು ವೈದ್ಯರು ಹೇಳುತ್ತಿದ್ದಾರೆ. ಈ ಘಟನೆ ಕುರಿತು ಪರಿಶೀಲಿಸಲಾಗುವುದು.
>
> -ಎಂ.ಎಸ್.ದಿವಾಕರ್
> ಜಿಲ್ಲಾಧಿಕಾರಿ, ವಿಜಯನಗರ

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಕಳೆದ ಡಿ.19 ರಂದು ದಾಖಲಾದ ತಾಲ್ಲೂಕಿನ ಇಂಗಳಿಗಿ ಗ್ರಾಮದ ನಿವಾಸಿ ರಾಮಪ್ಪ ಎಂಬುವರ ಪುತ್ರಿ ಐಶ್ವರ್ಯ (20)ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಶುಕ್ರವಾರ (ಡಿ.26) ಸಾವನಪ್ಪಿದ್ದಾಳೆ.

ಈ ಘಟನೆಯಿಂದ 8 ದಿನದ ಹೆಣ್ಣು ಹಸುಗೂಸು ತಬ್ಬಲಿಯಾಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಸಂಡೂರು ತಾಲ್ಲೂಕಿನ ವಿ ನಾಗಲಾಪುರದ ನಿವಾಸಿ ಹುಲಿರಾಜ್ ಎಂಬುವ ಯುವಕ ನೊಂದಿಗೆ ಐಶ್ವರ್ಯ ಳನ್ನು ವಿವಾಹ ಮಾಡಿಕೊಡಲಾಗಿತ್ತು.

ಗರ್ಭಿಣಿಯಾಗಿದ್ದ ಐಶ್ವರ್ಯಳ ಹರಿಗೆ ಗೆಂದು ಇಂಗಳಿಗಿ ಗ್ರಾಮದಲ್ಲಿರುವ ತವರು ಮನೆಗೆ ಬಂದಿದ್ದಳು.

ಹರಿಗೆ ಸಮಯ ಹತ್ತಿರವಾಗುತ್ತಿಂದತೇ ವೈದ್ಯರ ಸಲಹೆ ಮೇರೆಗೆ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು.

ಕಳೆದ ಡಿ.20 ರಂದು ಸಿಸೇರಿಯನ್ ಮೂಲಕ ವೈದ್ಯರು ಹೆರಿಗೆ ಮಾಡಿಸಿದ್ದರು.

ಎರಡು ದಿನದ ಬಳಿಕ ವಾಂತಿ-ಭೇದಿ ಕಾಣಿಸಿ ಕೊಂಡು ಬಾಣಂತಿಯ ಆರೋಗ್ಯದಲ್ಲಿ ಏರುಪೇರು ಆಗಿದೆ.

ಹೆಚ್ಚಿನ ಚಿಕಿತ್ಸೆಗೆ ಕೊಪ್ಪಳ ಜಿಲ್ಲಾಸ್ಪತ್ರೆಗೆ ಕಳಹಿಸಿಕೊಟ್ಟಿದ್ದು, ಚಿಕಿತ್ಸೆ ಫಲಕಾರಿಯಾದೇ ಡಿ.26 ರಂದು ಅಸು ಬಾಣಂತಿ ನೀಗಿದ್ದಾಳೆ.

**ಸಿಸೇರಿಯನ್ ಮೂಲಕ ಹೆರಿಗೆ**

**ಫುಡ್ ಪಾಯ್ಸನ್ ಎಂದ ವೈದ್ಯರು**

ಹೆರಿಗೆಯಾದ ಬಳಿಕ ಬಾಣಂತಿ ಐಶ್ವರ್ಯಳ ದೇಹ ಊದುಕೊಂಡಿದ್ದು, ಮೂತ್ರ ಕೆಂಪು ಬಣ್ಣಕ್ಕೆ ತಿರುಗಿದೆ. ವೈದ್ಯರು ಮತ್ತು ದಾದಿಯರ ಗಮನಕ್ಕೆ ತಂದರೂ, ಅವರು ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಹೀಗಾಗಿ ನನ್ನ ಪತ್ನಿಯ ಆರೋಗ್ಯ ಗಂಭೀರ ಸ್ವರೂಪ ಪಡೆದುಕೊಂಡಿತು. ಆಗ ವೈದ್ಯರು ಕೊಪ್ಪಳದ ಜಿಲ್ಲಾಸ್ಪತ್ರೆಗೆ ಕಳುಹಿಸಿ, ಕೈತೊಳೆದುಕೊಂಡರು. ಹೋಟೆಲ್‌ನಿಂದ ಅವಳಿಗೆ ಇಡ್ಲಿ ತೆಗೆದುಕೊಡಲು ಹೇಳಿದ್ದ ವೈದ್ಯರೇ ಇದೀಗ ಫುಡ್ ಪಾಯ್ಸನ್‌ನಿಂದ ವಾಂತಿ-ಬೇಧಿ ಉಂಟಾಗಿ ಸಾವು ಸಂಭವಿಸಿದೆ ಎಂದು ಹೇಳುತ್ತಿದ್ದಾರೆ. ಈ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ. ಇದರಿಂದ ನನ್ನ ಮಗು ತಬ್ಬಲಿಯಾಗಿದೆ. ಈ ಸಾವಿಗೆ ನ್ಯಾಯ ಕೊಡಿಸಿ ಎಂದು ಅಂಗಲಚಾಚಿದರು.

## ಜಾತ್ರೆಗಳು ಜಾತ್ಯಾತೀತ, ಸಾಮರಸ್ಯ ಬೆಸೆಯುವ ಕೊಂಡಿಯಾಗಿವೆ

• ಉದಯವಾಹಿನಿ, ಹರಪನಹಳ್ಳಿ



ಉದಯವಾಹಿನಿ ಚಿತ್ರ

ನಾಡು, ನುಡಿಗೆ ತನ್ನದೆ ಆದ ಕೊಡುಗೆ ನೀಡಿದ್ದು, ಭವ್ಯ ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ವಾಲ್ಮೀಕಿ ನಾಯಕ ಸಮುದಾಯದ ಜಾತ್ರೆಯು ಜಾಗೃತಿಯನ್ನು ಮೂಡಿಸುವಂತಾಗಬೇಕು ಎಂದು ಹರಿಹರದ ರಾಜನಹಳ್ಳಿಯ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿಗಳು ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ವಾಲ್ಮೀಕಿ ಸಮುದಾಯಕ್ಕೆ ಸಿಗಬೇಕಾದ ಸಾಂವಿಧಾನಿಕ ಹಕ್ಕಿಗಾಗಿ ಆಗ್ರಹಿಸುವ ಮಹಾ ವೇದಿಕೆಯಾಗಬೇಕು.

ಮೀಸಲಾತಿ ಹೆಚ್ಚಳ ಹೋರಾಟದಿಂದ ನಮ್ಮ ಸಮುದಾಯಕ್ಕೆ ಮೀಸಲಾತಿ ಹೆಚ್ಚಳವಾಗಿದ್ದು ನಮ್ಮ ಸಮಾಜದ ಮಕ್ಕಳಿಗೆ ಶೈಕ್ಷಣಿಕ. ಉದ್ಯೋಗದಲ್ಲಿ ಸಾಕಷ್ಟು ಅವಕಾಶಗಳು ಸಿಕ್ಕಿವೆ. ಅದರೂ ಕೂಡ ಜಲ್ವಂತ ಸಮಸ್ಯೆಗಳು ಇದ್ದು ಪ್ರಮುಖವಾಗಿ ಸುಳ್ಳುಜಾತಿ ಪ್ರಮಾಣಪತ್ರ ಪಡೆದುಕೊಂಡು ನಿಜ ವಾದ ನಾಯಕರಿಗೆ ಅನ್ಯಾಯವಾಗುತ್ತಿದ್ದು ನಾವು ಸಂಘಟಿತರಾಗಬೇಕು ಮತ್ತು ಜಾಗೃತರಾಗಬೇಕು ಎಂದು ಹೇಳಿದರು.


**ಸಾಂವಿಧಾನಿಕ ಹಕ್ಕಿಗಾಗಿ ಆಗ್ರಹಿಸುವ ಮಹಾ ವೇದಿಕೆ ಯಾಗಬೇಕು**

ಮುಂಬರುವ ಫೆಬ್ರವರಿ 08 ಮತ್ತು 09ರಂದು ಗುರುಪೀಠದಲ್ಲಿ ನಡೆಯಲಿರುವ ವಾಲ್ಮೀಕಿ ಜಾತ್ರೆಗೆ, ಜಾತ್ರಾ ಸಮಿತಿಯ ಹರಪನಹಳ್ಳಿ ತಾಲ್ಲೂಕು ಜಾತ್ರ ಸಮಿತಿಯ ಅಧ್ಯಕ್ಷರಾಗಿ ಹಿರೆ ಮೇಗಳಗೇರಿ ಲಕ್ಕಳ್ಳಿ ಹನುಮಂತಪ್ಪ ಅವರನ್ನ ಸರ್ವಾನುಮತದಿಂದ ಪ್ರಸನ್ನಾನಂದಪುರಿ ಶ್ರೀ ಗಳು ಆಯ್ಕೆ ಮಾಡಿದರು.

> ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಾಗಿ ಸಂಘಟಿತರಾಗಬೇಕು ಎಂಬ ಸದುದ್ದೇಶ ದಿಂದ ವಾಲ್ಮೀಕಿ ಜಾತ್ರೆ ಆರಂಭಿಸಲಾಯಿತು ಎಂದ ಅವರು ಜಾತ್ರೆಗಳು ಜಾತ್ಯಾತೀತ ಮನೋ ಭಾವನೆಯ ಮೂಲಕ ಎಲ್ಲರಲ್ಲೂ ಸಾಮರಸ್ಯ ಬೆಸೆಯುವ ಕೊಂಡಿಯಾಗಿದು, ಅದನ್ನು ಇಂದಿಗೂ ಸಹ ಆಚರಿಸಿಕೊಂಡು ಮುಂದುವರೆಯುತ್ತಿವೆ ರಾಜ್ಯದಲ್ಲಿ 60ಲಕ್ಷ ಜನಸಂಖ್ಯೆ ಇದ್ದು ರಾಜ್ಯದಲ್ಲಿ ಕಳೆದ 15 ವರ್ಷಗಳಿಂದ 28 ಜಿಲ್ಲೆಗಳು, 175 ತಾಲ್ಲೂಕುಗಳ ಪ್ರವಾಸ ಮಾಡಿ ಜಾತ್ರೆಗೆ ಅಹ್ವಾನ ನೀಡುವ ಮೂಲಕ ರಾಜ್ಯದ 4ನೇ ಅತಿ ದೊಡ್ಡ ಸಮುದಾಯವನ್ನು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಈ ಬಾರಿ ಕೂಡ ಜಾತ್ರೆ ಯಶಸ್ವಿಯಾಗಲು ನಿಮ್ಮಗಳ ಸಹಕಾರ ಅಗತ್ಯವಾಗಿದೆ ಎಂದರು.

## ಬಳ್ಳಾರಿ ಸೊಸೈಟಿ ಚುನಾವಣೆ ಎರಡು ಗುಂಪುಗಳ ಸಮಬಲ

• ಉದಯವಾಹಿನಿ, ಬಳ್ಳಾರಿ



ಉದಯವಾಹಿನಿ ಚಿತ್ರ

ಬಳ್ಳಾರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಸೊಸೈಟಿ)ಯ 12 ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ದೊಡ್ಡಬಸನಗೌಡ, ಕೆರಕೋಡಪ್ಪ ಮತ್ತು ಮುಂಡ್ಲೂರು ಶ್ರೀಧರ್ ಅವರ ತಂಡಗಳು ಸಮ ಬಲ ಸಾಧಿಸಿವೆ ಎಂದು ಹೇಳಲಾಗುತ್ತಿದೆ. ಸೊಸೈಟಿಯ ಸಭಾಂಗಣದಲ್ಲಿ ನಾಲ್ಕರವರೆಗೆ ಮತದಾನ ನಡೆಯಿತು. ಸಾಲಗಾರರ ಕ್ಷೇತ್ರಕ್ಕೆ ಶೇ 90 ಕ್ಕೂ ಹೆಚ್ಚು ಮತದಾನವಾದರೆ, ಸಾಲಗಾರರಲ್ಲದ ಕ್ಷೇತ್ರದಿಂದ ಶೇ 50 ರಷ್ಟು ಮಾತ್ರ ಮತದಾನವಾಗಿತ್ತು.

ಮತದಾನದ ಬಳಿಕ ಮತಗಳ ಎಣಿಕೆ ನಡೆಯಿತು.

ಸಾಲಗಾರರಲ್ಲದ ಕ್ಷೇತ್ರದಿಂದ ಶಿಲ್ಪ ಅವರು ಆಯ್ಕೆಯಾದರೆ. ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಬಿ.ಕೆ.ಕೆರಕೋಡಪ್ಪ ಅವರು ಒಂಭತ್ತನೇ ಬಾರಿಗೆ ಅತಿ ಹೆಚ್ಚು ಮತ ಪಡೆದು ಆಯ್ಕೆಯಾಗಿದ್ದಾರೆ. ಇವರು ಕಳೆದ 1983 ರಿಂದ ಈ ಸೊಸೈಟಿಯಲ್ಲಿ ಆಯ್ಕೆಯಾಗುತ್ತ. ಮೂರು ಬಾರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇನ್ನು 252 ಮತ ಪಡೆದು ಎತ್ತಿನಬೂದಿಹಾಳ್ ಶ್ರೀನಿವಾಸರೆಡ್ಡಿ ಆಯ್ಕೆಯಾದರೆ. ಬೆಳಿ ಕಟ್ಟೆಪ್ಪ 251 ಮತ ಪಡೆದು ಒಂದು ಮತದ ಅಂತರದಿಂದ ಸೋಲು ಕಂಡರು. ಉಳುದಂತೆ ಸಾಮಾನ್ಯ ಕ್ಷೇತ್ರದಿಂದ ಜೆ. ಪಂಪಾಪತಿ, ಕೆ.ಫಕ್ಕೀರಪ್ಪ, ಹಂಪವತಿ ಕೆ. ಮತ್ತು ಓಬಿಸಿ (ಎ) ಕ್ಷೇತ್ರದ ಒಂದು ಸ್ಥಾನಕ್ಕೆ ಕಲ್ಪನಾ ಕೆ.ಜೆ, ಹಾಗು ಎಸ್ಟಿ ಕ್ಷೇತ್ರದ ಒಂದು ಸ್ಥಾನಕ್ಕೆ ಆಂಜನೇಯ ಇವರು ಆಯ್ಕೆಯಾಗಿದ್ದಾರೆ.

ಇನ್ನುಳಿದ ನಾಲ್ಕು ಸ್ಥಾನಗಳಿಗೆ ಒಬಿಸಿ (ಬಿ) ಒಂದು ಸ್ಥಾನಕ್ಕೆ ಮಾಜಿ ಅಧ್ಯಕ್ಷ ಮಿಂಚೇರಿಯ ಎಸ್. ದೊಡ್ಡನಗೌಡ, ಎಸ್ಸಿ ಮೀಸಲು ಒಂದು ಸ್ಥಾನಕ್ಕೆ ವಿಶ್ವನಾಥಪುರ ಕಾಲೋನಿಯ ಶಾರದಮ್ಮ, ಮಹಿಳೆಯರ ಮೀಸಲಿನ ಎರೆಡು ಸ್ಥಾನಗಳಿಗೆ ಪಟೇಲ್ ನಗರದ ಬಿ.ಚಂದ್ರಿಕಾ ಮತ್ತು ಕೆ.ಶ್ರೀಕಳಾ ಬೊಜ್ಜಪ್ಪ ಇವರು ಅವಿರೋಧವಾಗಿ ಆಯ್ಕೆಯಾಗಿದ್ದರು.

# ಯಾವುದೇ ಫಲಾಪೇಕ್ಷೆ ಇಲ್ಲದೆ ಸಲ್ಲಿಸುತ್ತಿರುವ ಸೇವೆಗೆ ಸಿಕ್ಕ ಗೌರವ

## ಮೆಕ್ಸಿಕೋ ಟೋಲೋಸಾ ವಿಶ್ವವಿದ್ಯಾಲಯದಿಂದ ನರಸಮ್ಮಾ ಲಕ್ಷ್ಮಣ ಆವುಂಟಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ

• ಉದಯವಾಹಿನಿ, ಚಿಂಚೋಳಿ



ಉದಯವಾಹಿನಿ ಚಿತ್ರ

ತಾಲ್ಲೂಕಿನ ನರಸಮ್ಮಾ ಲಕ್ಷ್ಮಣ ಆವುಂಟಿ ಅವರಿಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಮಹಿಳಾ ಸಬಲೀಕರಣ ಹಾಗೂ ಸಮಾಜ ಸೇವೆಯಲ್ಲಿ ವಿಶೇಷ ಸೇವೆ ಮಾಡಿ ಹಲವಾರು ಪ್ರಶಸ್ತಿಗೆ ಭಾಜನರಾಗಿ ಮಹಿಳೆಯರ ದ್ವನಿಯಾಗಿ ಕೆಲಸ ಮಾಡುತ್ತಿರುವುದು ಸೇವೆಯನ್ನು ಪರಿಗಣಿಸಿ ಕಲಬುರ್ಗಿಯಲ್ಲಿ ಜರುಗಿದ ಮೆಕ್ಸಿಕೋದ ಅಂತರಾಷ್ಟ್ರೀಯ ಮಟ್ಟದ ಟೋಲೋಸಾ ವಿಶ್ವವಿದ್ಯಾಲಯದಿಂದ ಹಮ್ಮಿಕೊಂಡ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಿ ಸನ್ಮಾನಿಸಿ ಗೌರವಿಸಲಾಯಿತು.

ತಾಲ್ಲೂಕಿನ ದೋಟಿಕೋಳ ಗ್ರಾಮದವರಾದ ನರಸಮ್ಮಾ ಲಕ್ಷ್ಮಣ ಆವುಂಟಿರವರು ಸದ್ಯ ಪಟ್ಟಣದ ಚಂದಾಪೂರದ ನಿವಾಸಿಯಾದ ಅವರು, ಸದಾ ಹಲವಾರು ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿ ರಾಜಕೀಯ ಕ್ಷೇತ್ರದ ಜೊತೆಗೆ ಸಮಾಜ ಸೇವೆಯಲ್ಲಿ ತನ್ನನ್ನು ತಾನೂ ತೊಡಗಿಕೊಂಡು ಜನಪರ ಕೆಲಸ ಮಾಡುತ್ತಿದ್ದಾರೆ. ತಾಲ್ಲೂಕಿನ ಕನಕಪೂರ ಗ್ರಾಮ ಪಂಚಾಯತ್ ಸದಸ್ಯರಾಗಿದ್ದು, ಉಪಾ ದ್ಯಕ್ಷರಾಗಿ, ಅಧ್ಯಕ್ಷರಾಗಿ ಸೇವೆಸಲ್ಲಿಸು ತ್ತಿದ್ದು, ಧರ್ಮಸ್ಥಳ ಗ್ರಾಮೀಣಾಭಿ ವೃದ್ಧಿ ಸಂಸ್ಥೆಯ ಅಡಿಯಲ್ಲಿ ಸ್ವಸಹಾಯ ಸಂಘ ಗಳ ಒಕ್ಕೂಟದ ಅಧ್ಯಕ್ಷರಾಗಿ ಜಿಲ್ಲಾ ಜನ ಜಾಗೃತಿ ವೇದಿಕೆಯ ಉಪಾದ್ಯ ಕ್ಷರಾಗಿ ಸಕ್ರೀಯವಾಗಿ ಕೆಲಸ ಮಾಡಿತ್ತಿದ್ದು ಸಂಸ್ಥೆಯ ವತಿಯಿಂದ ಚಿಂಚೋಳಿಯಲ್ಲಿ ಜರುಗಿದ ಮದ್ಯವರ್ಜನ ಶಿಬಿರವನ್ನು ಪದಾಧಿಕಾರಿಗಳ ಎಲ್ಲೋರ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆ ಸಿಕೊಟ್ಟಿದ್ದಾರೆ.

ವಿಶೇಷವಾಗಿ ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆಯ ಆಡಿಯಲ್ಲಿರುವ ಸಾವಿರಾರು ಸ್ವಸಹಾಯ ಗುಂಪುಗಳ ಸ್ತ್ರೀ ಶಕ್ತಿ ಸಂಘಗಳ ಪ್ರತಿನಿಧಿಯಾಗಿ ತಾಲ್ಲೂಕಾ ಸ್ತ್ರೀ ಶಕ್ತಿ ಒಕ್ಕೊಟ ಅಧ್ಯಕ್ಷರಾಗಿ ತಾಲ್ಲೂಕಿನಾ ದ್ಯಂತ ಸಂಚರಿಸಿ ಮಹಿಳೆಯರ, ಸಂಘಗಳ ಅಭಿವೃದ್ದಿಗಾಗಿ ಶ್ರಮಿಸುತ್ತಿದ್ದು, ಹಲವಾರು ಸಂಘಗಳಿಗೆ ಸರಕಾರದ ವತಿಯಿಂದ ವಿವಿಧ ಸಹಾಯ ಧನ ಸೌಲಭ್ಯ ಕಲ್ಪಿಸಿ ಕೊಟ್ಟಿದ್ದಾರೆ, ಇವರ ಪ್ರಮಾಣಿಕ ಪ್ರಯತ್ನ ಸೇವೆ ಯನ್ನು ಪರಿಗಣಿಸಿ ರಾಜ್ಯ ಸರಕಾರವು 2023-24ನೇ ಸಾಲಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸ್ತ್ರೀ ಶಕ್ತಿ ಒಕ್ಕೂಟಗಳಿಗೆ ನೀಡುವ ಅತ್ಯುನ್ನತ ಪ್ರಶಸ್ತಿಯನ್ನು ಇಡಿ ರಾಜ್ಯದಲ್ಲಿಯೆ ಚಿಂಚೋಳಿ ತಾಲ್ಲೂಕಾ ಸ್ತ್ರೀ ಶಕ್ತಿ ಒಕ್ಕೂಟವು ಅತ್ಯುತ್ತಮ ಸ್ತ್ರೀ ಶಕ್ತಿ ಒಕ್ಕೂಟವೆಂದು ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

**ಸಮಾಜ ಸೇವೆಯಲ್ಲಿ ವಿಶೇಷ ಸೇವೆ**

**ಮಹಿಳಾ ಸಾಧಕಿ ಪ್ರಶಸ್ತಿ**

ಡಾ.ನರಸಮ್ಮ ಆವುಂಟಿರವರು ಹಲವಾರು ಪ್ರಶಸ್ತಿಯನ್ನು ಪಡೆದಿದ್ದಾರೆ, ಅತ್ಯುತ್ತಮ ಮಹಿಳಾ ಸಾಧಕಿ ಪ್ರಶಸ್ತಿ, ಮದರ ಥೆರೆಸಾ ಪ್ರಶಸ್ತಿ, ಸಾವಿತ್ರೀಬಾಯಿ ಫುಲೆ ಪ್ರಶಸ್ತಿ, ಸಮಾಜ ಸೇವಾ ರತ್ನ ಪ್ರಶಸ್ತಿ, ಮಾದ್ಯಮ ರತ್ನ ಪ್ರಶಸ್ತಿ, ತಾಲ್ಲೂಕಾ ಆಡಳಿತದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಲವಾರು ಪ್ರಶಸ್ತಿಗೆ ಭಾಜನರಾಗಿ ಜನಮನದಲ್ಲಿ ಜನಾನುರಾಗಿ ಯಾವುದೆ ಫಲಾಪೆಕ್ಷೆ ಇಲ್ಲದೆ ಸಲ್ಲಿಸುತ್ತಿರುವ ಸೇವೆಗೆ ಸಿಕ್ಕ ಈ ಗೌರವವಾಗಿದೆ ಎನ್ನಬಹುದು.



## ಮಿನಿ ನ್ಯೂಸ್

### ವಾಲ್ಮೀಕಿ ಜಾತ್ರೆ: ಪೋಸ್ಟರ್ ಬಿಡುಗಡೆ

• ಉದಯವಾಹಿನಿ, ಹಾನಗಲ್

ಹರಿಹರ ತಾಲ್ಲೂಕು ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠ ದಲ್ಲಿ ಫೆಬ್ರುವರಿ 8 ಮತ್ತು 9 ರಂದು ನಡೆಯುವ ಮಹರ್ಷಿ ವಾಲ್ಮೀಕಿ ಜಾತ್ರೆಯ ಕುರಿತು ಪಟ್ಟಣದಲ್ಲಿ ಪೂರ್ವಬಾವಿ ಸಭೆ ನಡೆಯಿತು. ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಾತ್ರೆಯ ಪೋಸ್ಟರ್ ಬಿಡುಗಡೆ ಮಾಡಿದರು. ಮಹಾರಥೋತ್ಸವ ಮತ್ತು ಜಾತ್ರೆಯ ಯಶಸ್ಸಿಗೆ ಸದ್ಭಕ್ತರು ಸಹಕಾರ ನೀಡಬೇಕು ಎಂದರು.

ಮಹರ್ಷಿ ವಾಲ್ಮೀಕಿ ನಾಯಕ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಪರಶುರಾಮ ಮುನಿಯಣ್ಣನವರ, ಉಪಾಧ್ಯಕ್ಷರಾದ ರಾಮಣ್ಣ ಮತ್ತೂರ, ರವಿ ಲಕ್ಷಾಪೂರ, ಪುಟ್ಟಪ್ಪ ನರೇಗಲ್, ಶಿವಾನಂದ ಕನ್ನಕ್ಕನವರ, ಕಾರ್ಯದರ್ಶಿ ಸತೀಶ ಅಂಕೋಲ, ಬಸಣ್ಣ ಡುಮ್ಮನವರ, ಪ್ರಮುಖರಾದ ಪ್ರಕಾಶ ಯಳೂರ, ಪ್ರಕಾಶ ನಂದಿಕೊಪ್ಪ, ಶಿವಣ್ಣ ಅರಳೇಶ್ವರ, ಶಿವಣ್ಣ ಮಾಸನಕಟ್ಟಿ, ಮಹೇಂದ್ರ ಬಿಳಗಲಿ, ಶಿವು ತಳವಾರ, ವಸಂತ ವಾಸನದ, ಸುಭಾಸ ಮಾವಕೊಪ್ಪ ಇದ್ದರು.

### ವಾಮಾಚಾರದಿಂದ ಭಯಬಿದ್ದ ಮಾರ್ಕಂಡೇಯ ಕಾಲೋನಿ ಜನ

• ಉದಯವಾಹಿನಿ, ಬಳ್ಳಾರಿ

ಅಮವಾಸ್ಯೆ ಆಗಿದ್ದರಿಂದ ನಗರದ ಮಾರ್ಕಂಡೇಯ ಕಾಲೋನಿಯಲ್ಲಿ ತಲೆಬುರುಡೆ, ಎಲುಬುಗಳನ್ನು ಇಟ್ಟು, ಕೂದಲು ಸುಟ್ಟು, ದೀಪ ಹಚ್ಚಿಟ್ಟು ಜನರನ್ನು ಭಯ ಬೀಳುವ ರೀತಿಯಲ್ಲಿ ತುಂಬಿದ ಓಣಿಯಲ್ಲಿ ವಾಮಾಚಾರ ಮಾಡಲಾಗಿದೆ. ವಾನಚಾರ ಮಾಡಿದ ಸ್ಥಳದಲ್ಲಿ ವಾಟರ್ ಟ್ಯಾಂಕ್ ಇರೋ ಹಿನ್ನಲೆ ಯಾರು ನೀರು ತೆಗೆದುಕೊಂಡು ಹೋಗ್ತಿಲ್ಲ, ಪಕ್ಕದಲ್ಲಿಯೇ ಅಂಗನವಾಡಿ ಇರೋ ಹಿನ್ನಲೆ ಮಕ್ಕಳನ್ನು ಅಂಗನವಾಡಿಗೆ ಸಹ ಕಳುಹಿಸುತ್ತಿಲ್ಲ. ಪದೇ ಪದೇ ಈ ಸ್ಥಳದಲ್ಲೇ ಹೀಗಾಗುತ್ತಿರೋ ಹಿನ್ನಲೆ ಮಹಿಳೆಯರು ಮಕ್ಕಳು ಭಯಭೀತರಾಗಿದ್ದಾರಂತೆ.

ಕೂಡಲೇ ಈ ಏರಿಯಾದಲ್ಲಿ ಸಿಸಿ ಕ್ಯಾಮರ ಅಳವಡಿಸಿ ಪೊಲೀಸ್ ಗಸ್ತು ಹೆಚ್ಚಿಸಬೇಕೆಂದು ಸ್ಥಳೀಯರ ಅಗ್ರಹಿಸಿದ್ದಾರೆ. ಸ್ಥಳಕ್ಕೆ ಬ್ರೂಸ್ ಪೇಟೆ ಪೊಲೀಸರ ಬಂದು ವಾಮಾಚಾರದ ವಸ್ತುಗಳ ತೆರವುಗೊಳಿಸಿದರು.

### ಕುವೆಂಪು ಕರುನಾಡು ಕಂಡ ವಿಶ್ವಚೇತನ

• ಉದಯವಾಹಿನಿ, ಅಫಜಲಪುರ

ಕುವೆಂಪು ಕರುನಾಡು ಕಂಡ ವಿಶ್ವಚೇತನವಾಗಿದ್ದಾರೆ ಎಂದು ಅಫ್ಜಲಪುರ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಡಿ.ಎಂ ನದಾಫ್ ತಿಳಸಿದರು. ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ಕನ್ನಡ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಶ್ರಯದಲ್ಲಿ ನಡೆದ ವಿಶ್ವಮಾನವ ದಿನದಂದು ಅವರು ಮಾತನಾಡಿದರು.

ಕುವೆಂಪು ಭಾರತ ಕಂಡ ವಿಶ್ವ ಮಾನವರಲ್ಲಿಯೇ ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಅವರ ಸಾಹಿತ್ಯ ಕೇವಲ ಲಲಿತ ಕಲೆ ಮತ್ತು ಭಾಷಾಜ್ಞಾನ ಮಾತ್ರ ಆಗಿರಲಿಲ್ಲ. 20ನೇ ಶತಮಾನ ಕಂಡ ಈ ಅಪರೂಪದ ದಾರ್ಶನಿಕ, ಜೀವನ ಅನುಭವದ ಸಮಗ್ರ ಆಯಾಮಗಳನ್ನು ಕಲಾತ್ಮಕವಾಗಿ ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಅವರ ಕನ್ನಡಪ್ರಜ್ಞೆ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ ಎಂದು ಹಾಡಿದರೆ ಓ ನನ್ನ ಚೇತನ ಆಗು ನೀ ಅನಿಕೇತನ ಎಂದು ಅವರ ವಿಶ್ವಮಾನವ ಪ್ರಜ್ಞೆ ಜನಮನದಲ್ಲಿ ಮೂಡಿ ನಿಂತಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಪ್ರಭಾರಿ ಮುಖ್ಯ ಉಪಾಧ್ಯಾಯ ಚಂದ್ರಕಾಂತ ಗುಂಡದ ನಾರಾಯಣ ನೀಲಗಾರ್, ಮಳೆಂದ್ರ, ಸುರೇಶ್ ಗಣೆಹಾರ್, ಶ್ರೀಕಾಂತ ಪಾಟೀಲ್, ಗಂಗಾಧರ ಕಾಂಬಳೆ, ಮಲ್ಲಮ್ಮ, ಅರ್ಚನಾ ಕಟ್ಟಿ, ಕೀರ್ತನಾ ಸರಾಫ್, ಶರಣಗೌಡ ಪಾಟೀಲ್ ಅನಿಲ್ ಹುಳ್ಳಿ ಮತ್ತು ಇತರರು ಉಪಸ್ಥಿತರಿದ್ದರು.

### ಮನ್ ಕೀ-ಬಾತ್ ಕಾರ್ಯಕ್ರಮ ವೀಕ್ಷಿಸಿದ ಮಾಜಿ ಸಂಸದ ಡಾ. ಜಿ.ಎಂ. ಸಿದ್ದೇಶ್ವರ

• ಉದಯವಾಹಿನಿ, ದಾವಣಗೆರೆ

ದೇಶದ ಪ್ರಧಾನಿಮಂತ್ರಿಗಳಾದ ನರೇಂದ್ರ ಮೋದಿಜೀಯವರ ಮನ್ ಕೀ ಬಾತ್ ಕಾರ್ಯಕ್ರಮವನ್ನು ದಾವಣಗೆರೆ ನಗರದ ವಾರ್ಡ್ ನಂಬರ್ 23ರ ಬೂತ್ 50ರಲ್ಲಿ ಮಾಜಿ ಸಂಸದರು ಹಾಗೂ ಮಾಜಿ ಕೇಂದ್ರ ಸಚಿವರಾದ ಡಾ. ಜಿ.ಎಂ. ಸಿದ್ದೇಶ್ವರ್ ವೀಕ್ಷಿಸಿ, ಪ್ರಧಾನಿಯವರ ಇಂದಿನ ಮಾತುಗಳು ಪ್ರಗತಿ ಮತ್ತು ಏಕತೆಯ ಕುರಿತಾಗಿ ದೇಶಕ್ಕೆ ಮಾರ್ಗದರ್ಶಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಸಂಸದರಾದ ಜಗದೀಶ್ ಶೆಟ್ಟರ್, ಶಾಸಕರಾದ ಮಹೇಶ್ ತೆಂಗಿನಕಾಯಿ, ಹರಿಹರದ ಶಾಸಕರಾದ ಬಿ.ಪಿ. ಹರೀಶ್, ಬಿ.ಜೆ.ಪಿ. ಮಾಜಿ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಮುಖಂಡರಾದ ಶಿವನಹಳ್ಳಿ ರಮೇಶ್, ಬಿ.ಜೆ.ಪಿ. ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು, ಮುಖಂಡರುಗಳು ಹಾಗೂ ಇನ್ನೂ ಆನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

### ತೆಂಗಿನ ಕಾಯಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು



ಉದಯವಾಹಿನಿ ಚಿತ್ರ

• ಉದಯವಾಹಿನಿ, ವಾಡಿ

ತೆಂಗಿನ ಕಾಯಿಗೂ ಇದೀಗ ಬೇಡಿಕೆ ಹೆಚ್ಚಾಗಿದೆ. 20-25 ರೂಪಾಯಿಗೆ ಒಂದರಂತೆ ಸಿಗುತ್ತಿದ್ದ ತೆಂಗಿನ ಕಾಯಿ ಈಗ 30 ರೂಪಾಯಿಗೆ ಒಂದರಂತೆ ಮಾರಾಟವಾಗುತ್ತಿದೆ. ಎಳ್ಳು ಅಮಾವಾಸ್ಯೆ ಪ್ರಯುಕ್ತ ಜನ ದೇವರಿಗೆ ಕಾಯಿ ಒಡೆಯಲು ಮತ್ತು ಹೊಲದಲ್ಲಿ ಚರಗಾ ಹೊಡೆದು ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸಲು ತೆಂಗಿನ ಕಾಯಿ ಬೇಕೆ ಬೇಕು ಆದರೆ ದಿಢೀರನೆ ತೆಂಗಿನ ಕಾಯಿ ಬೆಲೆ ಏರಿಕೆಯಾಗಿದ್ದರಿಂದ ರೈತಾಪಿ ಜನರು ಕಂಗಾಲಾದರು. ಚೌಕಾಸಿ ಮಾಡಿ 35-30 ರೂಪಾಯಿಗೆ ಒಂದರಂತೆ ತೆಂಗಿನ ಕಾಯಿ ಕೊಂಡು ಹೊಲಕ್ಕೆ ಚರಗಾ ಹೊಡೆಯಲು ಹೋಗಬೇಕಾಯಿತು. ಸಣ್ಣ ಆಕಾರದ ತೆಂಗಿನ ಕಾಯಿಯನ್ನು 35-30 ರೂಪಾಯಿಗೆ ಒಂದರಂತೆ ಮಾರಾಟ ಮಾಡುತ್ತಿರುವುದಕ್ಕೆ ಜನ ಬೇಸರ ವ್ಯಕ್ತಪಡಿಸಿದರು. ತೆಂಗಿನ ಕಾಯಿಗೂ ಇದೀಗ ಡಿಮ್ಯಾಂಡ್ ಬಂದಂತಾಯಿತು ಎಂದು ಜನ ಮಾತಾಡಿಕೊಳ್ಳುತ್ತಿದ್ದದ್ದು ಕಂಡು ಬಂತು. ಒಟ್ಟಾರೆ ತೆಂಗಿನ ಕಾಯಿಗೆ ಇದೀಗ ಬೇಡಿಕೆ ಹೆಚ್ಚಾದಂತೆ ಆಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳ ಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು.

**ವೃಷಭ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ಮಿಥುನ** ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ. ನಿಮ್ಮಲ್ಲಿ ಕೆಲವು ಆಭರಣ ಅಥವಾ ಗೃಹಬಳಕೆಯ ಸಾಧನಗಳನ್ನು ಖರೀದಿಸುವ ಸಾಧ್ಯತೆಗಳಿವೆ.

**ಕರ್ಕಾಟಕ** ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ. ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ಸಿಂಹ** ನಿಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಅಂಗವೈಕಲ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಕೇವಲ ಸಕಾರಾತ್ಮಕ ಆಲೋಚನೆಗಳ ಜೊತೆ ಮಾತ್ರ ನೀವು ಈ ಸಮಸ್ಯೆಯ ವಿರುದ್ಧ ಹೋರಾಡಬೇಕು.

**ಕನ್ಯಾ** ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ. ನಿಮಗೆ ಕೆಟ್ಟ ಹವ್ಯಾಸಗಳ ಪ್ರಭಾವ ಬೀರಬಹುದಾದ ಕೆಟ್ಟ ಜನರಿಂದ ದೂರವಿರಿ.

**ತುಲಾ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

**ವೃಶ್ಚಿಕ** ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ವ್ಯಾಪರದಲ್ಲಿ ಪ್ರಯೋಜನ ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

**ಧನಸ್ಸು** ನೀವು ನಿಮ್ಮ ಮಕ್ಕಳ ಮೇಲೆ ಹೆಮ್ಮೆಯನ್ನು ಅನುಭವಿಸುವಿರಿ. ಇಂದು ನೀವು ಹಚ್ಚು ಪ್ರಯತ್ನ ಮಾಡಬೇಕಾಗಿ ಬಂದರೂ ಕೂಡ ಮಕ್ಕಳ ಸಂಗದಲ್ಲಿ ನಿಮ್ಮ ಬಿಡುವಿನ ಸಮಯ ಕಳೆಯಲು ಪ್ರಯತ್ನಿಸಬೇಕು.

**ಮಕರ** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ.

**ಕುಂಭ** ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

**ಮೀನ** ಸಣ್ಣ ಸಣ್ಣ ವಿಷಯಗಳು ನಿಮ್ಮ ಮನಸ್ಸು ಕೆಡಿಸಲು ಬಿಡಬೇಡಿ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

## ತಾತ್ಕಾಲಿಕ ಸಗಟು ಮೀನು ಮಾರುಕಟ್ಟೆ ಉದ್ಘಾಟನೆ

• ಉದಯವಾಹಿನಿ, ಹುಬ್ಬಳ್ಳಿ

ಮೀನು ಮಾರಾಟ ಸಂಘದಿಂದ ಭೂಮಿ ಗುರುತಿಸಿಕೊಟ್ಟರೆ, ಸುಸಜ್ಜಿತ ಸಗಟು ಮೀನು ಮಾರುಕಟ್ಟೆ ನಿರ್ಮಾಣ ಮಾಡಲಾಗುವುದು ಎಂದು ಸ್ಲಮ್ ಬೋರ್ಡ್ ಅಧ್ಯಕ್ಷರು, ಹು-ಧಾ ಪೂರ್ವ ಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ವಾಗ್ದಾನ ಮಾಡಿದರು. ಅವರು ಇಲ್ಲಿನ ಮಂಟೂರು ರಸ್ತೆಯ ಬಳಿ ಮೀನು ಮಾರಾಟ ಸಂಘದಿಂದ ಸ್ಥಾಪಿಸಲಾದ ತಾತ್ಕಾಲಿಕ ಸಗಟು ಮೀನು ಮಾರುಕಟ್ಟೆಯನ್ನು ಉದ್ಘಾಟಿಸಿ ಮಾತನಾಡಿದರು. ಹುಬ್ಬಳ್ಳಿ ನಗರ ಅತೀವವಾಗಿ ಬೆಳೆಯುತ್ತಿದೆ. ಇಲ್ಲಿನ ಗಣೇಶ ಪೇಟೆಯಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆ ನಿರ್ಮಾಣ ಮಾಡಿದ್ದರೂ ಸಗಟು ವ್ಯಾಪಾರಕ್ಕೆ ಇಕ್ಕಟ್ಟಾಗಿದೆ. ಹೀಗಾಗಿ ತಮ್ಮ ಸಂಘದಿಂದ ಜಾಗ ಒದಗಿಸಿದರೆ, ಸುಸಜ್ಜಿತ ಹೈಟೆಕ್ ಮೀನು ಮಾರುಕಟ್ಟೆ ನಿರ್ಮಾಣ ಮಾಡುತ್ತೇನೆ ಎಂದು ಹೇಳಿದರು.

**ಶುಚಿತ್ವ ಕಾಪಾಡಿ :** ಮೀನು ಮಾರುಕಟ್ಟೆ ಸ್ಥಾಪನೆಗೆ ಈ ಭಾಗದ ಜನರು ಸಾಕಷ್ಟು ವಿರೋಧವಿತ್ತು. ಆದರೆ, ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಈ ಮಾರುಕಟ್ಟೆಗೆ ಪರವಾನಿಗೆ ಕೊಡಸಲಾಗಿದೆ. ವ್ಯಾಪಾರಸ್ಥರು ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಆಗದಂತೆ ವ್ಯಾಪಾರ ನಡೆಸಬೇಕು. ಮುಖ್ಯವಾಗಿ ಶುಚಿತ್ವ ಕಾಪಾಡಬೇಕು. ತಮ್ಮ ವಾಹನಗಳನ್ನು ಯಾವುದೇ ಕಾರಣಕ್ಕೂ ರಸ್ತೆಗಳಲ್ಲಿ ನಿಲ್ಲಿಸಬಾರದು. ಒಂದುವೇಳೆ ರಸ್ತೆಯಲ್ಲಿ ವಾಹನಗಳು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು. ಪಾಲಿಕೆ ಸದಸ್ಯರಾದ ಇಲಿಯಾಸ್ ಮನಿಯಾರ್, ವಾರ್ಡ್ ಕಾಂಗ್ರೆಸ್ ಅಧ್ಯಕ್ಷರಾದ ಶರೀಫ್ ಅದ್ವಾನಿ, ಮೀನು ಮಾರಾಟ ಸಂಘದ ಅಧ್ಯಕ್ಷರಾದ ದಾದಾ ಹೈಯಾತ ಖೈರಾತಿ, ಮುಖಂಡರಾದ ನಾಸಿರ್ ಅಸುಂಡಿ, ಮೊಹಮ್ಮದ ಯೂಸೂಫ್ ಧಾರವಾಡ, ಬಾಬಾಜಾನ್ ಚೌಧರಿ, ಜಾಫರ್ ಮಂಚಿನಕೊಪ್ಪ ಇದ್ದರು.

# ಶಾಲೆಗಳಲ್ಲಿ ಈಜು ಕಲಿಕೆ ಕಡ್ಡಾಯವಾಗಲಿ: ಈಶ್ವರ ಮಲ್ಪೆ

## ಶಾಲೆಯಲ್ಲಿ ಎಲ್ಲಾ ರೀತಿಯ ಪಾಠಗಳನ್ನೂ ಕಲಿಸಲಾಗುತ್ತದೆ, ಆದರೆ ಜೀವ ರಕ್ಷಣೆಗೆ ಅಗತ್ಯವಾದ ಈಜನ್ನು ಕಲಿಸುತ್ತಿಲ್ಲ

• ಉದಯವಾಹಿನಿ, ಮಂಗಳೂರ

ಉಳ್ಳಾಲದ ರೆಸಾರ್ಟ್ ಪುಟ್ಟ ಈಜು ಕೊಳದಲ್ಲಿ ಈಚೆಗೆ ಮೂವರು ಯುವತಿಯರು ಈಜು ಬಾರದೇ ಮೃತ ಪಟ್ಟರು. ಅಲ್ಲಲ್ಲಿ ಮರುಕಳಿಸುವ ಇಂತಹ ಘಟನೆಗಳನ್ನು ತಪ್ಪಿಸಲು ಪ್ರತಿ ಶಾಲೆಯಲ್ಲೂ ಈಜುಕೊಳ ಹೊಂದಬೇಕು. ಶಾಲಾ ಹಂತದಲ್ಲಿ ಈಜು ಕಲಿಕೆಯನ್ನು ಕಡ್ಡಾಯಗೊಳಿಸಬೇಕು' ಎಂದು ಮುಳುಗು ತಜ್ಞ ಈಶ್ವರ ಮಲ್ಪೆ ಹೇಳಿದರು. ಇಲ್ಲಿನ ಮೂಲತ್ಯ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡುವ 10ನೇ ವರ್ಷದ 'ಮೂಲಕ್ಷ್ಯ ವಿಶ್ವಪ್ರಶಸ್ತಿ – 2024' ಸ್ವೀಕರಿಸಿ ಅವರು ಮಾತಮಾಡಿದರು.

ನನ್ನ ಮೂರು ಮಕ್ಕಳೂ ಭಿನ್ನ ಸಾಮರ್ಥ್ಯದವರು. ಹಿರಿಯ ಮಗನನ್ನು ಈಗಾಗಲೇ ಕಳೆದುಕೊಂಡಿದ್ದೇನೆ. ಎರಡನೇ ಮಗ ಹಾಗೂ ಮಗಳು ನಡೆಯುವ ಸ್ಥಿತಿಯಲ್ಲಿರಲಿಲ್ಲ. ಅವರಿಗೆ ಕೇರಳದ ತಜ್ಞವೈದ್ಯರಿಂದ ಚಿಕಿತ್ಸೆ ಕೊಡಿಸಿದ್ದೆ. ಜನರ ಪ್ರೀತಿ ಮತ್ತು ಆಶೀರ್ವಾದ ಫಲವಾಗಿ ಈಚೆಗೆ ಅವರಿಬ್ಬರೂ ನಡೆಯುವಷ್ಟು ಸುಧಾರಿಸಿದ್ದಾರೆ. ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ವೈಯಕ್ತಿಕ ಬದುಕಿನ ಬವಣೆಗಳನ್ನು ಮರೆಯಲು ಪ್ರಯತ್ನಿಸುತ್ತೇನೆ' ಎನ್ನುವಾಗಿ ಕಣ್ಣಾಲಿಗಳು ತುಂಬಿದ್ದವು. ಈಶ್ವರ್ ಮಲ್ಪೆ ಅವರಿಗೆ ಪ್ರಶಸ್ತಿಯ ಜೊತೆಗೆ 1 ಲಕ್ಷ ರೂಪಾಯಿ ನಗದು ಪ್ರದಾನ ಮಾಡಲಾಯಿತು.

**ಮೂಲಕ್ಷ್ಯ ವಿಶ್ವಪ್ರಶಸ್ತಿ - 2024**

ಮಂಗಳೂರು ಮೀನುಗಾರಿಕೆ ಕಾಲೇಜು ಡೀನ್ ಎಚ್.ಆಂಜನೇಯಪ್ಪ, ಸಾಮಾಜಿಕ ಕಾರ್ಯಕರ್ತ ರವಿ ಕಟಪಾಡಿ, ಡೈಜಿವರ್ಲ್ಡ್‌ನ ವಾಲ್ಕರ್ ನಂದಳಿಕೆ, ಉಚ್ಚಿಲ ಮೊಗವೀರ ಮಹಾಸಭಾ ಉಪಾಧ್ಯಕ್ಷ ಮೋಹನ ಬೆಂಗ್ರೆ, ಟ್ರಸ್ಟಿಗಳಾದ ಕಲ್ಪನಾ ಪಿ.ಕೋಟ್ಯಾನ್, ಶೈನಿ ಲಕ್ಷ್ಮೀಶ ಪಿ.ಕೋಟ್ಯಾನ್ ಭಾಗವಹಿಸಿದ್ದರು. ಟ್ರನ ಸಂಸ್ಥಾಪಕ ಪ್ರಕಾಶ್ ಮೂಲತ್ನ ಪ್ರಸ್ತಾವಿಕವಾಗಿ ಮಾತನಾಡಿದರು.



☛ ಉದಯವಾಹಿನಿ ಚಿತ್ರ

ತೀರ್ಪುಗಾರರಲ್ಲಿ ಒಬ್ಬರಾದ ಪ್ರೊ.ರಾಜಮೋಹನ್ ರಾವ್ ಅಭಿನಂದನಾ ಪತ್ರ ವಾಚಿಸಿದರು. ಶಿರೂರಿನಲ್ಲಿ ಜೀವನ್ಮರಣ ಸ್ಥಿತಿ ಎದುರಿಸಿದ್ದೆ' ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಕೆಲ ತಿಂಗಳ ಹಿಂದೆ ನಡೆದ ಭೂಕುಸಿತದಿಂದ ನೀರು ಪಾಲಾದವರ ಮೃತದೇಹಗಳನ್ನು ಹುಡುಕುವ ವೇಳೆ ಜೀವನ್ಮರಣ ಸ್ಥಿತಿ ಎದುರಿಸಿದ್ದನ್ನು ಈಶ್ವರ್ ಮಲ್ಪೆ ಮೆಲುಕು ಹಾಕಿದರು. 'ನದಿಯ ಆಳದಲ್ಲಿ ನೀರು ಹರಿವಿನ ರಭಸಕ್ಕೆ ಕೊಚ್ಚಿ ಹೋಗುತ್ತಿದ್ದೆ. ಧರಿಸಿದ್ದ ಜೀವರಕ್ಷಕ ಕವಚ ತೂತಾಗಿ ಗಾಳಿ ಖಾಲಿಯಾಗಿತ್ತು ನೀರಿನಾಳದ ಕತ್ತಲಿನಿಂದ ಮೇಲೆ ಬರಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಿರಲಿಲ್ಲ ಹೆಂಡತಿ ಮಕ್ಕಳ ಚಿತ್ರ ಕಣ್ಮುಂದೆ ಬಂದಿತ್ತು. ಧರಿಸಿದ್ದ 15 ಕೆ.ಜಿ. ತೂಕದ ಬೆಲ್ಟ್ ಕಿತ್ತೆಸೆದೆ. ಜನರ ಆಶೀರ್ವಾದದಿಂದ ಮೇಲೆ ಬಂದೆ ಎಂದು ವಿವರಿಸಿದರು.

**ಈಜು ಜೀವ ರಕ್ಷಣೆಗೆ ಅಗತ್ಯ**

ಶಾಲೆಯಲ್ಲಿ ಎಲ್ಲಾ ರೀತಿಯ ಪಾಠಗಳನ್ನೂ ಕಲಿಸಲಾಗುತ್ತದೆ. ಆದರೆ ಜೀವ ರಕ್ಷಣೆಗೆ ಅಗತ್ಯವಾದ ಈಜನ್ನು ಕಲಿಸುತ್ತಿಲ್ಲ. ಈಜು ಗೊತ್ತಿದ್ದರೆ, ನೀರಿನಲ್ಲಿ ಮುಳುಗುವ ಸ್ಥಿತಿಯಲ್ಲೂ ಜೀವ ಉಳಿಸಿಕೊಳ್ಳಬಹುದು. ಅಷ್ಟೇ ಅಲ್ಲ. ಇದನ್ನು ಕ್ರೀಡೆಯಾಗಿ ಅಭ್ಯಾಸ ಮಾಡಿದರೆ ಒಲಿಂಪಿಕ್ಸ್‌ನಂತಹ ಕೂಟಗಳಲ್ಲಿ ಪದಕವನ್ನೂ ಗೆಲ್ಲಬಹುದು ಎಂದರು. ಜನರಿಗೆ ಕಷ್ಟಗಳು ಎದುರಾದಾಗ ದೇವರು ಸ್ವತಃ ಪ್ರತ್ಯಕ್ಷನಾಗುವುದಿಲ್ಲ. ಅವರಿಗೆ ಸಹಾಯ ಮಾಡುವ ಅವಕಾಶವನ್ನು ಮನುಷ್ಯರಾದ ನಮಗೆ ಕಲ್ಪಿಸುತ್ತಾನೆ. ಸಹಾಯಕ್ಕೆ ಧಾವಿಸುವ ಮನುಷ್ಯ ದೇವರ ಪ್ರತಿರೂಪದಂತೆ ಇನ್ನೊಬ್ಬರಿಗೆ ಸಹಾಯ ಮಾಡುವ ಅವಕಾಶವನ್ನು ಯಾವತ್ತೂ ಕಳೆದುಕೊಳ್ಳಬಾರದು' ಎಂದರು.

ಸೇನೆಗೆ ಸೇರಬೇಕೆಂಬ ಬಾಲ್ಯದ ಕನಸು ಈಡೇರಲಿಲ್ಲ. ಮೀನುಗಾರನಾಗಿ ಹತ್ತು ವರ್ಷ ದುಡಿದ ಬಳಿಕ ಮಲ್ಪೆಯ ಕಡಲ ಕಿನಾರೆಯಲ್ಲಿ ನೀರುಪಾಲಾಗುವವರನ್ನು ರಕ್ಷಿಸುವ ಕಾಯಕದಲ್ಲಿ ತೊಡಗಿದೆ. ಇದುವರೆಗೆ 80ಕ್ಕೂ ಹೆಚ್ಚು ಮಂದಿಯ ಜೀವಗಳನ್ನು ಉಳಿಸಿದ ತೃಪ್ತಿ ಇದೆ. ನೀರಿನಾಳದಿಂದ ಸಾವಿರಕ್ಕೂ ಅಧಿಕ ಮೃತದೇಹಗಳನ್ನು ಮೇಲೆತ್ತಿದ್ದೇನೆ. ಅನಾಥ ಶವಗಳ ವಾರಸುದಾರರು ಪತ್ತೆಯಾಗಿ, ಅಂತ್ಯಕ್ರಿಯೆ ಗೌರವಯುತವಾಗಿ ನಡೆದರೆ ನಮಗೂ ಸಮಾಧಾನ' ಎಂದರು.

## ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಮುದ್ದೇಬಿಹಾಳ

ಜಿಲ್ಲಾ ಮಾದಿಗ ನೌಕರರ ಕ್ಷಮಾಭಿವೃದ್ಧಿ ಸಂಘ ತಾಲ್ಲೂಕ ಘಟಕ ಮುದ್ದೇಬಿಹಾಳ ವತಿಯಿಂದ ಸನ್ ಯಾರ್ 2023/24 ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಅತುನ್ನತ ಶ್ರೇಣಿಯಲ್ಲಿ ಉತ್ತೀರ್ಣನಾದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭವನ್ನು ಅಂಬೇಡ್ಕರ್ ಭವನದಲ್ಲಿ ಜರುಗಿತು.


ಈ ಸಂದರ್ಭದಲ್ಲಿ ಮಾದಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕ ಅಧ್ಯಕ್ಷ ಎಂ ವೈ ಕಳ್ಳಿಮನಿ ಉಪಾಧ್ಯಕ್ಷ ಎನ್ ಆರ್ ದೊಡ್ಡಮನಿ ಶಿವರಾಜ್ ಕೆಳಗಿನಮನಿ. ಎಚ್ ಡಿ ಕೆಳಗಿನಮನಿ ಪ್ರಧಾನ ಕಾರ್ಯದರ್ಶಿ ಹಾಗೂ ಸಿತಿಮ ವಜ್ಜಲ್ ಶ್ರೀಶೈಲ್ ದೊಡಮನಿ ಎಂ ಎಸ್ ವನಹಳ್ಳಿ ಅರ್ಜುನ್ ಗಂಗಾಧರ್ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ ಕುರಿತು ಇಂದಿನ ಮಕ್ಕಳು ಮುಂದಿನ ಭವಿಷ್ಯದ ಕನ್ನಡಿ ಪ್ರತಿಯೊಬ್ಬರು ಶಿಕ್ಷಣ ಪಡೆದುಕೊಳ್ಳಬೇಕು ಇವತ್ತಿನ ದಿನದಲ್ಲಿ ಶಿಕ್ಷಣ ಬಹು ಮುಖ್ಯವಾಗಿದೆ ನಿಮ್ಮ ಸಾಧನೆಯಿಂದ ಹೆತ್ತ ತಂದೆ ತಾಯಿ ಹೆಸರು ತರಬೇಕು. ದುಚ್ಚಟ ವ್ಯಸನಗಳಿಂದ ದೂರ ಇರಬೇಕು. ಎಂದು ಮಕ್ಕಳಿಗೆ ಕಿವಿ ಮಾತು ಹೇಳಿದರು -ಎಂ ಎಸ್ ಕವಡಿಮಟ್ಟಿ, ಮುಖ್ಯೋಪಾಧ್ಯಾಯರು ಹಾಗೂ ಗೌರವಾಧ್ಯಕ್ಷರು ಜಿ. ಮಾ.ನೌ. ಕ್ಷೇ. ಸಂಘ ತಾಲ್ಲೂಕ ಘಟಕ ಮುದ್ದೇಬಿಹಾಳ

• ಉದಯವಾಹಿನಿ, ಶಹಾಪುರ

## ತೊಗರಿ ಬೆಲೆ ಕುಸಿತ: ರೈತರು ಕಂಗಾಲು

ಹವಾಮಾನ ವೈಪರೀತ್ಯ, ನೆಟೆ ರೋಗ, ಇಳುವರಿ ಕುಸಿತ ನಡುವೆ ಈಗ ರೈತರಿಗೆ ಮತ್ತೊಂದು ಅಘಾತವನ್ನು ಉಂಟು ಮಾಡಿರುವುದು ಬೆಲೆ ಕುಸಿತದಿಂದ ಕಂಗಾಲು ಆಗಿದ್ದಾರೆ. ಸರ್ಕಾರ ಮಧ್ಯ ಪ್ರವೇಶಿಸಿ ರೈತರ ನೆರವಿಗೆ ಆಗಮಿಸಬೇಕು ಎಂದು ಸಂಕಷ್ಟ ಎದುರಿಸುತ್ತಿರುವ ತೊಗರಿ ಬೆಳೆಗಾರರು ಆಗ್ರಹಿಸಿದ್ದಾರೆ. ತೊಗರಿ ಸದ್ಯ ರಾಶಿಯ ಹಂತಕ್ಕೆ ಬರುವುದರ ಜತೆಗೆ ಕೆಲ ಪ್ರದೇಶದಲ್ಲಿ ಕಟಾವಿನ ಕಾರ್ಯ ಭರದಿಂದ ಸಾಗಿದೆ. ಕಳೆದ ಒಂದು ವಾರದಲ್ಲಿ ಉತ್ತಮ ಬೆಲೆ ಇತ್ತು. ಈಗ ಏಕಾಏಕಿ ಕುಸಿತವಾಗಿ ಪ್ರತಿ ಕ್ವಿಂಟಲ್‌ಗೆ 7,500 ಆಸು ಪಾಸಿನಲ್ಲಿ ಇದೆ. ವಿಚಿತ್ರವೆಂದರೆ ಸರ್ಕಾರವು ತೊಗರಿಗೆ ಬೆಂಬಲ ಬೆಲೆ 7,500 ನಿಗದಿಗೊಳಿಸಿದೆ. ಇದು ಯಾತಕ್ಕೂ ಸಾಕಾಗುವುದಿಲ್ಲ ಸರ್ಕಾರ ಇನ್ನೂ ಹೆಚ್ಚುವರಿಯಾಗಿ 2000 ನಿಗದಿ ಮಾಡಿ ಪ್ರತಿ ಕ್ವಿಂಟಲ್‌ಗೆ ಸುಮಾರು 10 ಸಾವಿರ ನೀಡಬೇಕು ಎಂದು ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಭೂಮಿ ಉಳಿಸಿ ಹೋರಾಟ ಸಮಿತಿ ಸಂಚಾಲಕ ಅಶೋಕರಾವ ಮಲ್ಲಾಬಾದಿ ಮನವಿ ಮಾಡಿದ್ದಾರೆ.



☛ ಉದಯವಾಹಿನಿ ಚಿತ್ರ

ತೊಗರಿ ಬೆಳೆಗೆ ಪ್ರಸಕ್ತ ವರ್ಷ ಆರಂಭದಲ್ಲಿ ವಿಘ್ನ ಉಂಟು ಮಾಡಿತು. ನಂತರ ಮಳೆಯ ಏರುಪೇರು, ಅಕಾಲಿಕವಾಗಿ ಸುರಿದ ಮಳೆ, ಹವಮಾನದಲ್ಲಿ ಬದಲಾವಣೆಯಿಂದ ಹೆಚ್ಚಿನ ರೋಗ ಬಾಧೆಯನ್ನು ಕಾಣಿಸಿಕೊಂಡಿತು. ಅಲ್ಲದೆ ನೆಟ್ ರೋಗ ಮಗ್ನಲು ಮುಳ್ಳಿನಂತೆ ಕಾಡಿತು. ಇದರಿಂದ ಇಳುವರಿ ಗಣನೀಯವಾಗಿ ಕುಸಿತವಾಗಲಿದೆ. ಕೆಲ ಜಮೀನಿನಲ್ಲಿ ಮಾಡಿದ ರಾಶಿಯಲ್ಲಿ ಎಕರೆಗೆ ಕೇವಲ 3-4 ಕ್ವಿಂಟಲ್ ಮಾತ್ರ ಇಳುವರಿ ಬರುತ್ತಲಿದೆ. ನಮ್ಮ ಶ್ರಮ ಹೋಗಲಿ ಕನಿಷ್ಠ ನಾವು ವೆಚ್ಚ ಮಾಡಿದ ಹಣವಾದರು ವಾಪಸ್ಸು ಬಂದರೆ ಸಾಕು ಎನ್ನುತ್ತಾರೆ ರೈತ ಶಿವಪ್ಪ.

**ದಿಕ್ಕಿಲ್ಲದ ತೊಗರಿ ಮಂಡಳಿ**

ಕಲ್ಯಾಣ ಕರ್ನಾಟಕದ ರೈತರ ಅನುಕೂಲಕ್ಕಾಗಿ ಸರ್ಕಾರ ತೊಗರಿ ಮಂಡಳಿಯನ್ನು ಸ್ಥಾಪಿಸಿದೆ. ಕಾಂಗ್ರೆಸ್ ಸರ್ಕಾರ ರಚನೆಯಾಗಿ ಎರಡು ವರ್ಷ ಆರಂಭಗೊಂಡರೂ ತೊಗರಿ ಮಂಡಳಿಗೆ ಅಧ್ಯಕ್ಷರನ್ನು ನೇಮಿಸಿಲ್ಲ. ತೊಗರಿ ಮಂಡಳಿಗೂ ದಿಕ್ಕಿಲ್ಲದಂತೆ ಆಗಿದೆ.

## ಕನ್ನಡ ಸಾಹಿತ್ಯ ಲೋಕಕ್ಕೆ ಕುವೆಂಪು ಅವರ ಕೊಡುಗೆ ಅಪಾರ: ತೆಲಸಂಗ

• ಉದಯವಾಹಿನಿ, ಅಥಣಿ

ರಾಷ್ಟ್ರಕವಿ ಕುವೆಂಪು ಅವರು ಕನ್ನಡ ನಾಡಿನ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಕನ್ನಡ ನಾಡಿಗೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟಿರುವ ಕೀರ್ತಿ ಇವರಿಗೆ ಸಲ್ಲುತ್ತದೆ.

ಅವರು ನೀಡಿದ ವಿಶ್ವಮಾನವ ಸಂದೇಶವನ್ನು ಪ್ರತಿಯೊಬ್ಬರೂ ಪಾಲಿಸುವುದು ಇಂದಿನ ಅಗತ್ಯವಾಗಿದೆ ಎಂದು ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಾಸಾಹೇಬ ತೆಲಸಂಗ ಹೇಳಿದರು.

ಅವರು ಪಟ್ಟಣದಲ್ಲಿ ಎಚ್ ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಾಲಯದಲ್ಲಿ ರಾಷ್ಟ್ರಕವಿ ಕುವೆಂಪು ಅವರ 120 ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪೂಜಿ ಸಲ್ಲಿಸಿ ಮಾತನಾಡಿದರು. ಮನುಜಮತ ವಿಶ್ವಪಥ ಎಂಬ ಸಂದೇಶವನ್ನು ತಮ್ಮ ಸಾಹಿತ್ಯದ ಮೂಲಕ ನೀಡಿರುವ ಕುವೆಂಪು ಅವರು ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ರಚಿಸಿರುವ ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ ನಾಡಗೀತೆಯಾದರೆ ಉಳುವ ಯೋಗಿಯ ನೋಡಲ್ಲಿ ಎಂಬ ರೈತ ಗೀತೆ ಎಂದಿಗೂ ಮರೆಯಲು ಸಾಧ್ಯವಿಲ್ಲ. ನಮ್ಮ ಕರ್ನಾಟಕ ರಕ್ಷಣಾ ವೇದಿಕೆಯ ಲಾಂಛನದ ಜೊತೆಗೆ ಸಮಾನ ಸ್ಥಾನದಲ್ಲಿ ಅವರ ಕುವೆಂಪು ಅವರ ಭಾವಚಿತ್ರ ಅಳವಡಿಸುವ ಮೂಲಕ ಗೌರವಿಸಲಾಗಿದೆ. ನಾಡು ನುಡಿಯ ಬಗ್ಗೆ ರಚಿಸಿದ ಗೀತೆಗಳು ಅವರಲ್ಲಿದ್ದ ಕನ್ನಡ ಪ್ರೇಮ ಎಷ್ಟು ಎಂಬುದನ್ನು ಸಾರುತ್ತಿವೆ ಎಂದು ಹೇಳಿದರು.

ಮುಖ ಅತಿಥಿಗಳಾಗಿ ಆಗಮಿಸಿದ್ದ ಸಾಹಿತಿ ಡಾ. ಆರ್ ಎಸ್ ದೊಡ್ಡನಿಂಗಪ್ಪಗೋಳ ಮಾತನಾಡಿ ವಿಶ್ವದಲ್ಲಿ ಶಾಂತಿಯಿಂದ ನೆಲಿಸಬೇಕಾದರೆ ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಸಾರುವ ಜೊತೆಗೆ ಪ್ರತಿಯೊಬ್ಬರೂ ಪಾಲನೆ ಮಾಡಬೇಕಾದ ಅಗತ್ಯವಿದೆ. ಸಂದೇಶವನ್ನು ಅರ್ಥ ಮಾಡಿಕೊಂಡು ನಮ್ಮ ಜನಪ್ರತಿನಿಧಿಗಳು ಅನುಷ್ಠಾನಗೊಳಿಸಿದರೆ ನಮ್ಮ ನಾಡು ನಮ್ಮ ದೇಶ ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ.



☛ ಉದಯವಾಹಿನಿ ಚಿತ್ರ

**ಕನ್ನಡ ನಾಡಿಗೆ ದೊಡ್ಡಪ್ಪ**

ವಿಶ್ವಮಾನವ ದಿನಾಚರಣೆಯನ್ನಾಗಿ ಆಚರಿಸುವ ಮೂಲಕ ಅವರನ್ನು ಸ್ಮರಿಸುವುದು ನಮ್ಮೆಲ್ಲರಿಗೆ ಹೆಮ್ಮೆ. ಅವರು ಹೆಸರಿನಿಂದ ಪುಟ್ಟಪ್ಪ ಎನಿಸಿಕೊಂಡರು ಕನ್ನಡ ನಾಡಿಗೆ ದೊಡಪ್ಪ ಎನಿಸಿಕೊಂಡಿದ್ದಾರೆ. ಅವರು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಓದಿದರೂ ಕೂಡ ಕನ್ನಡ ನಾಡು, ನುಡಿ, ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಪ್ರೀತಿ ಮತ್ತು ಅಭಿಮಾನ ಬೆಳೆಸಿಕೊಂಡಿದ್ದರು.

## ಊಮಲೂಟಿ ವಸತಿ ಶಾಲೆಗೆ ಜಾರಕಿಹೊಳಿ ಭೇಟಿ


• ಉದಯವಾಹಿನಿ, ತುರ್ವಿಹಾಳ

ಇಲ್ಲಿಗೆ ಸಮೀಪದ ಊಮಲೂಟಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಭೇಟಿ ನೀಡಿದ್ದರು.

ಶಾಲೆಯ ಸೌಲಭ್ಯಗಳು, ಬೋಧನೆ ಕುರಿತು ಮಕ್ಕಳೊಂದಿಗೆ ಚರ್ಚಿಸಿದರು. ಕುಷ್ಟಗಿ ತಾಲ್ಲೂಕಿನ ತಾವರಗೇರ ಪಟ್ಟಣ ಸಮೀಪದ ಬುದ್ಧ ವಿಹಾರ ತರಬೇತಿ ಸಂಸ್ಥೆಯ ಕಾರ್ಯಕ್ರಮಕ್ಕೆ ಬಂದಿದ್ದ ವೇಳೆ ಶಾಲೆಗೆ ಭೇಟಿ ನೀಡಿದರು.

ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆದು ಸಮಾಜದಲ್ಲಿ ಮುಖ್ಯವಾಹಿನಿಗೆ ಬರಬೇಕು.

ಅದಕ್ಕಾಗಿ ಸರ್ಕಾರ ಹಲವು ಸೌಲಭ್ಯಗಳನ್ನು ನೀಡುತ್ತಿದೆ. ವಿದ್ಯಾರ್ಥಿಗಳು ಒಳ್ಳೆಯ ಶಿಕ್ಷಣ ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ದೇಶದ ಅಭಿವೃದ್ಧಿಯಲ್ಲಿ ನಿಮ್ಮ ಸಾಧನೆ ಅಡಕವಾಗಿರಬೇಕು' ಎಂದು ಕಿವಿಮಾತು ಹೇಳಿದರು. ಪ್ರಾಚಾರ್ಯ ಗುರುಪಾದಪ್ಪ ಗೌಡ ಶಾಲೆಗೆ ಬೇಕಿರುವ ಅಗತ್ಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.



☛ ಉದಯವಾಹಿನಿ ಚಿತ್ರ

ತಕ್ಷಣವೇ ಸ್ಮಾರ್ಟ್ ಕ್ಲಾಸ್, ಡಿಜಿಟಲ್ ಗ್ರಂಥಾಲಯ ಹಾಗೂ ಬೃಹತ್ ವಿಜ್ಞಾನ ಪ್ರಯೋಗಾಲಯ ಕೊಠಡಿ ಮಂಜೂರಾತಿಗೆ ಕ್ರಮವಹಿಸುವುದಾಗಿ ಸಚಿವರು ಭರವಸೆ ನೀಡಿದರು. ಪಿಯುಸಿ ವಿಜ್ಞಾನ ವಿಭಾಗದಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಾದ ರಾಜೇಶ್ವರಿ, ರಮೇಶ, ಲಿಂಗರಾಜ ಅವರನ್ನು ಸಚಿವರು ಸನ್ಮಾನಿಸಿದರು. ಶಿಕ್ಷಕರಾದ ನರಸಿಂಹಪ್ಪ, ಬಸವರಾಜ, ಸಂಗಮೇಶ, ಆದೇಶ, ಮುತ್ತಮ್ಮ, ಸಿಬ್ಬಂದಿ ಯಂಕೋಬ ಶರಣಪ್ಪ ಕೋಳಬಾಳ, ತಿಮ್ಮನಗೌಡ, ಮೌಲಾಸಾಬ್, ಖಾಜಾಸಾಬ್, ಪಾಲಕ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಅಮಿತ ಶಾ ಹೇಳಿಕೆ ಖಂಡಿಸಿ ವಿಜಯಪುರ ಬಂದ್‌ಗೆ ಉತ್ತಮ ಸ್ಪಂದನೆ

• ಉದಯವಾಹಿನಿ, ವಿಜಯಪುರ

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ರಾಜೀನಾಮೆಗೆ ಒತ್ತಾಯಿಸಿ ಅಹಿಂದ, ದಲಿತ ಸಂಘಟನೆಗಳ ಒಕ್ಕೂಟ ಹಾಗೂ ಡಾ.ಅಂಬೇಡ್ಕರ್ ವಿಚಾರವಾದಿಗಳ ಬಳಗದ ವತಿಯಿಂದ ಸೋಮವಾರ ವಿಜಯಪುರ ಬಂದ್ ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬೆಳಗ್ಗೆ ಕೇಂದ್ರ ಬಸ್ ನಿಲ್ದಾಣ ಬಳಿ ಖಾಸಗಿ ಬಸ್ ಹಾಗೂ ಅಥಣಿ ರಸ್ತೆಯ ಗೋದಾವರಿ ಹೊಟೇಲ್ ಹತ್ತಿರ ಕೆಎಸ್ ಆರ್ ಟಿಸಿ ಬಸ್ ಗಳಿಗೆ ಕೆಲ ಕಿಡಿಗೇಡಿಗಳು ಕಲ್ಲು ಎಸೆದ ಕೆಲವೊಂದು ಅಹಿತಕರ ಘಟನೆಗಳನ್ನು ಹೊರತು ಪಡಿಸಿ ಬಂದ್ ಶಾಂತಿಯುತವಾಗಿತ್ತು.

ಬೆಳಗ್ಗೆಯಿಂದಲೇ ಬಸ್ ಸಂಚಾರ ಸ್ಥಗಿತವಾಗಿತ್ತು. ಇದರಿಂದ ನಗರದ ಕೇಂದ್ರ ಬಸ್ ನಿಲ್ದಾಣ, ಸೆಟ್ಲೈಟ್ ಬಸ್ ನಿಲ್ದಾಣಗಳಲ್ಲಿ ಬಸ್ ಹಾಗೂ ಪ್ರಯಾಣಿಕರಿಲ್ಲದೆ ಬಿಕೋ ಎನ್ನುತ್ತಿದ್ದವು.

ಬೆಳಗ್ಗೆ 10 ವರೆಗೆ ನಗರದಲ್ಲಿ ಆಟೋ ಕಡಮೆ ಪ್ರಮಾಣದಲ್ಲಿ ಸಂಚರಿಸಿದವು. ಬಳಿಕ ಆಟೋ ಸಂಚಾರವೂ ಸ್ಥಗಿತಗೊಂಡಿತು.

ಇಂದು ಎಳ್ಳ ಅಮಾವಾಸ್ಯೆ ಆಗಿದ್ದರಿಂದ ರೈತಾಪಿ ಜನರು ನಗರಕ್ಕೆ ಕಡಮೆ ಸಂಖ್ಯೆಯಲ್ಲಿ ಬಂದಿದ್ದರು. ಅಮವಾಸ್ಯೆ ನಿಮಿತ್ತ ಬೇರೆ ಊರುಗಳಿಗೆ ದೇವಸ್ಥಾನಗಳಿಗೆ ತೆರಳುವವರಿಗೆ ಬಸ್, ಖಾಸಗಿ ವಾಹನ ಸಂಚಾರವಿಲ್ಲದೆ ತೊಂದರೆ ಅನುಭವಿಸಬೇಕಾಯಿತು.

## ಎಳ್ಳಮವಾಸ್ಯೆ : ಹೊಲದಲ್ಲಿ ಚರಗ ಸಂಭ್ರಮ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಚಂದಾಪೂರದ ಗಂಗೂನಾಯಕ ತಾಂಡಾದ ಪಕ್ಕದ ಹಿರಿಯ ಸಮಾಜ ಸೇವಕ ರಮೇಶ ಯಾಕಾಪೂರ ನೇತೃತ್ವದಲ್ಲಿ ಅವರ ಜೋಳದ ಹೊಲದಲ್ಲಿ ಎಳ್ಳ ಅಮವಾಸ್ಯೆಯ ನಿಮಿತ್ತ ಹೊಲದಲ್ಲಿ ಚರಗ ಚೆಲ್ಲಿ ಸಂಭ್ರಮ ಆಚರಿಸಿದರು.


ಹೊಲದಲ್ಲಿ ಟೆಂಟ್ ಹಾಕಿ ಜೋಳದ ಹೊಲದಲ್ಲಿ ಜೋಳದ ಕನಿಕೆಯಿಂದ ಕೊಂಪೆ ಕಟ್ಟಿ ಅದಕ್ಕೆ ಹೊಸ ಸೀರೆಯನ್ನು ಸುತ್ತಿ ಕೊಂಪೆಯೊಳಗೆ ಪಾಂಡವರ ಪ್ರತಿಮೆಗಳ ರೂಪದಲ್ಲಿ ಐದು ಕಲ್ಲುಗಳು ಇಟ್ಟು ಅರಿಷಿಣ ಕುಂಕುಮ ಹಾಗೂ ವಿಭೂತಿ ಹಚ್ಚಿ ಆರತಿ ಬೆಳಗಿ ಪೂಜೆ ಸಲ್ಲಿಸಿ ನಂತರ ಚರಗ ಚೆಲ್ಲಿ ಕುಟುಂಬದ ಸದಸ್ಯರೊಂದಿಗೆ ಹಾಗೂ ಸ್ನೇಹಿತರಿಗೆ ಅಹ್ವಾನಿಸಿ ಮನೆಯಿಂದ ತಂದಿದ ಜೋಳದ ರೊಟ್ಟಿ,ಸಜ್ಜದ ರೊಟ್ಟಿ,ಕಡುಬು,ಶೇಂಗಾ ಹೋಳಿಗೆ,ಅನ್ನ,ಸಾಂಬಾರು, ಊಟ ಸವಿದರು.ಅನೇಕ ಸ್ನೇಹಿತರು ರೈತರು ಇದ್ದರು.



☛ ಉದಯವಾಹಿನಿ ಚಿತ್ರ

# ಅಣುಸ್ಥಾವರ ನಿರ್ಮಾಣ ಕಾರ್ಯ ಕೈಬಿಡಬೇಕು

• ಅಣುಸ್ಥಾವರ ಸ್ಥಾಪನೆ ಮಾಡುವುದರಿಂದ ಐತಿಹಾಸಿಕ ಸ್ಮಾರಕಗಳು ನಾಶ: ದಢೇಸೂಗುರ





☛ ಉದಯವಾಹಿನಿ ಚಿತ್ರ

**ಜಲಾಶಯ ನಿರ್ಮಾಣಕ್ಕೆ ಅಣುಸ್ಥಾವರ ಅಡ್ಡಿ**

• ಉದಯವಾಹಿನಿ ಕಾರಟಗಿ

ಕೊಪ್ಪಳ ಜಿಲ್ಲೆಯ ಅರಸಿನಕೇರಿ ಬಳಿ ಅಣುಸ್ಥಾವರ ಸ್ಥಾಪನೆ ಜಾಗ ಗುರುತಿಸಿದ ಜಿಲ್ಲಾ ಆಡಳಿತ ಅಲ್ಲಿ ವಿರೋಧ ವ್ಯಕ್ತವಾದ ಕಾರಣ ಇದೀಗ ಗಂಗಾವತಿ ತಾಲ್ಲೂಕಿನ ಚಿಕ್ಕಬೆಣಕಲ್ ಬಳಿ ಅಣುಸ್ಥಾವರ ಸ್ಥಾಪನೆಗೆ ಸ್ಥಳ ಗುರುತಿಸಿರುವುದರ ಕುರಿತು ಕನಕಗಿರಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಬಸವರಾಜ್ ದಢೇಸೂಗುರವರು ಪತ್ರಿಕಾಗೋಷ್ಠಿಯನ್ನು ಕರೆದು ಮಾತನಾಡಿದರು.

ಗಂಗಾವತಿ ಸಮೀಪದ ಚಿಕ್ಕಬೆಣಕಲ್ ಎಡೆಹಳ್ಳಿ ವ್ಯಾಪ್ತಿಯ ಬೆಟ್ಟದ ಸಮೀಪದಲ್ಲಿರುವ ಅರಣ್ಯ ಇಲಾಖೆಗೆ ಸೇರಿದ ಸರ್ವೇ ನಂಬರ್ 35ರಲ್ಲಿ 1200 ಎಕರೆ ಭೂಮಿಯನ್ನು ಗಂಗಾವತಿ ಕಂದಾಯ ಇಲಾಖೆ ಗುರುತಿಸಿದ್ದು ಜಿಲ್ಲಾಡಳಿತ ಇಲ್ಲಿ ಅಣುಸ್ಥಾವರ ಸ್ಥಾಪನೆ ಕೂಡಲೇ ಕೈಬಿಡಬೇಕು ಯಾಕೆಂದರೆ ಗಂಗಾವತಿ ಐತಿಹಾಸಿ ಪ್ರಸಿದ್ಧತೆಯನ್ನು ಪಡೆದಿರುವ ತಾಲ್ಲೂಕಾಗಿದ್ದು ಆನೆಗುಂದಿ ಹಿರೇಬೆಣಕಲ್ ಹೇಮಗುಡ್ಡ ಸೇರಿದಂತೆ ಪ್ರಾಚೀನ ಪರಂಪರೆಯ ಕುರುಹುಗಳು ಇಲ್ಲಿ ಇಂದಿಗೂ ಪ್ರೇಕ್ಷಣೀಯ ಸ್ಥಳಗಳಾಗಿವೆ ಇಲ್ಲಿ ಅಣುಸ್ಥಾವರ ಸ್ಥಾಪನೆ ಮಾಡುವುದರಿಂದ ಪ್ರಾಚೀನ ಐತಿಹಾಸಿಕ ಸ್ಮಾರಕಗಳು ನಾಶವಾಗುತ್ತವೆ ಪ್ರಾಕೃತಿಕ ಸಂಪತ್ತು ಸೌಂದರ್ಯ ಹಾಳಾಗುತ್ತದೆ. ಹಾಗೂ ಅಣುಸ್ಥಾವರ ಹೇಮಗುಡ್ಡದ ವ್ಯಾಪ್ತಿಗೆ ಒಳಪಡುವುದರಿಂದ ಈಗಾಗಲೇ ಸಮಾನಾಂತರ ಜಲಾಶಯ ಯೋಜನೆಗೆ ಸಂಪರ್ಕ ಕಲ್ಪಿಸುವ ನಾಲೆಯ ಕಾಲುವೆ ನಿರ್ಮಾಣಕ್ಕೆ ತೊಂದರೆಯಾಗುತ್ತದೆ ಇದರಿಂದ ಲಕ್ಷಾಂತರ ರೈತರಿಗೆ ಅನುಕೂಲವಾಗಲಿರುವ ಮಹತ್ತರವಾದ ಸಮಾನಾಂತರ ಜಲಾಶಯ ನಿರ್ಮಾಣ ಯೋಜನೆಗೆ ಅಣುಸ್ಥಾವರ ಅಡ್ಡಿಯಾಗುವ ಸಾಧ್ಯತೆಗಳಿವೆ ಆದ್ದರಿಂದ ಜಿಲ್ಲೆಯ ಉಸ್ತುವಾರಿ ಸಚಿವರು ಈ ಕುರಿತು ಗಮನ ಹರಿಸಬೇಕು.

ರೈತರ ಜನರ ಅಭಿಪ್ರಾಯ ಸಂಗ್ರಹ ಮತ್ತು ಸಾಧಕ ಬಾಧಕಗಳ ಕುರಿತು ಚರ್ಚಿಸಬೇಕು ಗಂಗಾವತಿ ವ್ಯಾಪ್ತಿಯಲ್ಲಿ ಅಣುಸ್ಥಾವರ ನಿರ್ಮಾಣ ಕಾರ್ಯ ಕೈಬಿಡಬೇಕು ಬೇರೆ ಸ್ಥಳವನ್ನು ಆಯ್ಕೆ ಮಾಡಬೇಕೆಂದರು. ಸಚಿವರು ಎರಡು ಕೈಗಳಿಂದ ಭ್ರಷ್ಟಾಚಾರಕ್ಕೆ ಮುಂದಾಗಿದ್ದಾರೆ ಅಧಿಕಾರಿಗಳ ವರ್ಗಾವಣೆಯಲ್ಲಿ ಹಣ ಪಡೆಯುತ್ತಿದ್ದಾರೆ ಇಸ್ಪೀಟ್ ಕ್ಲಬ್ ಗಳಿಂದ ಹಣ ವಸೂಲಿ ಮಾಡುತ್ತಿದ್ದಾರೆ ಅಕ್ರಮ ಮರಳು ದಂಧೆ ಮಾಡುವುದರಲ್ಲಿ ಬಿಜಿಯಾಗಿದ್ದಾರೆ. 31ನೇ ಡಿಸ್ಟ್ರಿಬ್ಯೂಟರ್ ಕೊನೆ ಭಾಗದ ಲಿಫ್ಟ್ ಇರ್ರಿಗೇಷನ್ ಪ್ರಾಜೆಕ್ಟ್ ಪ್ರಾರಂಭ ಹಂತದಲ್ಲಿದ್ದರೂ ಅದನ್ನು ಪ್ರಾರಂಭ ಮಾಡದೆ ರೈತರ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮುಂದುವರಿದ ಮಾತನಾಡಿದ ಅವರು ಸಚಿವರು ನಾನು ಮಾಡಿದ ಅಭಿವೃದ್ಧಿ ಕಾರ್ಯಗಳನ್ನೆ ಮುಂದುವರಿಸುತ್ತಿದ್ದು ಇಲ್ಲಿವರೆಗೆ ಸುಮಾರು ಎರಡು ವರ್ಷಗಳ ಕಳೆದರೂ ಇನ್ನುವರೆಗೂ ಕ್ಷೇತ್ರಕ್ಕಾಗಲಿ ಜಿಲ್ಲೆಗಾಗಲಿ ನಯಾಪೈಸ ಅನುದಾನ ತಂದಿಲ್ಲ ಕ್ಷೇತ್ರದಲ್ಲಿ ಸುಮಾರು 15 ಸಾವಿರ ಕುಟುಂಬಗಳಿಗೆ ನನ್ನ ಅವಧಿಯಲ್ಲಿ ಹಕ್ಕುಪತ್ರಗಳನ್ನು ಅನುಮೋದನೆಗೊಳಿಸಿದ್ದೇನೆ, ಕೆಲವು ನಮ್ಮ ಅವಧಿಯಲ್ಲಿ ಹಕ್ಕುಪತ್ರ ವಿತರಣೆ ಮಾಡಿದ್ದು ಉಳಿದ ಹಕ್ಕು ಪತ್ರಗಳನ್ನು ಶಿವರಾಜ್ ತಂಗಡಿಗಿಯವರು ನೀಡುತ್ತಿದ್ದು ಅವು ನನ್ನ ಅವಧಿಯಲ್ಲಿ ಆಗಿರುವ ಕಾರ್ಯಗಳು

-ಬಸವರಾಜ್ ದಢೇಸೂಗುರ

# ಕ್ಷಯ ರೋಗ ನಿಯಂತ್ರಣ ಸಾರ್ವಜನಿಕ ಕಾಳಜಿ ಆಗಬೇಕು

## ಭಾರತವನ್ನು ಕ್ಷಯ ಮುಕ್ತಗೊಳಿಸಲು ಸಮುದಾಯವು ಒಗ್ಗೂಡಿ ಕೆಲಸ ಮಾಡಬೇಕು: ಡಾ. ಬಿ ವಿ ಗಿರೀಶ್



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿತ್ರದುರ್ಗ

ಪ್ರಾಥಮಿಕ ಆರೋಗ್ಯ ಕೇಂದ್ರದ ಸಭಾಂಗಣದಲ್ಲಿ ಡಿ.30 ಸೋಮವಾರ ಜರುಗಿದ ಕ್ಷಯ ಮುಕ್ತ 100 ದಿನಗಳ ಅಭಿಯಾನ ಕಾರ್ಯಕ್ರಮ ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಜರುಗಿತು ಕಾರ್ಯಕ್ರಮ ಉದ್ದೇಶಿಸಿ ತಾಲೂಕ್ ಆರೋಗ್ಯ ಅಧಿಕಾರಿ ಡಾಕ್ಟರ್ ಬಿ ವಿ ಗಿರೀಶ್ ಮಾತನಾಡಿ ಕ್ಷಯ ರೋಗವು ಭಾರತದ ಸಾರ್ವಜನಿಕ ಆರೋಗ್ಯಕ್ಕೆ ಅತಿ ದೊಡ್ಡ ತೊಂದರೆಗಳಲ್ಲಿ ಒಂದಾಗಿರುತ್ತದೆ ಪ್ರತಿ ವರ್ಷ ವಿಶ್ವದಲ್ಲೇ ಅತಿ ಹೆಚ್ಚು ಜನ ಕ್ಷಯರೋಗಕ್ಕೆ ತುತ್ತಾಗುತ್ತಾರೆ.


**ಕ್ಷಯ ಮುಕ್ತ 100 ದಿನಗಳ ಅಭಿಯಾನ**

ಭಾರತವನ್ನು ಕ್ಷಯ ಮುಕ್ತಗೊಳಿಸಲು ಸಮುದಾಯವು ಒಗ್ಗುಡಿ ಕೆಲಸ ಮಾಡಬೇಕಾಗಿದೆ ಕ್ಷಯ ರೋಗವು ಮೈಕೋ ಬ್ಯಾಕ್ಟೀರಿಯಾ ಟ್ಯೂಬರ್ ಕ್ಯುಲೋಸಿಸ್ ಎಂಬ ಸೂಕ್ಷ್ಮ ರೋಗಾನವಿನಿಂದ ಬರುತ್ತದೆ, ಕ್ಷಯರೋಗಿಯು ಕೆಮ್ಮಿದಾಗ ಅಥವಾ ಸೀಮಿದಾಗ ಹೊರಬರುವ ತುಂತುರು ರೋಗಾಣುಗಳು ಗಾಳಿಯ ಮೂಲಕ ಆರೋಗ್ಯವಂತ ವ್ಯಕ್ತಿಯ ಶ್ವಾಸಕೋಶ ಸೇರಿ ಸೋಂಕು ಉಂಟುಮಾಡುತ್ತದೆ , ಕ್ಷಯ ರೋಗಿಗಳು ಕೆಮ್ಮುವಾಗ ಹಾಗೂ ಸೇರುವಾಗ ಬಾಯಿ ಮತ್ತು ಮೂಗಿನ ಹತ್ತಿರ ಕರವಸ್ತ್ರ ಇಟ್ಟುಕೊಳ್ಳಬೇಕು, ರೋಗಿಯ ಕಫವನ್ನು ಮನಸ್ಸಿಗೆ ಬಂದ ಕಡೆ ಉಗಿಯಬಾರದು, ಕಫವನ್ನು ಡಬ್ಬಿಯಲ್ಲಿ ಶೇಖರಿಸಿ ಗುಂಡಿ ತೋಡಿ ಮುಚ್ಚಬೇಕು, ನವಜಾತ ಶಿಶುಗಳಿಗೆ ಬಿಸಿಜಿ ಲಸಿಕೆ ಹಾಕಿಸಬೇಕು, ಕ್ಷಯ ರೋಗ ನಿಯಂತ್ರಣ ಸಾರ್ವಜನಿಕ ಕಾಳಜಿ ಆಗಬೇಕು ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ ಮೂಗಪ್ಪ ಮಾತನಾಡಿದರು ಕಾರ್ಯಕ್ರಮದಲ್ಲಿ ಚಿಕ್ಕಗೊಂಡನಹಳ್ಳಿ ಪ್ರಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸಚಿನ್, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶಂಕರ್ ನಾಯಕ್ ಪ್ರವೀಣ್ ಕುಮಾರ್ ಸಮುದಾಯ ಆರೋಗ್ಯ ಅಧಿಕಾರಿಗಳಾದ ಲೋಹಿತ್ ಕುಮಾರ್ ಪ್ರಯೋಗಶಾಲಾ ತಂತ್ರಜ್ಞ ನಾಗರಾಜ್ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಸುಧಾ ಪ್ರಿಯಾಂಕಾ ಕೆ ಟಿ ದೇವೇಂದ್ರ, ಗ್ರಾಮಸ್ಥರು ಉಪಸ್ಥಿತರಿದ್ದರು.

ನಿಮ್ಮ ಮನೆಯಲ್ಲಿ ಹಾಗೂ ಸುತ್ತಮುತ್ತಲಿನವರಲ್ಲಿ ಟಿಬಿ ರೋಗದ ಲಕ್ಷಣಗಳು ಉಳ್ಳುವವರನ್ನು ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಪರೀಕ್ಷೆಗಾಗಿ ಕಳುಹಿಸಬೇಕು. ಟಿಬಿ ರೋಗವನ್ನು ಬೇಗ ಪತ್ತೆ ಹಚ್ಚಿ ಪೌಷ್ಟಿಕ ಆಹಾರ ಸೇವಿಸಿ ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ ಕ್ಷಯ ರೋಗದ ಅಪಾಯ ಇರುವವರನ್ನು ಆರೈಕೆ ಮಾಡಿ ದಿನಾಂಕ 07.12.2024 ರಿಂದ 24-03- 2025 ರವರೆಗೆ ಕ್ಷಯ ಮುಕ್ತ ನೂರು ದಿನಗಳ ಅಭಿಯಾನ ತೀವ್ರ ಪ್ರಚಾರ ಕಾರ್ಯಕ್ರಮವನ್ನು ಎಲ್ಲಾ ಆಯುಷ್ಮಾನ್ ಆರೋಗ್ಯ ಮಂದಿರ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಎಲ್ಲಾ ಗ್ರಾಮಗಳ ಮನೆಗಳಲ್ಲಿ ಸಮೀಕ್ಷೆ ನಡೆಸಿ ದುರ್ಬಲ ಜನಸಂಖ್ಯೆಯನ್ನು ಗುರುತಿಸಿ ಜಾಗೃತಿ ಸ್ಕ್ರೀನಿಂಗ್ ಮತ್ತು ತೀವ್ರವಾದ ಪ್ರಕರಣ ಪತ್ತೆ ಹಚ್ಚುವುದು ಪೌಷ್ಟಿಕ ಬೆಂಬಲ ಮಧ್ಯಸ್ಥಿಕೆಯೊದಿಗೆ ವಿಭಿನ್ನವಾದ ಟಿಬಿ ಆರೈಕೆ ವಿಧಾನವನ್ನು ಅಳವಡಿಸುವ ಮೂಲಕ ಟಿಬಿ ಇರುವ ಜನರಲ್ಲಿ ಮರಣವನ್ನು ಕಡಿಮೆ ಮಾಡುವುದು ಹೊಸ ಟಿಬಿ ಪ್ರಕರಣಗಳು ಸಂಭವಿಸುವುದನ್ನು ತಡೆಗಟ್ಟುವುದು ಕ್ಷಯ ರೋಗದ ಬಗೆಗಿನ ಭೀತಿಯನ್ನು ತೋರಿತವಾಗಿ ಕೊನೆಗಾಣಿಸೋಣ


-ಎನ್‌ಎಸ್ ಮಂಜುನಾಥ್, ತಾಲ್ಲೂಕ ಆರೋಗ್ಯ ಶಿಕ್ಷಣಾಧಿಕಾರಿ



# ಜ.3 ಕ್ಕೆ ನಟ ಅಲ್ಲು ಅರ್ಜುನ್ ಜಾಮೀನು ತೀರ್ಪು

ಪುಷ್ಪ 2 ಚಿತ್ರ ಪ್ರದರ್ಶನದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 35 ವರ್ಷದ ಮಹಿಳೆ ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಅಲ್ಲು ಅರ್ಜುನ್ ಸಲ್ಲಿಸಿರುವ ಸಾಮಾನ್ಯ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನಾಂಪಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಜನವರಿ 3 ರಂದು ತೀರ್ಪು ನೀಡುವುದಾಗಿ ಹೇಳಿದೆ. ಪ್ರಕರಣದ ವಿಚಾರಣೆ ವೇಳೆ ಅಲ್ಲು ಅರ್ಜುನ್ ಅವರ ಸಾಮಾನ್ಯ ಜಾಮೀನು ಅರ್ಜಿಯನ್ನು ವಿರೋಧಿಸಿ ಚಿಕ್ಕಡಪಲ್ಲಿ ಪೊಲೀಸರು ಪ್ರತಿ-ಅಫಿಡವಿಟ್ ಸಲ್ಲಿಸಿದ್ದಾರೆ. ನಟ ಅಲ್ಲು ಅರ್ಜುನ್‌ಗೆ ಸಾಮಾನ್ಯ ಜಾಮೀನು ನೀಡುವಂತೆ ಅವರ ಹಿರಿಯ ವಕೀಲ ನಿರಂಜನ್ ರೆಡ್ಡಿ ವಾದ ಮಂಡಿಸಿದರು. ಇದೇ ವೇಳೆ ಪಬ್ಲಿಕ್ ಪ್ರಾಸಿಕ್ಯೂಟರ್ ಜಾಮೀನು ಅರ್ಜಿಯನ್ನು ವಜಾಗೊಳಿಸುವಂತೆ ಮನವಿ ಮಾಡಿದರು.

ಭಾರಿ ಚರ್ಚೆಗೆ ಕಾರಣವಾದ ಪ್ರಕರಣದ ವಾದ ಪ್ರತಿವಾದ ಆಲಿಸಿದ ನ್ಯಾಯಾಲಯ ಜನವರಿ 3 ರಂದು ಈ ಪ್ರಕರಣದ ಬಗ್ಗೆ ತೀರ್ಪು ನೀಡುವುದಾಗಿ ಘೋಷಿಸಿತು. ಅಲ್ಲು ಅರ್ಜುನ್‌ಗೆ ಈಗಾಗಲೇ ಹೈಕೋರ್ಟ್ ನಾಲ್ಕು ವಾರಗಳ ಮಧ್ಯಂತರ ಜಾಮೀನು ನೀಡಿದ್ದು, ಇದೀಗ ಸಾಮಾನ್ಯ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.



# ದರ್ಶನ್ ಗ್ಯಾಂಗ್‌ಗೆ ಸರ್ಕಾರ ಶಾಕ್!

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಸರ್ಕಾರ ಅಸ್ತು ಎಂದಿದೆ. ದರ್ಶನ್ ಜಾಮೀನು ರದ್ದಿಗೆ ಮೇಲ್ಮನವಿಗೆ ಸರ್ಕಾರ ಗ್ರೀನ್ ಸಿಗ್ನಲ್ ನೀಡಿದೆ. ಮೇಲ್ಮನವಿ ಸಲ್ಲಿಕೆಗೆ ಗೃಹ ಇಲಾಖೆ ಅಧಿಕಾರಿಗಳಿಂದ ಪೊಲೀಸ್ ಇಲಾಖೆಗೆ ಆದೇಶ ಸಿಕ್ಕಿದೆ. ಬೆಂಗಳೂರು ಪೊಲೀಸರ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಲು ಅನಿಲ್ ಸಿ ನಿಶಾನಿ ಹಾಗೂ ಹಿರಿಯ ವಕೀಲ ಸಿದ್ಧಾರ್ಥ್ ಲುಥಾರ ಅವರನ್ನು ನೇಮಕ ಮಾಡಲಾಗಿದೆ. ರಾಜ್ಯ ಸರ್ಕಾರ ಅಸ್ತು ಹಿನ್ನಲೆ ಎರಡ್ಮೂರು ದಿನಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಸ್ಪೆಷಲ್ ಲೀವ್ ಪಿಟಿಷನ್ ಸಲ್ಲಿಕೆಯಾಗುವ ಸಾಧ್ಯತೆಯಿದೆ. ಪವಿತ್ರಗೌಡ, ದರ್ಶನ್ ಸೇರಿದಂತೆ ಎಲ್ಲಾ 7 ಜನ ಆರೋಪಿಗಳ ವಿರುದ್ಧ ಸುಪ್ರೀಂ ಮೆಟ್ಟಿಲೇರಲು ಬೆಂಗಳೂರು ಪೊಲೀಸರು ತಯಾರಿ ನಡೆಸುತ್ತಿದ್ದಾರೆ.



# ಸಕಸ್‌ಗಾಗಿ ದಿಟ್ಟ ನಿರ್ಧಾರ ಕೈಗೊಂಡ ಶ್ರೀಲೀಲಾ

ಕನ್ನಡದ ನಟಿ ಶ್ರೀಲೀಲಾಗೆ 'ಪುಷ್ಪ 2' ಸಿನಿಮಾದಿಂದ ಒಂದೊಳ್ಳೆಯ ಬ್ರೇಕ್ ಸಿಕ್ಕಿದೆ. ಕಿಸ್ಸಿಕ್ ಐಟಂ ಹಾಡಿನ ಸಕ್ಸಸ್‌ನಿಂದ ಹಲವಾರು ಅವಕಾಶಗಳು ಅವರನ್ನು ಅರಸಿ ಬರುತ್ತಿವೆ. ಹೀಗಿರುವಾಗ ಟಾಪ್ ನಟಿಯಾಗಿ ನಿಲ್ಲಲು ಮತ್ತು ಯಶಸ್ಸಿಗಾಗಿ ನಟಿ ದಿಟ್ಟ ನಿರ್ಧಾರವೊಂದನ್ನು ಕೈಗೊಂಡಿದ್ದಾರೆ. ಶ್ರೀಲೀಲಾ ಡ್ಯಾನ್ಸ್, ನಟನೆ ಬಗ್ಗೆ ಫ್ಯಾನ್ಸ್‌ಗೆ ಕ್ರೇಜ್ ಇದೆ. ತೆಲುಗಿಗೆ ಕಾಲಿಟ್ಟ ನಾಲ್ಕೇ ವರ್ಷಗಳಲ್ಲಿ ನಟಿ ಅಲ್ಲಿನ ಪ್ರೇಕ್ಷಕರ ಮನಗೆದ್ದಿದ್ದಾರೆ. ಆದರೆ ಅವರು ಸಿನಿಮಾದ ನಟನೆಗಿಂತ ಡ್ಯಾನ್ಸ್ ಮತ್ತು ಐಟಂ ಸಾಂಗ್‌ನಿಂದಲೇ ಹೆಚ್ಚು ಗುರುತಿಸಿಕೊಂಡಿದ್ದಾರೆ. ಹಾಗಾಗಿ ಚಿತ್ರದ ಕಥೆ ಆಯ್ಕೆ ಮಾಡುವ ರೀತಿಯನ್ನು ಇದೀಗ ಅವರು ಬದಲಿಸಿಕೊಂಡಿದ್ದಾರೆ. ಮರ ಸುತ್ತುವ ಪಾತ್ರ ಬಿಟ್ಟು ನಟನೆಗೆ ಸ್ಕೋಪ್ ಇರುವ ಪಾತ್ರಕ್ಕೆ ನಟಿ ಪ್ರಾಮುಖ್ಯತೆ ಕೊಡಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಹಾಗಾಗಿ ತಮಿಳಿನ ಶಿವ ಕಾರ್ತಿಕೇಯನ್ ನಟನೆಯ ಸಿನಿಮಾಗೆ ಶ್ರೀಲೀಲಾ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಈ ಚಿತ್ರಕ್ಕೆ ಪ್ರತಿಭಾನ್ವಿತ ನಿರ್ದೇಶಕಿ ಸುಧಾ ಕೊಂಗರ ಡೈರೆಕ್ಷನ್ ಮಾಡಲಿದ್ದಾರೆ. ಇದರಲ್ಲಿ 'ಕಿಸ್' ನಟಿಗೆ ಉತ್ತಮ ಪಾತ್ರವೇ ಸಿಕ್ಕಿದೆ ಎಂದು ಹೇಳಲಾಗುತ್ತಿದೆ. ಇನ್ನೂ ಸೌತ್ ಸಿನಿಮಾಗಳ ಜೊತೆ ನಟಿ ಬಾಲಿವುಡ್‌ಗೂ ಪಾದಾರ್ಪಣೆ ಮಾಡಿದ್ದಾರೆ.



# ಮೈ ಜುಮ್ ಎನ್ನುವಂತಿದೆ ಕರಾವಳಿ ಟೀಸರ್

'ಕರಾವಳಿ' ಸ್ಯಾಂಡಲ್‌ವುಡ್‌ನಲ್ಲಿ ಭಾರಿ ನಿರೀಕ್ಷೆ ಮೂಡಿಸಿರುವ ಸಿನಿಮಾ. 2025ರ ಬಹುನಿರೀಕ್ಷೆಯ ಭಾರತೀಯ ಸಿನಿಮಾಗಳ ಪಟ್ಟಿಯಲ್ಲಿ ಕರಾವಳಿ ಸಿನಿಮಾ ಕೂಡ ಜಾಗ ಗಿಟ್ಟಿಸಿಕೊಂಡಿರುವುದು ವಿಶೇಷ. ಇದೀಗ ಪ್ರಜ್ವಲ್ ದೇವರಾಜ್ ನಟನೆಯ ಗುರುದತ್ ಗಾಣಿಗ ನಿರ್ದೇಶನದ 'ಕರಾವಳಿ'ಯ ವಿಭಿನ್ನವಾದ ಟೀಸರ್ ರಿಲೀಸ್ ಆಗಿದ್ದು, ಚಿತ್ರದ ಮೇಲಿನ ನಿರೀಕ್ಷೆಯನ್ನು ದುಪ್ಪಟ್ಟು ಮಾಡಿದೆ. ಸಾಮಾನ್ಯವಾಗಿ ಟೀಸರ್ ನಾಯಕ, ನಾಯಕಿ ಅಥವ ಸಿನಿಮಾದ ಒಬ್ಬ ವ್ಯಕ್ತಿಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಆದರೆ ಕರಾವಳಿಯಿಂದ ಬಂದಿರುವ ಹೊಸ ಟೀಸರ್ ಒಂದು ಪ್ರತಿಷ್ಠಿಯ ವಸ್ತುವಿನ ಮೇಲೆ ಇರುವುದು ವಿಶೇಷ. ಸದ್ಯ ರಿಲೀಸ್ ಆಗಿರುವ ಟೀಸರ್‌ನಲ್ಲಿ ಪ್ರತಿಷ್ಠಿಯ ಕುರ್ಚಿ ಹೈಲೆಟ್. ಅದು ಬರಿ ಕುರ್ಚಿಯಲ್ಲ ಪ್ರತಿಷ್ಠೆಯ ಪಿಶಾಚಿ ಎನ್ನುವ ಸಂಭಾಷಣೆಯಿಂದ ಟೀಸರ್ ಪ್ರಾರಂಭವಾಗುತ್ತೆ. ಪ್ರತಿಷ್ಠೆಯ ಕುರ್ಚಿ ಮೇಲೆ ಕೂರುವುದಿರಲಿ ಕಣ್ಣಿಟ್ಟವರನ್ನು ಬಿಡಲ್ಲ ಎಂದು ನಟ ಮಿತ್ರ ಅವರ ಧ್ವನಿಯಲ್ಲಿ ಮೂಡಿ ಬಂದಿರುವ ಈ ಟೀಸರ್ ಮೈ ಜುಮ್ ಎನ್ನುವಂತಿದೆ. ಅಂದಹಾಗೆ, ಕರಾವಳಿ ಕಂಬಳ ಪ್ರಪಂಚದ ಬಗ್ಗೆ ಇರುವ ಸಿನಿಮಾ. ಈ ಮೊದಲು ರಿಲೀಸ್ ಆಗಿರುವ ಟೀಸರ್‌ನಲ್ಲಿ ಒಂದು ಮಗು ಜನಿಸುತ್ತದೆ ಅದೇ ಸಮಯಕ್ಕೆ ಕೊಟ್ಟಿಗೆಯಲ್ಲಿ ಒಂದು ಕರುವಿನ ಜನನವು ಆಗುತ್ತೆ. ಸದ್ಯ ರಿಲೀಸ್ ಆಗಿರುವ ಟೀಸರ್ ಮುಂದುವರೆದ ಭಾಗ ಎಂಬಂತೆ ಆ ಮಗು ಹುಟ್ಟಿದಾಗಿನಿಂದ ಪ್ರತಿಷ್ಠಿಯ ಕುರ್ಚಿಯನ್ನು ನೋಡುತ್ತಾ ಬೆಳೆದವನು, ಆ ಕುರ್ಚಿಯ ಮೇಲೆ ಎಲ್ಲಾರ ಕಣ್ಣು ಬಿದ್ದಿರುವುದು ಈ ಟೀಸರ್‌ನಲ್ಲಿ ಗೊತ್ತಾಗುತ್ತಿದೆ. ನಟ ಮಿತ್ರ ಘರ್ಜನೆ, ರಮೇಶ್ ಇಂದಿರ ಅವರ ಕ್ರೌರ್ಯತ್ವ ಕೂಡ ಟೀಸರ್‌ನಲ್ಲಿ ಕಾಣಬಹುದು. ಕೆಕೆ ಮಠ ಹಾಗೂ ಟೀಸರ್‌ನ ಕೊನೆಯಲ್ಲಿ ಒಂದು ಫ್ರೇಮ್‌ನಲ್ಲಿ ಕಾಣಿಸಿಕೊಳ್ಳುವ ಪ್ರಜ್ವಲ್ ದೇವರಾಜ್ ಕೂಡ ತುಂಬಾ ಇಂಟ್ರಸ್ಟಿಂಗ್ ಎನಿಸುತ್ತಿದ್ದಾರೆ.



# ರಾಮ್ ಚರಣ್ 256 ಅಡಿ ಎತ್ತರದ ಕಟೌಟ್

ಗ್ಲೋಬಲ್ ಸ್ಟಾರ್ ರಾಮ್ ಚರಣ್ ನಟನೆಯ ಬಹುನಿರೀಕ್ಷಿತ ಸಿನಿಮಾ 'ಗೇಮ್ ಚೇಂಜರ್' ಬಿಡುಗಡೆಗೆ ಸಜ್ಜಾಗಿದೆ. ಅಮೆರಿಕದ ನೆಲದಲ್ಲಿ ಅದ್ದೂರಿ ಪ್ರೀ-ರಿಲೀಸ್ ಇವೆಂಟ್ ಮಾಡುವ ಮೂಲಕ ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಇದುವರೆಗೆ ಯಾವ ಚಿತ್ರತಂಡ ಮಾಡದ ದಾಖಲೆ ಮಾಡಿದೆ. ಇದೀಗ ಚೆರ್ರಿ ಅಭಿಮಾನಿಗಳು ಕೂಡ 'ಗೇಮ್ ಚೇಂಜರ್' ಸಿನಿಮಾ ಮೂಲಕ ಹೊಸ ರೆಕಾರ್ಡ್ ಕ್ರಿಯೇಟ್ ಮಾಡಿದ್ದಾರೆ. ಜ.10 'ಗೇಮ್ ಚೇಂಜರ್' ಚಿತ್ರ ಬಿಡುಗಡೆಯಾಗುತ್ತಿರುವ ಹಿನ್ನೆಲೆ ಆಂಧ್ರಪ್ರದೇಶದ ವಿಜಯವಾಡದಲ್ಲಿರುವ ಬೃಂದಾವನ ಕಾಲೋನಿಯ ವಜ್ರ ಗ್ರೌಂಡ್ಸ್‌ನಲ್ಲಿ ರಾಮ್‌ಚರಣ್ ಅವರ 256 ಅಡಿ ಎತ್ತರದ ಕಟೌಟ್ ನಿಲ್ಲಿಸಿ ಅಭಿಮಾನಿಗಳು ಸಂಭ್ರಮಿಸಿದ್ದಾರೆ. ಇದು ಭಾರತದ ಅತೀ ದೊಡ್ಡ ಕಟೌಟ್ ಎನ್ನುವ ದಾಖಲೆಯನ್ನು ಬರೆದಿದೆ. ನಾಲ್ಕು ವರ್ಷಗಳ ಹಿಂದೆ ಬೆಂಗಳೂರಿನ ನಂದಿ ಲಿಂಕ್ಸ್ ಗ್ರೌಂಡ್‌ನಲ್ಲಿ ಅಭಿಮಾನಿಗಳು ರಾಕಿಂಗ್ ಸ್ಟಾರ್ ಯಶ್ ಅವರ 236 ಅಡಿ ಎತ್ತರದ ಕಟೌಟ್ ನಿಲ್ಲಿಸಿದ್ದರು. ಇದಕ್ಕೂ ಮುನ್ನ ತಮಿಳುನಾಡಿನಲ್ಲಿ ಸೂರ್ಯ ಅವರ ಅಭಿಮಾನಿಗಳು 215 ಅಡಿ ಎತ್ತರದ ಕಟೌಟ್ ನಿಲ್ಲಿಸಿ ದಾಖಲೆ ಬರೆದಿದ್ದರು. ಇನ್ನು ಕಳೆದ ವರ್ಷ ಪ್ರಭಾಸ್ ಅಭಿಮಾನಿಗಳು 230 ಅಡಿ ಕಟೌಟ್ ನಿಲ್ಲಿಸಿದ್ದು ಕೂಡ ದಾಖಲೆಯ ಪುಟಗಳಿಗೆ ಸೇರಿಕೊಂಡಿತ್ತು.

# ಸೋಲಿಗೆ ರೋಹಿತ್ ಶರ್ಮಾ ದೂರಿದ್ದು ಯಾರನ್ನ?




## ಯುವ ಆಟಗಾರರ ತಪ್ಪೇ

ಮೆಲ್ಬೋರ್ನ್‌ನಲ್ಲಿ ನಡೆದ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಭಾರತ ಸೋತಿದೆ. ರೋಹಿತ್ ಶರ್ಮಾ ಪಂದ್ಯದ ನಂತರ ನೀಡಿದ ಹೇಳಿಕೆಯಲ್ಲಿ ಯುವ ಆಟಗಾರರನ್ನು ಪರೋಕ್ಷವಾಗಿ ದೂಷಿಸಿದ್ದಾರೆ. ಯಶಸ್ವಿ ಜೈಸ್ವಾಲ್ ಮತ್ತು ರಿಷಬ್ ಪಂತ್ ಅವರು ಉತ್ತಮ ಪ್ರದರ್ಶನ ನೀಡಿದ್ದರೂ, ರೋಹಿತ್ ಅವರ ಹೇಳಿಕೆ ಅಭಿಮಾನಿಗಳಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಮೆಲ್ಬೋರ್ನ್‌ನಲ್ಲಿ ನಡೆದ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯವನ್ನು ಸೋತಿರುವ ಟೀಂ ಇಂಡಿಯಾ ಇದೀಗ ಸತತ ಮೂರನೇ ಬಾರಿಗೆ ಬಾರ್ಡರ್ ಗವಾಸ್ಕರ್ ಟೆಸ್ಟ್ ಸರಣಿಯನ್ನು ಗೆಲ್ಲುವುದರಿಂದ ವಂಚಿತವಾಗಿದೆ. ಕಳೆದೆರಡು ಮುಖಾಮುಖಿಯಲ್ಲಿ ಆಸ್ಟ್ರೇಲಿಯಾವನ್ನು ಬಗ್ಗುಬಡಿದಿದ್ದ ಟೀಂ ಇಂಡಿಯಾಕ್ಕೆ ಈ ಬಾರಿ ಅದು ಸಾಧ್ಯವಾಗಲಿಲ್ಲ. ಈ ನಡುವೆ ಪತ್ರಿಕಾಗೋಷ್ಠಿಯಲ್ಲಿ ತಂಡದ ಸೋಲಿನ ಮರಣೋತ್ತರ ಪರೀಕ್ಷೆ ಮಾಡಿರುವ ರೋಹಿತ್ ಯುವ ಆಟಗಾರರ ಮೇಲೆ ಗೂಬೆ ಕೂರಿಸಿದ್ದಾರೆ.

**ರೋಹಿತ್ ಶರ್ಮಾ ವಿಚಿತ್ರ ಹೇಳಿಕೆ**

ಪಂದ್ಯದ ಬಳಿಕ ಮಾತನಾಡಿದ ರೋಹಿತ್ ಶರ್ಮಾ, 'ಪಂದ್ಯ ಸೋತಾಗ ಹೆಚ್ಚು ನೋವಾಗುತ್ತದೆ. ತಂಡದ ಬ್ಯಾಟ್ಸ್‌ಮನ್ ಗಳಿಂದ ನಿರೀಕ್ಷಿತ ಪ್ರದರ್ಶನ ಹೊರಬರಲಿಲ್ಲ. ನಮಗೆ ಪಂದ್ಯವನ್ನು ಗೆಲ್ಲುವ ಅವಕಾಶವಿತ್ತು. ಕೊನೆಯ ಪಕ್ಷ ನಾವು ಪಂದ್ಯವನ್ನು ಡ್ರಾ ಮಾಡಿಕೊಳ್ಳಬಹುದಿತ್ತು. ನಾವು ಪ್ರಯತ್ನಿಸಿದೆವಾದರೂ ಅದು ಸಾಧ್ಯವಾಗಲಿಲ್ಲ. ಇತ್ತ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿತ್ತು ರನ್ ಗಳಿಸಿದವರು ಇನ್ನೂ ಹೆಚ್ಚು ಸಮಯ ಆಡಬಹುದಿತ್ತು. ಆದರೆ ಅವರು ಕೂಡ ವಿಕೆಟ್ ಕೈಚೆಲ್ಲಿದರು. ಆದರೆ ಅವರು ಇನ್ನು ಹೊಸಬರು, ಅವರಿನ್ನು ಕಲಿಯುತ್ತಿದ್ದಾರೆ ಎಂದಿದ್ದಾರೆ. ಇನ್ನು ಸೋಲಿನ ಬಗ್ಗೆ ಮಾತನಾಡಿದ ರೋಹಿತ್ ಶರ್ಮಾ, 'ಸೋತಿರುವುದು ತುಂಬಾ ನಿರಾಸೆ ತಂದಿದೆ. ನಾವು ಕೊನೆಯವರೆಗೂ ಹೋರಾಡಲು ಬಯಸಿದ್ದೆವು ಆದರೆ ಅದು ಸಾಧ್ಯವಾಗಲಿಲ್ಲ. ಕಳೆದ ಸೆಷನ್ ಅಷ್ಟೇ ಅಲ್ಲ, ಇಡೀ ಪಂದ್ಯದಲ್ಲಿ ಎಲ್ಲಿ ತಪ್ಪು ನಡೆದಿದೆ ಎಂಬುದನ್ನು ನೋಡಬೇಕಿದೆ. ಇಡೀ ಟೆಸ್ಟ್ ಪಂದ್ಯದಲ್ಲಿ ನಮಗೆ ಅವಕಾಶವಿತ್ತು. ಆದರೆ ನಾವು ಆಸ್ಟ್ರೇಲಿಯ ತಂಡಕ್ಕೆ ಹಲವು ಅವಕಾಶಗಳನ್ನು ನೀಡಿದ್ದೇವೆ. ಒಂದು ಹಂತದಲ್ಲಿ ಆಸ್ಟ್ರೇಲಿಯಾ 6 ವಿಕೆಟ್‌ಗೆ 90 ರನ್ ಕಲೆಹಾಕಿತ್ತು. ಆದರೆ ಅಲ್ಲಿಂದ ನಾವು ಎಚ್ಚರ ತಪ್ಪಿದೆವು ಎಂದಿದ್ದಾರೆ.

# ವೃತ್ತಿಜೀವನದ ಕೊನೆಯ ಟೆಸ್ಟ್ ಆಡಲಿದ್ದಾರಾ ರೋಹಿತ್



ಮೆಲ್ಬೋರ್ನ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತದ ಸೋಲಿನ ನಂತರ, ರೋಹಿತ್ ಶರ್ಮಾ ಅವರ ಟೆಸ್ಟ್ ಕ್ರಿಕೆಟ್ ನಿವೃತ್ತಿಯ ಬಗ್ಗೆ ವ್ಯಾಪಕ ಚರ್ಚೆಗಳು ನಡೆಯುತ್ತಿವೆ. ಸಿಡ್ನಿ ಟೆಸ್ಟ್‌ನಲ್ಲಿ ಅವರ ಸಂಭಾವ್ಯ ಅಂತಿಮ ಪಂದ್ಯದ ಬಗ್ಗೆ ವರದಿಗಳು ಹರಿದಾಡುತ್ತಿದ್ದು, ಬಿಸಿಸಿಐ ಮತ್ತು ಆಯ್ಕೆಗಾರರು ಈ ವಿಷಯದ ಕುರಿತು ಚರ್ಚಿಸುತ್ತಿದ್ದಾರೆ ಎನ್ನಲಾಗುತ್ತಿದೆ. ರೋಹಿತ್ ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಆಡಲು ಬಯಸುತ್ತಾರೆ ಎಂದು ಹೇಳಲಾಗಿದೆ, ಆದರೆ ತಂಡದ ಫೈನಲ್‌ಗೆ ಅರ್ಹತೆ ಪಡೆಯುವ ಸಾಧ್ಯತೆ ಕಡಿಮೆಯಿದ್ದು, ಸಿಡ್ನಿ ಟೆಸ್ಟ್ ಅವರ ಕೊನೆಯ ಪಂದ್ಯವಾಗಬಹುದು. ಮೆಲ್ಬೋರ್ನ್‌ನಲ್ಲಿ ನಡೆದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ವಿರುದ್ಧದ ಸೋಲಿನ ಬಳಿಕ ಟೀಂ ಇಂಡಿಯಾ ಪಾಳಯದಿಂದ ಬಿಗ್ ನ್ಯೂಸ್ ಹೊರಬರುತ್ತಿದೆ. ಮಾಧ್ಯಮ ವರದಿಗಳ ಪ್ರಕಾರ, ರೋಹಿತ್ ಶರ್ಮಾ ಶೀಘ್ರದಲ್ಲೇ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ. ಸಿಡ್ನಿ ಟೆಸ್ಟ್ ಬಳಿಕ ರೋಹಿತ್ ಶರ್ಮಾ ನಿವೃತ್ತಿಯಾಗಲಿದ್ದಾರೆ ಎಂದು ಹೇಳಲಾಗುತ್ತಿದೆ. ಜನವರಿ 3 ರಿಂದ ಸಿಡ್ನಿ ಟೆಸ್ಟ್ ಆರಂಭವಾಗಲಿದ್ದು, ಈ ಪಂದ್ಯ ಐದು ದಿನಗಳ ಕಾಲ ಮುಂದುವರಿದರೆ, ಜನವರಿ 7 ರೋಹಿತ್ ಶರ್ಮಾ ಅವರ ಟೆಸ್ಟ್ ವೃತ್ತಿಜೀವನದ ಕೊನೆಯ ದಿನವಾಗಬಹುದು ಎಂದು ಹೇಳಲಾಗುತ್ತಿದೆ.

**ಸಿಡ್ನಿಯಲ್ಲಿ ರೋಹಿತ್ ಕೊನೆಯ ಟೆಸ್ಟ್**

ಟೈಮ್ಸ್ ಆಫ್ ಇಂಡಿಯಾದ ವರದಿಯ ಪ್ರಕಾರ, ಬಿಸಿಸಿಐ ಮತ್ತು ಆಯ್ಕೆಗಾರರು ರೋಹಿತ್ ಶರ್ಮಾ ನಿವೃತ್ತಿಯ ಬಗ್ಗೆ ಮಾತನಾಡಲು ಪ್ರಾರಂಭಿಸಿದ್ದಾರೆ. ಆದರೆ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಆಯ್ಕೆಗಾರರ ಮನವೊಲಿಸಲು ಪ್ರಯತ್ನಿಸುತ್ತಿದ್ದಾರೆ. ರೋಹಿತ್ ಶರ್ಮಾ ವಾಸ್ತವವಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಆಡಲು ಬಯಸುತ್ತಾರೆ. ಒಂದು ವೇಳೆ ಟೀಂ ಇಂಡಿಯಾ ಡಬ್ಲ್ಯುಟಿಸಿ ಫೈನಲ್‌ಗೆ ಅರ್ಹತೆ ಪಡೆದರೆ ಆ ಪಂದ್ಯದ ಬಳಿಕ ರೋಹಿತ್ ಶರ್ಮಾ ನಿವೃತ್ತಿ ಘೋಷಿಸುವುದು ಖಚಿತವಾಗಿದೆ. ಆದರೆ ಟೀಂ ಇಂಡಿಯಾ ಫೈನಲ್‌ಗೇರುವ ಸಾಧ್ಯತೆ ತೀರ ಕಡಿಮೆ ಇರುವ ಕಾರಣ ಸಿಡ್ನಿ ಟೆಸ್ಟ್ ರೋಹಿತ್ ಅವರ ಕೊನೆಯ ಟೆಸ್ಟ್ ಪಂದ್ಯವಾಗಬಹುದು. ಮೆಲ್ಬೋರ್ನ್ ಟೆಸ್ಟ್ ಸೋಲಿನ ಬೆನ್ನಲ್ಲೇ ರೋಹಿತ್ ಶರ್ಮಾ ಕುರಿತು ಈ ವರದಿ ಬಂದಿರುವುದು ದೊಡ್ಡ ವಿಷಯ. ಮೆಲ್ಬೋರ್ನ್ ಟೆಸ್ಟ್‌ನಲ್ಲಿ ಟೀಂ ಇಂಡಿಯಾ 184 ರನ್‌ಗಳ ಸೋಲು ಕಂಡಿದೆ. ವಾಸ್ತವವಾಗಿ ಟೀಂ ಇಂಡಿಯಾಕ್ಕೆ ಈ ಟೆಸ್ಟ್ ಅನ್ನು ಡ್ರಾ ಮಾಡಿಕೊಳ್ಳಲು ಸಾಕಷ್ಟು ಅವಕಾಶವಿತ್ತು. ಟೀ ವಿರಾಮದವರೆಗೂ ಭಾರತ ತಂಡ ಕೇವಲ 3 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆದರೆ ಇದಾದ ನಂತರ ರಿಷಬ್ ಪಂತ್ ಕೆಟ್ಟ ಹೊಡೆತವನ್ನು ಆಡಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಾಲಂಗೋಚಿಗಳ ಪೆವಿಲಿಯನ್ ಪರೇಡ್ ಆರಂಭವಾದ ಕಾರಣ ತಂಡ 155 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಯಶಸ್ವಿ ಜೈಸ್ವಾಲ್ 84 ರನ್ ಗಳಿಸಿದನ್ನು ಬಿಟ್ಟರೆ ಉಳಿದವರಿಂದ ಅದೇ ಸಪ್ಪೆ ಪ್ರದರ್ಶನ ಕಂಡುಬಂತು.

**ರೋಹಿತ್ ಶರ್ಮಾ ಕಳಪೆ ಫಾರ್ಮ್**

ಆಸ್ಟ್ರೇಲಿಯ ಪ್ರವಾಸದಲ್ಲಿ ನಾಯಕ ರೋಹಿತ್ ಶರ್ಮಾಗೆ ಇದುವರೆಗೆ ಒಂದೇ ಒಂದು ಒಳ್ಳೆಯ ಇನ್ನಿಂಗ್ಸ್ ಆಡಲು ಸಾಧ್ಯವಾಗಿಲ್ಲ. ಈ ಸರಣಿಯಲ್ಲಿ 3 ಪಂದ್ಯಗಳನ್ನಾಡಿರುವ ರೋಹಿತ್ ಕೇವಲ 31 ರನ್ ಗಳಿಸಲಷ್ಟೇ ಶಕ್ತರಾಗಿದ್ದಾರೆ. ರೋಹಿತ್ ರನ್ ಕಲೆಹಾಕುವುದಿರಲಿ ಅವರಿಗೆ ಕ್ರೀಸ್‌ನಲ್ಲಿ ಸಮಯ ಕಳೆಯ ಸಾಧ್ಯವಾಗುತ್ತಿಲ್ಲ.



# ಪ್ರತಿಷ್ಠಿತ ಪ್ರಶಸ್ತಿಗೆ ಜಸ್ಪ್ರೀತ್ ಬುಮ್ರಾ

2024ರಲ್ಲಿ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿರುವ ಜಸ್ಪ್ರೀಟ್ ಬುಮ್ರಾ ಅವರು ಐಸಿಸಿ ವರ್ಷದ ಅತ್ಯುತ್ತಮ ಕ್ರಿಕೆಟಿಗ ಮತ್ತು ವರ್ಷದ ಅತ್ಯುತ್ತಮ ಟೆಸ್ಟ್ ಕ್ರಿಕೆಟಿಗ ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡಿದ್ದಾರೆ. ಈ ವರ್ಷ ಟೆಸ್ಟ್ ಮತ್ತು ಟಿ20 ಕ್ರಿಕೆಟ್‌ನಲ್ಲಿ ಅದ್ಭುತ ಸಾಧನೆ ಮಾಡಿದ ಬುಮ್ರಾ, 71 ಟೆಸ್ಟ್ ವಿಕೆಟ್‌ಗಳನ್ನು ಪಡೆದು ಅಪ್ರತಿಮ ಪ್ರದರ್ಶನ ನೀಡಿದ್ದಾರೆ. ಆಸ್ಟ್ರೇಲಿಯಾದಲ್ಲಿ ತನ್ನ ಚಾಣಾಕ್ಷ ಬೌಲಿಂಗ್ ಮೂಲಕ ವಿಕೆಟ್‌ಗಳ ಮೂಟೆ ಕಟ್ಟುತ್ತಿರುವ ಟೀಂ ಇಂಡಿಯಾ ವೇಗಿ ಜಸ್ಪ್ರೀತ್ ಬುಮ್ರಾ ಈ ವರ್ಷ ಎಲ್ಲಾ ಮಾದರಿಯ ಕ್ರಿಕೆಟ್‌ನಲ್ಲೂ ಅದ್ಭುತ ಪ್ರದರ್ಶನ ನೀಡುತ್ತಿದ್ದಾರೆ. ಅಲ್ಲದೆ ಈ ವರ್ಷದ ಕೊನೆಯ ಪಂದ್ಯದಲ್ಲೂ ತಮ್ಮ ಮ್ಯಾಜಿಕ್ ತೋರಿದ ಬುಮ್ರಾ, ಒಟ್ಟು 9 ವಿಕೆಟ್ ಪಡೆಯುವ ಮೂಲಕ ಈ ವರ್ಷವನ್ನು ಮುಗಿಸಿದ್ದಾರೆ. ಮೇಲೆ ಹೇಳಿದಂತೆ ಈ ಟೆಸ್ಟ್ ಮಾತ್ರವಲ್ಲದೆ ಈ ಇಡೀ ವರ್ಷ, ಬುಮ್ರಾ ಪ್ರತಿ ಪಂದ್ಯದಲ್ಲೂ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ . ಈ ಅದ್ಭುತ ಪ್ರದರ್ಶನದ ಫಲವಾಗಿ ಇದೀಗ ಬುಮ್ರಾ ಅವರನ್ನು ಐಸಿಸಿ ಅತಿದೊಡ್ಡ ಪ್ರಶಸ್ತಿಗೆ ನಾಮನಿರ್ದೇಶನ ಮಾಡಿದೆ. ವರ್ಷದ ಅತ್ಯುತ್ತಮ ಕ್ರಿಕೆಟಿಗನಿಗೆ ನೀಡುವ ಸರ್ ಗಾರ್ಫೀಲ್ಡ್ ಸೋಬರ್ಸ್ ಟ್ರೋಫಿಗೆ ಬುಮ್ರಾ ಅವರನ್ನು ಶಾರ್ಟ್‌ಲಿಸ್ಟ್ ಮಾಡಲಾಗಿದೆ. ಬಾರ್ಡರ್-ಗವಾಸ್ಕರ್ ಟ್ರೋಫಿಯಲ್ಲಿ ಬುಮ್ರಾ ಪ್ರತಿ ಪಂದ್ಯದಲ್ಲೂ ತಮ್ಮ ಪ್ರದರ್ಶನವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯುತ್ತಿದ್ದಾರೆ. ಪರ್ತ್, ಅಡಿಲೇಡ್ ಮತ್ತು ಬ್ರಿಸ್ಬೇನ್ ನಂತರ, ಇದೀಗ ಮೆಲ್ಬೋರ್ನ್‌ನಲ್ಲಿಯೂ ಬುಮ್ರಾ ಆಸ್ಟ್ರೇಲಿಯಾದ ಬ್ಯಾಟ್ಸ್‌ಮನ್ ಗಳಿಗೆ ಸಿಂಹಸ್ವಪ್ನವಾಗಿದ್ದರು. ಅವರ ಪ್ರದರ್ಶನದಿಂದ ಟೀಂ ಇಂಡಿಯಾವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗದಿದ್ದರೂ, ಸ್ಟಾರ್ ಬೌಲರ್ ತಮ್ಮ ಅತ್ಯುತ್ತಮ ಪ್ರದರ್ಶನದಿಂದ ಇಡೀ ವಿಶ್ವಕ್ರಿಕೆಟ್‌ನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.




# ದಾಖಲೆ ಬರೆದ ಜೈಸ್ವಾಲ್

ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ 4ನೇ ಪಂದ್ಯದಲ್ಲಿ ಬ್ಯಾಕ್ ಟು ಬ್ಯಾಕ್ ಅರ್ಧಶತಕ ಸಿಡಿಸುವ ಮೂಲಕ ಯಶಸ್ವಿ ಜೈಸ್ವಾಲ್ ವಿಶೇಷ ದಾಖಲೆ ಬರೆದಿದ್ದಾರೆ. ಅದು ಕೂಡ ಮೆಲ್ಬೋರ್ನ್ ಮೈದಾನದಲ್ಲಿ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಹಾಗೂ ವಿರಾಟ್ ಕೊಹ್ಲಿ ಬರೆದ ವಿಶೇಷ ದಾಖಲೆಯನ್ನು ಸರಿಗಟ್ಟುವ ಮೂಲಕ ಎಂಬುದು ವಿಶೇಷ. ಮೆಲ್ಬೋರ್ನ್‌ನ ಎಂಸಿಜಿ ಮೈದಾನದಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ 4ನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾದ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಆಕರ್ಷಕ ಅರ್ಧಶತಕ ಬಾರಿಸಿ ಮಿಂಚಿದ್ದಾರೆ. ಈ ಪಂದ್ಯದ ದ್ವಿತೀಯ ಇನಿಂಗ್ಸ್‌ನಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದ ಜೈಸ್ವಾಲ್ 207 ಎಸೆತಗಳಲ್ಲಿ 84 ರನ್ ಬಾರಿಸಿದರು. ಇದಕ್ಕೂ ಮುನ್ನ ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಯಶಸ್ವಿ ಜೈಸ್ವಾಲ್ 118 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 11 ಫೋರ್‌ಗಳೊಂದಿಗೆ 82 ರನ್ ಬಾರಿಸಿದ್ದರು. ಈ ಮೂಲಕ ಮೆಲ್ಬೋರ್ನ್ ಪಿಚ್‌ನ ಎರಡೂ ಇನಿಂಗ್ಸ್‌ಗಳಲ್ಲೂ 50+ ರನ್ ಕಲೆಹಾಕಿದ ಭಾರತದ ಮೂರನೇ ಬ್ಯಾಟರ್ ಎನಿಸಿಕೊಂಡರು. ಈ ಹಿಂದೆ ಸಚಿನ್ ತೆಂಡೂಲ್ಕರ್ (1999) ಹಾಗೂ ವಿರಾಟ್ ಕೊಹ್ಲಿ (2014) ಇದೇ ಮೈದಾನದಲ್ಲಿ ನಡೆದ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ 50+ ರನ್‌ಗಳಿಸಿ ವಿಶೇಷ ದಾಖಲೆ ಬರೆದಿದ್ದರು. ಇದೀಗ 10 ವರ್ಷಗಳ ಬಳಿಕ ಯಶಸ್ವಿ ಜೈಸ್ವಾಲ್ ಈ ದಾಖಲೆಯನ್ನು ಪುನರಾವರ್ತಿಸಿದ್ದಾರೆ. ಇನ್ನು ಈ ಅರ್ಧಶತಕದೊಂದಿಗೆ ಈ ವರ್ಷ ಟೆಸ್ಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಯಶಸ್ವಿ ಜೈಸ್ವಾಲ್ ದ್ವಿತೀಯ ಸ್ಥಾನಕ್ಕೇರಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966